12ನೇ ವಾರ್ಷಿಕ ವರದಿ

ANNUAL REPORT

2017-18

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

Karnataka Maharshi Valmiki Scheduled Tribes Development Corporation Limited

ಕರ್ನಾಟಕ ಮಹರ್ಷಿ ವಾಲ್ಮೀಕಿ

ಪರಿಶಿಷ್ಟ ಪಂಗಡಗಳ

ಅಭಿವೃದ್ಧಿ

ನಿಗಮ ನಿಯಮಿತ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

12 ನೇ ವಾರ್ಷಿಕ ವರದಿ

2017–18

ನೋಂದಾಯಿತ ಕಛೇರಿ :
ನಂ.10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ,
ವಸಂತನಗರ, ಬೆಂಗಳೂರು –560052

ಪರಿವಿಡಿ

ನಿರ್ದೇಶಕರುಗಳ ಮಂಡಳಿ:

ಕ್ರ..ಸಂ.	ಹೆಸರು	ಹುದ್ದೆ
1	ಶ್ರೀ ಜಿ. ಕುಮಾರ್ ನಾಯಕ್. ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ	ಅಧ್ಯಕ್ಷರು
2	ಶ್ರೀ ಸಂಗಪ್ಪ. ಕ.ಆ.ಸೇ. ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.	ನಿರ್ದೇಶಕರು
3	ಶ್ರೀ ಹನುಮನರಸಯ್ಯ. ಎ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ.	ವ್ಯವಸ್ಥಾಪಕ ನಿರ್ದೇಶಕರು
4	ಶ್ರೀ ಡಿ.ಎಸ್. ಸುದರ್ಶನ್ ಕುಮಾರ್. ಸರ್ಕಾರದ ಉಪ ಕಾರ್ಯದರ್ಶಿಗಳು, (ಕಲ್ಯಾಣ). ಆರ್ಥಿಕ ಇಲಾಖೆ. ಕರ್ನಾಟಕ ಸರ್ಕಾರ.	ನಿರ್ದೇಶಕರು
5	ಶ್ರೀಮತಿ ಸಿ. ಹೇಮಲತಾ. ಸರ್ಕಾರದ ಉಪ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ.	ನಿರ್ದೇಶಕರು
6	ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ	ನಿರ್ದೇಶಕರು
7	ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಪ್ರತಿನಿಧಿ ಭಾರತ ಸರ್ಕಾರ	ನಿರ್ದೇಶಕರು

ಲೆಕ್ಕಪರಿಶೋಧಕರು : ಮೆ. ಬಿ ಎಸ್ ಡಿ ಅಂಡ್ ಕೋ,
ಚಾರ್ಟರ್ಡ್ ಅಕೌಂಟೆಂಟ್ಸ್
ಜಯನಗರ, ಬೆಂಗಳೂರು-11.

ಕಂಪನಿ ಕಾರ್ಯದರ್ಶಿ : ಶ್ರೀ ಸುರೇಶ್ ಭಾರದ್ವಜ್
ನಂ.106, 25ನೇ ಅಡ್ಡ ರಸ್ತೆ, 6ನೇ ವಿಭಾಗ,
ಜಯನಗರ, ಬೆಂಗಳೂರು-70.

ಸಭಾ ಸೂಚನ ಪತ್ರ

ಕರ್ನಾಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ 12ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು, ನಿಗಮದ ಕೇಂದ್ರ ಕಛೇರಿಯ ಕಟ್ಟಡದಲ್ಲಿ 23ನೇ ಸೆಪ್ಟೆಂಬರ್ 2019 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ಎಲ್ ಜಿ ಹಾವನೂರು ಸಭಾಂಗಣ, ಕ ಮ ವಾ ಪ ಪಂ ಅ ನಿ ನಿ, ನಂ.10, 3ನೇ ಮಹಡಿ, ಖಾದಿ ಭವನ, ಜಸ್ಮಾ ದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–52 ಇಲ್ಲಿ ನಿಗದಿಪಡಿಸಲಾಗಿದ್ದು, ಈ ಕೆಳಗಿನ ವ್ಯವಹಾರಗಳನ್ನು ವ್ಯವಹರಿಸುವ ಉದ್ದೇಶಕ್ಕಾಗಿ ನಡೆಸಲಾಗುವುದು ಎಂಬುದಾಗಿ ಈ ಮೂಲಕ ಸಭೆಗೆ ಸೂಚನೆಯನ್ನು ನೀಡಲಾಗಿದೆ.

ಸಾಮಾನ್ಯ ವ್ಯವಹಾರಗಳು,

1. 31ನೇ ಮಾರ್ಚ್ 2018 ರಲ್ಲಿದ್ದಂತೆ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಹಣಕಾಸು ತ:ಖ್ತೆಗಳನ್ನು ನಿರ್ದೇಶಕರುಗಳ ವರದಿ, ಶಾಸನ ಬದ್ದ ಲೆಕ್ಕಪರಿಶೋಧಕರ ವರದಿ ಹಾಗೂ ಅವುಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳ ಜೊತೆಯಲ್ಲಿ ಸ್ವೀಕರಿಸುವುದು, ಪರಿಗಣಿಸುವುದು ಹಾಗೂ ಅಳವಡಿಸಿಕೊಳ್ಳುವುದು.

2. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ 2018–19ನೇ ಸಾಲಿಗೆ ಆಗಿರುವಂತಹ ಲೆಕ್ಕಪರಿಶೋಧಕರುಗಳ ನೇಮಕವನ್ನು ಗಣನೆಗೆ / ಗಮನಕ್ಕೆ ತೆಗೆದುಕೊಳ್ಳುವುದು ಹಾಗೂ ಆ ಲೆಕ್ಕಪರಿಶೋಧಕರುಗಳ ಸಂಭಾವನೆಯನ್ನು ನಿಗದಿಗೊಳಿಸುವುದು.

ಮಂಡಳಿಯ ಆದೇಶದ ಮೇರೆಗೆ

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

ಸ್ಥಳ: ಬೆಂಗಳೂರು

ದಿನಾಂಕ: 12.09.2019.

ಟಿಪ್ಪಣಿಗಳು.

1. ಮತ ಚಲಾಯಿಸಲು ಅರ್ಹತೆಯನ್ನು ಹೊಂದಿರುವ ಓರ್ವ ಸದಸ್ಯರು ಹಾಜರಾಗುವ ಸಲುವಾಗಿ ಹಾಗೂ ಮತ ಚಲಾಯಿಸಬೇಕಾದ ಸಂದರ್ಭಗಳಲ್ಲಿ ಮತ ಚಲಾಯಿಸುವ ಸಲುವಾಗಿ ತಮ್ಮ ಪರವಾಗಿ ಓರ್ವ ಅಧಿಕೃತ ಪ್ರತಿನಿಧಿಯನ್ನು ನೇಮಕ ಮಾಡುವ ಅರ್ಹತೆಯನ್ನು ಹೊಂದಿರುತ್ತಾರೆ. ಓರ್ವ ಅಧಿಕೃತ ಪ್ರತಿನಿಧಿಯ ಅರ್ಹತೆಯು ಜಾರಿಯಲ್ಲಿರುವುದಕ್ಕಾಗಿ ಸಭೆಯು ಪ್ರಾರಂಭಗೊಳ್ಳುವುದಕ್ಕೆ 48 ಗಂಟೆಗಳ ಮುಂಚಿತವಾಗಿ ಕಂಪನಿಯ ನೊಂದಾಯಿತ ಕಛೇರಿಯಲ್ಲಿ ಅವರು ನೊಂದಾಯಿಸಿಕೊಳ್ಳತಕ್ಕದ್ದು.

2. ಶಾಸನ ಬದ್ದ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಅಧಿಕಾರವನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹೊಂದಿರುತ್ತಾರೆ.

ನಿರ್ದೇಶಕರುಗಳ ಮಂಡಳಿಯ ವರದಿ

ಸದಸ್ಯರುಗಳಿಗೆ

ಕಂಪನಿಯ 31 ಮಾರ್ಚ್ 2018 ಕ್ಕೆ ಅಂತ್ಯಗೊಂಡ ಸಾಲಿನ ಲೆಕ್ಕಪರಿಶೋಧನೆ ಮಾಡಲ್ಪಟ್ಟಿರುವಂತಹ ಲೆಕ್ಕಪತ್ರಗಳ ತ:ಖ್ತೆಗಳ ಜೊತೆಯಲ್ಲಿ 12ನೇ ವಾರ್ಷಿಕ ವರದಿಯನ್ನು ನಿಮ್ಮ ಮುಂದೆ ಮಂಡಿಸುತ್ತಿರುವುದಕ್ಕೆ ನಿಮ್ಮ ನಿರ್ದೇಶಕರುಗಳ ಮಂಡಳಿಯು ಅತೀವ ಸಂತಸವನ್ನು ವ್ಯಕ್ತಪಡಿಸುತ್ತಿದೆ.

1. ವಿತ್ತೀಯ/ಹಣಕಾಸು ಸಂಬಂಧಿತ ಫಲಿತಾಂಶಗಳು

ಹಿಂದಿನ ಸಾಲಿನವುಗಳಿಗೆ ಹೋಲಿಸಿದಂತೆ ಸಮೀಕ್ಷೆಯ ಅಡಿಯಲ್ಲಿನ ಕಂಪನಿಯ ಪ್ರಸಕ್ತ ಸಾಲಿನ ವಿತ್ತೀಯ/ಹಣಕಾಸು ಸಂಬಂಧಿತ ಕಾರ್ಯನಿರ್ವಹಣೆಗಳನ್ನು ಈ ಕೆಳಗೆ ನೀಡಲಾಗಿದೆ:

ವಿತ್ತೀಯ/ಹಣಕಾಸು ಸಂಬಂಧಿತ ಫಲಿತಾಂಶಗಳು:

(ರೂ. ಲಕ್ಷಗಳಲ್ಲಿ)

ವಿವರಗಳು	2017–18	2016–17
ಬಡ್ಡಿ ಹಾಗೂ ಸವಕಳಿಗಳಿಗೆ ಮುಂಚಿನ ಲಾಭ	**3085.26**	3712.64
ಕಳೆಯಿರಿ: ಬಡ್ಡಿ ಹಾಗೂ ಸವಕಳಿ	**192.41**	349.31
ಪ್ರಸಕ್ತ ಸಾಲಿನ ಲಾಭ	**2892.85**	3363.33
ಅಸಾಧಾರಣ ಬಾಬ್ತುಗಳು (ಪೂರ್ವಾವಧಿಯ ಹೊಂದಾಣಿಕೆಗಳೂ ಸೇರಿದಂತೆ)	–	(16.75)
ಹೊಂದಾಣಿಕೆಗಳ ನಂತರ ಲಾಭ	**2892.85**	3346.59
ಈ ಹಿಂದಿನ ಹಣಕಾಸು ತ:ಖ್ತೆಗಳ ಪ್ರಕಾರ ಕಾದಿರಿಸಿರುವಿಕೆಗಳು ಮತ್ತು ಮಿಗುತಾಯಗಳು	**12068.65**	8722.06
ಕೂಡಿರಿ: ಪ್ರಸಕ್ತ ಸಾಲಿನ ಲಾಭ	**2892.85**	3346.59
ಒಟ್ಟಾರೆ ಕಾದಿರಿಸಿರುವಿಕೆಗಳು ಹಾಗೂ ಮಿಗುತಾಯಗಳು	**14961.50**	**12068.65**

2. ಷೇರು ಲಾಭಾಂಶ

ಗಳಿಸಲಾದಂತಹ ಲಾಭಗಳನ್ನು ರಾಜ್ಯದಲ್ಲಿನ ಪರಿಶಿಷ್ಟ ಪಂಗಡಗಳ ಸಮುದಾಯಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯತ್ತ ಗುರಿಯಾಗಿಸಿಕೊಳ್ಳಲಾಗಿರುವಂತಹ ವಿವಿಧ ಯೋಜನೆಗಳ ರೂಪದಲ್ಲಿ ನಿಗಮದ ಕಾರ್ಯಾಚರಣೆಗಳಲ್ಲಿ ತೊಡಗಿಸಲಾಗಿರುವುದರಿಂದ ಪ್ರಸಕ್ತ ಹಣಕಾಸು ಸಾಲಿಗೆ ಯಾವುದೇ ಷೇರು ಲಾಭಾಂಶವನ್ನೂ ಘೋಷಿಸಲಾಗಿರುವುದಿಲ್ಲ.

3. ಪಾವತಿಗಾಗಿ ಕೋರದಿರುವಂತಹ ಷೇರು ಲಾಭಾಂಶವನ್ನು ಹೂಡಿಕೆದಾರರ ಶಿಕ್ಷಣ ಹಾಗೂ ಸಂರಕ್ಷಣಾ ನಿಧಿಗೆ ವರ್ಗಾಯಿಸುವುದರ ಬಗ್ಗೆ–

ಹಿಂದಿನ ಸಾಲಿನಲ್ಲಿ ಯಾವುದೇ ಷೇರು ಲಾಭಾಂಶವನ್ನೂ ಘೋಷಿಸಿರಲಿಲ್ಲವಾದ್ದರಿಂದ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 125(2)ರ ಅನುವುಗಳು ಅನ್ವಯಗೊಳ್ಳುವುದಿಲ್ಲ

4. ವ್ಯವಹಾರ ಕಾರ್ಯಾಚರಣೆಗಳು ಹಾಗೂ ಭವಿಷ್ಯದ ನಿರೀಕ್ಷೆಗಳ ಸಮೀಕ್ಷೆ

ಸಮೀಕ್ಷೆಯ ಅಡಿಯಲ್ಲಿನ ಪ್ರಸಕ್ತ ಸಾಲಿನಲ್ಲಿ ನಡೆಸಲಾದಂತಹ ವ್ಯವಹಾರ ಕಾರ್ಯಾಚರಣೆಗಳ ವಿವರಗಳನ್ನು ಪ್ರಸ್ತುತಪಡಿಸಲು ನಿಮ್ಮ ನಿರ್ದೇಶಕರುಗಳು ಇಚ್ಛಿಸುತ್ತಾರೆ.

2017–18 ಸಾಲಿನಲ್ಲಿ, ನಿಗಮವು ಈ ಕೆಳಗೆ ವಿವರಿಸಿರುವಂತೆ ವಿವಿಧ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಪಂಗಡಗಳ ಪ್ರವರ್ಗದವರಿಗೆ ಸಂಬಂಧಿಸಿದಂತೆ **40072** ಫಲಾನುಭವಿಗಳಿಗೆ ವಿವಿಧ ರೀತಿಯ ಸಹಾಯಗಳನ್ನು ನೀಡಲಾಗಿರುತ್ತದೆ:

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಸಹಾಯವನ್ನು ನೀಡಲ್ಪಟ್ಟಂತಹ ಫಲಾನುಭವಿಗಳ ಸಂಖ್ಯೆ	ವಿತರಿಸಲಾದಂತಹ ಹಣಕಾಸು			ಒಟ್ಟು
			ಸಹಾಯಧನ	ಅಂಚಿನ ಹಣ	ಅವಧಿ ಸಾಲ	
1.	ಗಂಗಾಕಲ್ಯಾಣ ಯೋಜನೆ ಎ) ವೈಯಕ್ತಿಕ ನೀರಾವರಿ ಕೊಳವೆ ಬಾವಿ	6957	9672.90	0.00	246.69	9919.59
	ಬಿ)ಸಮುದಾಯ/ಏತ ನೀರಾವರಿ ಯೋಜನೆ	128	122.48	0.00	0.00	122.48
	ಸಿ)ಕೊಳವೆ ಬಾವಿಗಳ ವಿದ್ಯುದೀಕರಣ	(3886)	3000.00	0.00	0.00	3000.00
2.	ಭೂ ಒಡೆತನ ಯೋಜನೆ	125	515.70	0.00	516.47	1032.17
3.	ಸ್ವಯಂ ಉದ್ಯೋಗ ಯೋಜನೆ	3613	1264.60	0.00	0.00	1264.60
4.	ಉದ್ಯಮಶೀಲತಾ ಅಭಿವೃದ್ಧಿ ಯೋಜನೆ	986	4190.07	0.00	0.00	4190.07
5.	ಮೈಕ್ರೋ ಕ್ರೆಡಿಟ್ ಯೋಜನೆ	10406	1090.82	545.49	0.00	1636.31
6.	ಪ್ರವಾಸಿ ಟ್ಯಾಕ್ಸಿ.	1246	3738.00	0.00	0.00	3738.00
7.	ಸ್ವಯಂ ಉದ್ಯೋಗ ಯೋಜನೆಯಡಿ ವೃತ್ತಿ ಕೌಶಲ್ಯ ಹೊಂದಿದವರಿಗಾಗಿ.	486	1215.00	0.00	0.00	1215.00
8.	ನೇರ ಸಾಲ (ಕುರಿ, ಕೋಳಿ, ಮೇಕೆ ಸಾಕಾಣಿಕೆ)	16125	4031.25	0.00	2418.75	6450.00
	ಒಟ್ಟು	**40072**	**28840.82**	**545.49**	**3181.91**	**32568.22**

ಗಂಗಾ ಕಲ್ಯಾಣ ಯೋಜನೆ:

ಎ) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

ಸಣ್ಣ ಹಾಗೂ ಅತೀ ಸಣ್ಣ ಪರಿಶಿಷ್ಟ ಪಂಗಡಗಳ ರೈತರಿಗೆ ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳನ್ನು ಪಂಪುಸೆಟ್ಟುಗಳ ಜೊತೆಯಲ್ಲಿ ಒದಗಿಸಲಾಗುವುದು. ಈ ಯೋಜನೆಯ ಅಡಿಯಲ್ಲಿ, ಘಟಕ ವೆಚ್ಚವು ರೂ.2,00,000/– ಆಗಿರುತ್ತದೆ ಹಾಗೂ ಅದರ ಪೈಕಿ ರೂ.1,50,000/–ದಷ್ಟನ್ನು ಸಹಾಯಧನವನ್ನಾಗಿ ಹಾಗೂ ರೂ.50,000/–ವನ್ನು ಅವಧಿ ಸಾಲವನ್ನಾಗಿ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 6957 ವೈಯಕ್ತಿಕ ನೀರಾವರಿ ಕೊಳವೆಬಾವಿಗಳನ್ನು ಕೊರೆಯುವುದಕ್ಕಾಗಿ ರೂ. 12672.90 ಲಕ್ಷ ಮೊತ್ತದಷ್ಟು ಸಹಾಯಧನ ಹಾಗೂ ರೂ.246.69 ಲಕ್ಷ ಮೊತ್ತದಷ್ಟು ಅವಧಿ ಸಾಲವನ್ನು ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 3886 ಕೊಳವೆಬಾವಿಗಳನ್ನು ವಿದ್ಯುದೀಕರಣಗೊಳಿಸಲಾಗಿದೆ.

ಬಿ) ಏತ ನೀರಾವರಿ ಯೋಜನೆ

ಈ ಯೋಜನೆಯ ಅಡಿಯಲ್ಲಿ, ಭೂಮಿಯನ್ನು ಹೊಂದಿರುವ ಪರಿಶಿಷ್ಟ ಪಂಗಡದ ರೈತರಿಗೆ 8 ರಿಂದ 15 ಎಕರೆಗಳಷ್ಟು ಭೂಮಿಗೆ, ಸಾರ್ವಕಾಲಿಕ ನದಿಗಳು, ತೊರೆಗಳು, ಇತ್ಯಾದಿಗಳಿಂದ ಏತ ನೀರಾವರಿ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗುವುದು. ಘಟಕ ವೆಚ್ಚವನ್ನು 8 ಎಕರೆಗೆ ರೂ.4.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, 15 ಎಕರೆಗಳಿಗೆ ರೂ.6.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ. ನಿಗಮವು ಪ್ರಸಕ್ತ ಸಾಲಿನಲ್ಲಿ 128 ವೈಯಕ್ತಿಕ ಏತ ನೀರಾವರಿ ಘಟಕಗಳಿಗೆ ರೂ.122.48 ಲಕ್ಷ ಮೊತ್ತದಷ್ಟು ಸಹಾಯಧನ ನೀಡಲಾಗಿರುತ್ತದೆ.

ಭೂ ಒಡೆತನ ಯೋಜನೆ

ಭೂ ಒಡೆತನ ಯೋಜನೆಯ ಅಡಿಯಲ್ಲಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದು ಹಾಗೂ ಭೂಮಿಯನ್ನು ಹೊಂದಿರದ ಕೃಷಿ ಕಾರ್ಮಿಕರಿಗೆ ಕನಿಷ್ಠ 2.00 ಎಕರೆಗಳಷ್ಟು ಖುಷ್ಕಿ ಭೂಮಿಯನ್ನು ಹಾಗೂ 1.00 ಎಕರೆಯಷ್ಟು ತರಿ ಭೂಮಿಯನ್ನು ಖರೀದಿಸುವ ಸಲುವಾಗಿ, ಸಾಲ ಹಾಗೂ ಸಹಾಯಧನದ ರೂಪದಲ್ಲಿ ಹಣಕಾಸಿನ ಸಹಾಯವನ್ನು ಒದಗಿಸಲಾಗುವುದು. ಈ ಯೋಜನೆಯ ಅಡಿಯಲ್ಲಿ ಗರಿಷ್ಠ ಘಟಕ ವೆಚ್ಚವು, ಅನುಕ್ರಮವಾಗಿ ಸಹಾಯಧನ ಮತ್ತು ಅವಧಿ ಸಾಲಗಳ ಅನುಪಾತವು 50:50 ದರದಲ್ಲಿ ರೂ.10.00 ಲಕ್ಷ ಆಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 60.10 ಎಕರೆಗಳಷ್ಟು ಖುಷ್ಕಿ ಭೂಮಿಯನ್ನು ಹಾಗೂ 74.23 ಎಕರೆಗಳಷ್ಟು ತರಿ ಭೂಮಿಯನ್ನು

ಖರೀದಿಸಲಾಗಿದೆ ಹಾಗೂ ರೂ.515.70 ಲಕ್ಷ ಮೊತ್ತದಷ್ಟು ಸಹಾಯಧನ ಹಾಗೂ ರೂ.516.47 ಲಕ್ಷ ಮೊತ್ತದಷ್ಟು ಅವಧಿ ಸಾಲಗಳ ರೂಪದಲ್ಲಿ ವೆಚ್ಚವನ್ನು ಭರಿಸುವುದರೊಂದಿಗೆ 125 ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿರುತ್ತದೆ.

ಸ್ವಯಂ ಉದ್ಯೋಗ ಯೋಜನೆ

ನಿಗಮವು, ಸ್ವಯಂ ಉದ್ಯೋಗ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕಾಗಿ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಮೂಲಕ ಹಣಕಾಸಿನ ನೆರವನ್ನು ಒದಗಿಸುತ್ತದೆ. ಈ ಯೋಜನೆಯನ್ನು ಪ್ರಮುಖವಾಗಿ, ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ವ್ಯಕ್ತಿಗಳಿಗೆ, ಹಣಕಾಸಿನ ಗಳಿಕೆಯನ್ನು ಮಾಡುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಅವರುಗಳ ಆರ್ಥಿಕ ಸ್ಥಿತಿಗತಿಯನ್ನು ಉತ್ತಮಗೊಳಿಸುವ ಉದ್ದೇಶದಿಂದ ರೂಪಿಸಲಾಗಿದೆ. ರೂ.1,00,000/– ದವರೆಗಿನ ಯೋಜನಾ ವೆಚ್ಚಕ್ಕೆ, ನಿಗಮವು ಶೇ.50 ರಷ್ಟು ಸಹಾಯಧನವನ್ನು ಗರಿಷ್ಠ ರೂ.35,000/– ರವರೆಗೆ ನೀಡಲಾಗುವುದು ಹಾಗೂ ಉಳಿದ ಮೊತ್ತವನ್ನು ಬ್ಯಾಂಕುಗಳಿಂದ ಸಾಲವನ್ನು ಪಡೆಯಲಾಗುವುದು. ಪ್ರಸಕ್ತ ಸಾಲಿನಲ್ಲಿ 3613 ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ರೂ.1264.60 ಲಕ್ಷ ಮೊತ್ತದಷ್ಟು ಸಹಾಯಧನವನ್ನು ನೀಡಲಾಗಿರುತ್ತದೆ.

ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:

ಈ ಯೋಜನೆಯಲ್ಲಿ ಉದ್ಯಮಶೀಲತಾ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕಾಗಿ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಮೂಲಕ ಹಣಕಾಸಿನ ನೆರವನ್ನು ಒದಗಿಸುತ್ತದೆ. ಈ ಯೋಜನೆಯನ್ನು ಪ್ರಮುಖವಾಗಿ, ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ವ್ಯಕ್ತಿಗಳಿಗೆ, ಹಣಕಾಸಿನ ಗಳಿಕೆಯನ್ನು ಮಾಡುವಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಅವರುಗಳ ಆರ್ಥಿಕ ಸ್ಥಿತಿಗತಿಯನ್ನು ಉತ್ತಮಗೊಳಿಸುವ ಉದ್ದೇಶದಿಂದ ರೂಪಿಸಲಾಗಿದೆ. ಉದಾ: ಸಣ್ಣ ಕೈಗಾರಿಕೆಗಳು, ಸಾರಿಗೆ ವಾಹನಗಳು, ಕುರಿ, ಕೋಳಿ, ಮೇಕೆ, ಚರ್ಮ ಕೈಗಾರಿಕೆ, ವಕೀಲರ ಕಛೇರಿ, ಬ್ಯೂಟಿ ಪಾರ್ಲರ್, ರೆಡಿಮೇಡ್ ಗಾರ್ಮೆಂಟ್ಸ್, ಡಿ ಟಿ ಪಿ ಸೆಂಟರ್ ತೆರೆಯಲು ಈ ಯೋಜನೆಯಡಿ ಘಟಕ ವೆಚ್ಚವು ರೂ.20.00 ಲಕ್ಷಗಳವರೆಗೆ ಇತುತ್ತದೆ.

ಘಟಕ ವೆಚ್ಚ	ಸಹಾಯದನ	ಷರಾ
ರೂ.1.00 ಲಕ್ಷದಿಂದ 5.00 ಲಕ್ಷದವರೆಗೆ	ಘಟಕ ವೆಚ್ಚ ಶೇ 70 ರಷ್ಟು ಅಥವಾ ಗರಿಷ್ಟ ರೂ.3.50 ಲಕ್ಷಗಳು	ಉಳಿಕೆ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.
ರೂ.5.00 ಲಕ್ಷದಿಂದ 10.00 ಲಕ್ಷದವರೆಗೆ	ಘಟಕ ವೆಚ್ಚ ಶೇ 60 ರಷ್ಟು ಅಥವಾ ಗರಿಷ್ಟ ರೂ.5.00 ಲಕ್ಷಗಳು	ಉಳಿಕೆ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.
ರೂ.10.00 ಲಕ್ಷದಿಂದ 20.00 ಲಕ್ಷದವರೆಗೆ	ಘಟಕ ವೆಚ್ಚ ಶೇ 50 ರಷ್ಟು ಅಥವಾ ಗರಿಷ್ಟ ರೂ.5.00 ಲಕ್ಷಗಳು	ಉಳಿಕೆ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ 986 ಫಲಾನುಭವಿಗಳಿಗೆ ರೂ.4190.07 ಲಕ್ಷ ಮೊತ್ತದಷ್ಟು ವೆಚ್ಚದೊಂದಿಗೆ ಸಹಾಯಧನವನ್ನು ನೀಡಲಾಗಿರುತ್ತದೆ.

ಮೈಕ್ರೋ ಕ್ರೆಡಿಟ್ ಯೋಜನೆ:

ಈ ಯೋಜನೆಯ ಅಡಿಯಲ್ಲಿ ಸಣ್ಣಪುಟ್ಟ ವ್ಯಾಪಾರವನ್ನು ಪ್ರಾರಂಭಿಸುವುದಕ್ಕಾಗಿ ಕೌಶಲ್ಯತೆಯನ್ನು ಹೊಂದಿರುವ ಅಥವಾ ಕೌಶಲ್ಯತೆಯನ್ನು ಹೊಂದಿರದ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರಿಗೆ ರೂ.15,000/– ದಷ್ಟು ಮೊತ್ತವನ್ನು ನೀಡಲಾಗುವುದು. ಈ ಯೋಜನೆಯ ಅಡಿಯಲ್ಲಿ ರೂ.10,000/–ದಷ್ಟು ಮೊತ್ತವನ್ನು ಸಹಾಯಧನವನ್ನಾಗಿ ಹಾಗೂ ರೂ.5,000/– ದಷ್ಟು ಮೊತ್ತವನ್ನು ಶೇ. 4ರ ಬಡ್ಡಿಯ ದರದಲ್ಲಿ ಸ್ವಸಹಾಯ ಗುಂಪುಗಳಿಗೆ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 10406 ಫಲಾನುಭವಿಗಳಿಗೆ ರೂ.1090.82 ಲಕ್ಷ ಮೊತ್ತದಷ್ಟು ಸಹಾಯಧನ ಹಾಗೂ ರೂ.545.49 ಲಕ್ಷ ಮೊತ್ತದಷ್ಟು ಅಂಚಿನ ಹಣ, ಈ ರೀತಿಯಾಗಿ ಒಟ್ಟಾರೆ ರೂ.1636.31 ಲಕ್ಷ ಒಟ್ಟಾರೆ ಮೊತ್ತದೊಂದಿಗೆ ಸಹಾಯಧನವನ್ನು ನೀಡಲಾಗಿರುತ್ತದೆ.

ಸ್ವಯಂ ಉದ್ಯೋಗ (ಪ್ರವಾಸಿ ಟ್ಯಾಕ್ಸಿ) ಯೋಜನೆ:–

ಈ ಯೋಜನೆಯಡಿ ವಾಹನ ಚಾಲನಾ ಪರವಾನಿಗಿ ಮತ್ತು ಬ್ಯಾಡ್ಜ್ ಹೊಂದಿರುವ ನಿರುದ್ಯೋಗಿ ಪರಿಶಿಷ್ಟ ಪಂಗಡದ ಫಲಾಪೇಕ್ಷಿಗಳಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಖರೀದಿಸಲು ರೂ.3.00 ಲಕ್ಷ ಮಿತಿ ಒಳಪಟ್ಟಂತೆ ಘಟಕ ವೆಚ್ಚದ ಶೇ.50 ರಷ್ಟನ್ನು ಸಹಾಯಧನವಾಗಿ ನಿಗಮದಿಂದ ನೀಡಲಾಗುವುದು. ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ. ದಿನಾಂಕ: 31.03.2018ಕ್ಕೆ ಅಂತ್ಯಗೊಂಡ 2017–18ನೇ ಸಾಲಿನಲ್ಲಿ ಸದರಿ ಯೋಜನೆಯಡಿ 1246 ಫಲಾನುಭವಿಗಳಿಗೆ ರೂ.3738.00 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿರುತ್ತದೆ.

ಸ್ವಯಂ ಉದ್ಯೋಗ (ವೃತ್ತಿ ಕೌಶಲ್ಯ) ಯೋಜನೆ:–

ಈ ಯೋಜನೆಯಡಿ ಐ.ಟಿ.ಐ/ಡಿಪ್ಲೋಮೊ ಸರ್ಟಿಫಿಕೇಟ್ ಹೊಂದಿರುವ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ರೂ.5.00 ಲಕ್ಷ ವೆಚ್ಚದಲ್ಲಿ ಸಣ್ಣ ಕೈಗಾರಿಕಾ ಘಟಕ ಸ್ಥಾಪಿಸಲು ಆರ್ಥಿಕ ನೆರವು ಕಲ್ಪಿಸಲಾಗುವುದು. ಇದರಲ್ಲಿ ರೂ.2.50 ಲಕ್ಷ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚದ ಶೇ.50 ರಷ್ಟನ್ನು ಸಹಾಯಧನವನ್ನಾಗಿ ನಿಗಮದಿಂದ ನೀಡಲಾಗುವುದು. ಉಳಿದ ಭಾಗ ಬ್ಯಾಂಕ್ ಸಾಲವಾಗಿರುತ್ತದೆ. ದಿನಾಂಕ: 31.03.2018ಕ್ಕೆ ಅಂತ್ಯಗೊಂಡ 2017–18ನೇ ಸಾಲಿನಲ್ಲಿ ಸದರಿ ಯೋಜನೆಯಡಿ 486 ಫಲಾನುಭವಿಗಳಿಗೆ ರೂ.1215.00 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿರುತ್ತದೆ.

ನೇರಸಾಲ (ಹೈನುಗಾರಿಕೆ/ಕುರಿ/ಮೇಕೆ ಸಾಕಾಣಿಕೆ) ಯೋಜನೆ:–

2017–18ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ನಿರುದ್ಯೋಗಿಗಳು ಹೈನುಗಾರಿಕೆ ಅಥವಾ ಕುರಿ/ಮೇಕೆ ಸಾಕಾಣಿಕೆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಆರ್ಥಿಕ ನೆರವು ಕಲ್ಪಿಸಲಾಗುತ್ತದೆ. ಈ ಯೋಜನೆಯಡಿ ಒಂದು ಸುಧಾರಿತ ತಳಿ ಹಸು/ಎಮ್ಮೆ ಅಥವಾ ಕುರಿ ಅಥವಾ ಮೇಕೆಗಳನ್ನು ಘಟಕ ವೆಚ್ಚ ರೂ.40,000/–ಗಳ ಮಿತಿಯಲ್ಲಿ ಖರೀದಿಸಿ ಕೊಡಲಾಗುವುದು ಇದರಲ್ಲಿ ರೂ.25,000/– ದಷ್ಟು ಸಹಾಯಧನ, ಮತ್ತು ಉಳಿದ ರೂ.15,000/–ದಷ್ಟು ಸಾಲವಾಗಿರುತ್ತದೆ. ಸಾಲಕ್ಕೆ ವಾರ್ಷಿಕ 4ರ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ. ಈ ಯೋಜನೆಯಡಿ ಸಹಾಯಧನ ಮತ್ತು ಸಾಲ ಎರಡನ್ನು ನಿಗಮದಿಂದಲೇ ನೇರವಾಗಿ ನೀಡಲಾಗುವುದು. ದಿನಾಂಕ: 31.03.2018ಕ್ಕೆ ಅಂತ್ಯಗೊಂಡ 2017–18ನೇ ಸಾಲಿನಲ್ಲಿ ಸದರಿ ಯೋಜನೆಯಡಿ 16125 ಫಲಾನುಭವಿಗಳಿಗೆ ರೂ.6450.00 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿರುತ್ತದೆ.

5. ಹಣಕಾಸು ಸಾಲಿನ ಅಂತ್ಯದ ದಿನಾಂಕ ಹಾಗೂ ವರದಿಯನ್ನು ಮಾಡುತ್ತಿರುವ ದಿನಾಂಕದ ನಡುವಿನ ಅವಧಿಯಲ್ಲಿ ಹಣಕಾಸು ಸ್ಥಿತಿಗತಿಯ ಮೇಲೆ ಪ್ರಭಾವ ಭೀರುವಂತಹ ವಿಷಯಕ ಬದಲಾವಣೆಗಳು ಮತ್ತು ಬದ್ಧತೆಗಳು:

ಹಣಕಾಸು ಸಾಲಿನ ಅಂತ್ಯದ ದಿನಾಂಕ ಹಾಗೂ ಈ ವರದಿಯನ್ನು ಮಾಡುತ್ತಿರುವ ದಿನಾಂಕದ ನಡುವಿನ ಅವಧಿಯಲ್ಲಿ ಹಣಕಾಸು ಸ್ಥಿತಿಗತಿಯ ಮೇಲೆ ಪ್ರಭಾವ ಭೀರುವಂತಹ ಯಾವುದೇ ವಿಷಯಕ ಬದಲಾವಣೆಗಳು ಮತ್ತು ಬದ್ಧತೆಗಳು ಇರುವುದಿಲ್ಲ.

6. ಇಂಧನ ಉಳಿತಾಯ, ತಂತ್ರಜ್ಞಾನವನ್ನು ಸೇರ್ಪಡೆಗೊಳಿಸಿಕೊಳ್ಳುವಿಕೆ, ವಿದೇಶಿ ವಿನಿಮಯ ಗಳಿಕೆಗಳು ಹಾಗೂ ವೆಚ್ಚಗಳು:

ಇಂಧನ ಉಳಿತಾಯ, ತಂತ್ರಜ್ಞಾನವನ್ನು ಸೇರ್ಪಡೆಗೊಳಿಸಿಕೊಳ್ಳುವಿಕೆ, ವಿದೇಶಿ ವಿನಿಮಯ ಗಳಿಕೆಗಳು ಹಾಗೂ ವೆಚ್ಚಗಳಿಗೆ ಸಂಬಂಧಿಸಿದಂತೆ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134(3)(ಎಂ) ಅಡಿಯಲ್ಲಿ ಅಗತ್ಯತೆಯಿರುವ ಮಾಹಿತಿಗೆ ಸಂಬಂಧಿಸಿದಂತೆ, ನಿಗಮವು ರಾಜ್ಯದಲ್ಲಿನ ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಸಮುದಾಯಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಇದು ಅನ್ವಯಗೊಳ್ಳುವುದಿಲ್ಲ/ಯಾವುದೂ ಇರುವುದಿಲ್ಲ.

7. ಕಂಪನಿಯು ತನ್ನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳ ಪ್ರಾರಂಭಿಕ ಹೆಜ್ಜೆಗಳ ಮೇಲೆ ಅಭಿವೃದ್ಧಿ ಪಡಿಸಲಾದ ಹಾಗೂ ಕಾರ್ಯಗತಗೊಳಿಸಲಾದ ಕಾರ್ಯನೀತಿಗಳ ವಿವರಗಳು:

ರಾಜ್ಯದಲ್ಲಿನ ಪರಿಶಿಷ್ಟ ಪಂಗಡಗಳಿಗೆ ಸೇರಿದ ಸಮುದಾಯಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಸೇವೆಗಳನ್ನು ಒದಗಿಸುವ ಕಾರ್ಯಚಟುವಟಿಕೆಗಳಲ್ಲಿ ನಿಗಮವು ತೊಡಗಿಸಿಕೊಂಡಿರುತ್ತದೆ ಹಾಗೂ ಅದನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸ್ಥಾಪಿಸಲಾಗಿರುತ್ತದೆ..

8. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 186ರ ಅಡಿಯಲ್ಲಿ ಮಾಡಲಾಗಿರುವ ಸಾಲಗಳು, ನೀಡಲಾಗಿರುವ ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು:

ಪರಿಚ್ಛೇದ 186ರ ಅಡಿಯಲ್ಲಿ ಮಾಡಲಾಗಿರುವಂತಹ ಸಾಲಗಳು, ನೀಡಲಾಗಿರುವಂತಹ ಖಾತರಿಗಳು ಅಥವಾ ಹೂಡಿಕೆಗಳು ಯಾವುದೂ ಇರುವುದಿಲ್ಲ.

9. ಗುತ್ತಿಗೆಗಳು ಅಥವಾ ಅದಕ್ಕೆ ಸಂಬಂಧಿತ ತಂಡಗಳ ಜೊತೆ ಮಾಡಿಕೊಳ್ಳಲಾಗಿರುವ ವ್ಯವಸ್ಥೆಗಳ ವಿವರಗಳು:

ಪರಿಚ್ಛೇದ 188ರ ಅನುಸರಣೆಯಂತೆ ಗುತ್ತಿಗೆಗಳು ಅಥವಾ ಅವುಗಳಿಗೆ ಸಂಬಂಧಿತ ತಂಡಗಳ ಜೊತೆಗೆ ಮಾಡಿಕೊಳ್ಳಲಾಗಿರುವಂತಹ ವ್ಯವಸ್ಥೆಗಳ ವಿವರಗಳು ಯಾವುದೂ ಇರುವುದಿಲ್ಲ.

10. ಲೆಕ್ಕಪರಿಶೋಧಕರು ಹಾಗೂ ಕಾರ್ಯನಿರತ ಕಂಪನಿಯ ಕಾರ್ಯದರ್ಶಿಯವರು ತಮ್ಮ ವರದಿಗಳಲ್ಲಿ ಮಾಡಿರುವ ಷರತ್ತುಗಳು, ಇದರ ಮೇಲೆ ನಮಗೆ ಯಾವ ಹೊಣೆಗಾರಿಕೆಯೂ ಇರುವುದಿಲ್ಲ ಎಂಬ ಷರಾಗಳು ಅಥವಾ ಪ್ರತಿಕೂಲ ಷರಾಗಳು ಅಥವಾ ಹಕ್ಕುತ್ಯಾಗಗಳ ಮೇಲಿನ ವಿವರಣೆಗಳು ಅಥವಾ ಟೀಕೆಟಿಪ್ಪಣಿಗಳು:

ಶಾಸನಬದ್ಧ ಲೆಕ್ಕಪರಿಶೋಧಕರು ತಮ್ಮ ವರದಿಗಳಲ್ಲಿ ಗಮನಿಸಲಾಗಿರುವಂತಹ ಅಂಶಗಳು ಹಾಗೂ ವಿವರಣೆಗಳನ್ನು ಅನುಬಂಧ - 1ರಲ್ಲಿ ಒದಗಿಸಲಾಗಿದೆ.

11. ನಿರ್ದೇಶಕರುಗಳ ನೇಮಕಾತಿ, ಸಂಭಾವನೆಯ ಪಾವತಿ ಹಾಗೂ ಅವರುಗಳ ಕರ್ತವ್ಯಗಳ ನಿರ್ವಹಣೆ, ಇವುಗಳಿಗೆ ಸಂಬಂಧಿಸಿದಂತೆ ಕಂಪನಿಯ ಕಾರ್ಯನೀತಿ:

ಸಮಿತಿಯ ಸದಸ್ಯರುಗಳ ನಾಮನಿರ್ದೇಶನ ಹಾಗೂ ಸಂಭಾವನೆಗಳಿಗೆ ಸಂಬಂಧಿತ ಸಮಿತಿಯ ರಚನೆಗೆ ಸಂಬಂಧಿಸಿದ ಪರಿಚ್ಛೇದ 178(1)ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

12. ವಾರ್ಷಿಕ ಸಲ್ಲಿಕೆ

ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12ರ ಜೊತೆಯಲ್ಲಿ ಓದಲ್ಪಡುವಂತಹ ಕಂಪನಿಗಳ ಅಧಿನಿಯಮದ ಪರಿಚ್ಛೇದ 92ರ ಅನುವುಗಳ ಅನುಸಾರ ವಾರ್ಷಿಕ ಸಲ್ಲಿಕೆಗಳ ಸಂಕ್ಷಿಪ್ತ ಸಾರಾಂಶಗಳನ್ನು ಅನುಬಂಧ -2ರಲ್ಲಿ ನೀಡಲಾಗಿದೆ ಹಾಗೂ ಈ ವರದಿಗೆ ಲಗತ್ತಿಸಲಾಗಿದೆ.

13. ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ನಡೆಸಲಾದಂತಹ ಮಂಡಳಿಯ ಸಭೆಗಳ ಸಂಖ್ಯೆ:

ಸಮೀಕ್ಷೆಯ ಅಡಿಯಲ್ಲಿನ ಹಣಕಾಸು ಸಾಲಿನಲ್ಲಿ ಕಂಪನಿಯು ತನ್ನ ಮಂಡಳಿಯ ಐದು ಸಭೆಗಳನ್ನು ನಡೆಸಿದೆ.

14. ನಿರ್ದೇಶಕರುಗಳ ಜವಾಬ್ದಾರಿಗಳ ತ:ಖ್ತೆ

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 134(5)ರ ಅನುವುಗಳ ಪ್ರಕಾರ, ಮಂಡಳಿಯು ಈ ಮೂಲಕ ಜವಾಬ್ದಾರಿಗಳ ತ:ಖ್ತೆಯನ್ನು ಸಲ್ಲಿಸುತ್ತಿದೆ.

(ಎ) ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವಲ್ಲಿ, ವಿಷಯಕ ಅಡ್ಡಸರಿಕೆಗಳಿಗೆ ಸಂಬಂಧಿಸಿದಂತೆ ಸಮರ್ಪಕ ವಿವರಣೆಗಳೊಂದಿಗೆ ಅನ್ವಯಗೊಳ್ಳುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸಲಾಗಿದೆ.

ಬಿ) ಹಣಕಾಸು ಸಾಲಿನ ಅಂತ್ಯದಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಗಳ ಹಾಗೂ ಅದೇ ಅವಧಿಗೆ ಕಂಪನಿಯ ಲಾಭ ನಷ್ಟಗಳ ಒಂದು ಸತ್ಯಾಸತ್ಯತೆಯಿಂದ ಕೂಡಿದಂತಹ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯವನ್ನು ನೀಡುವ ರೀತಿಯಲ್ಲಿ ನಿರ್ದೇಶಕರುಗಳು ಅಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳನ್ನು ಆಯ್ಕೆ ಮಾಡಿಕೊಂಡಿರುವರು ಹಾಗೂ ಅವಿರತವಾಗಿ ಅವುಗಳನ್ನು ಅನ್ವಯಿಸುತ್ತಾ ಬಂದಿರುವರು ಹಾಗೂ ತೀರ್ಮಾನಗಳನ್ನು ಹಾಗೂ ಅಂದಾಜುಗಳನ್ನು ಮಾಡಿರುವರು

(ಸಿ) ನಿರ್ದೇಶಕರುಗಳು, ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆಗಳು ಮತ್ತಿತರ ನಿಯಮಬಾಹಿರತೆಗಳನ್ನು ತಡೆಯುವುದಕ್ಕಾಗಿ ಈ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕ ದಾಖಲೆಗಳ ನಿರ್ವಹಣೆಗಾಗಿ ಯಥಾರ್ಥತೆಯಿಂದ ಕೂಡಿದ ಹಾಗೂ ಸಮರ್ಪಕವಾದಂತಹ ಎಚ್ಚರಿಕೆಗಳನ್ನು ತೆಗೆದುಕೊಂಡಿರುವರು.

(ಡಿ) ನಿರ್ದೇಶಕರು, ವಾರ್ಷಿಕ ಲೆಕ್ಕಪತ್ರಗಳನ್ನು ಕಂಪನಿಯು ನಡೆದುಕೊಂಡು ಹೋಗುತ್ತಿರುವ ವ್ಯವಹಾರಗಳ ಆಧಾರದ ಮೇರೆಗೆ ಲೆಕ್ಕಪತ್ರಗಳನ್ನು ತಯರಿಸಿರುವರು.

(ಇ) ಅನ್ವಯಗೊಳ್ಳುವಂತಹ ಅಧಿನಿಯಮ-ನಿಯಮಗಳ ಅನುವುಗಳ ಅನುಸರಣೆಗಳನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ನಿರ್ದೇಶಕರುಗಳು ಸಮರ್ಪಕ ವ್ಯವಸ್ಥೆಗಳನ್ನು ರೂಪಿಸಿರುವರು ಹಾಗೂ ಅಂತಹ ವ್ಯವಸ್ಥೆಗಳು ಸಮರ್ಪಕವಾಗಿವೆ ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿವೆ.

15. ಅಂಗ-ಸಂಸ್ಥೆಗಳು, ಜಂಟಿ ಸಾಹಸೋದ್ಯಮಗಳು ಹಾಗೂ ಸಹ-ಕಂಪನಿಗಳು

ಕಂಪನಿಯು, ಯಾವುದೇ ಅಂಗ-ಸಂಸ್ಥೆಗಳು, ಜಂಟಿ ಸಾಹಸೋದ್ಯಮಗಳು ಹಾಗೂ ಸಹ-ಕಂಪನಿಗಳನ್ನು ಹೊಂದಿರುವುದಿಲ್ಲವಾದ್ದರಿಂದ, ಅಂಗ-ಸಂಸ್ಥೆಗಳು, ಜಂಟಿ ಸಾಹಸೋದ್ಯಮಗಳು ಹಾಗೂ ಸಹ-ಕಂಪನಿಗಳ ಹಣಕಾಸು ಕಾರ್ಯನಿರ್ವಹಣೆಯ ವಿವರಗಳು ಯಾವುದೂ ಇರುವುದಿಲ್ಲ.

16. ಠೇವಣಿಗಳು

ಕಂಪನಿಯು, ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ಯಾವುದೇ ಠೇವಣಿಗಳನ್ನು ಪಡೆದುಕೊಂಡಿರುವುದಿಲ್ಲ ಅಥವಾ ನವೀಕರಿಸಿರುವುದಿಲ್ಲ.

17. ನಿರ್ದೇಶಕರುಗಳು

ಈ ವರದಿಯ ದಿನಾಂಕದಂದು ನಿಗಮದ ನಿರ್ದೇಶಕರುಗಳ ಮಂಡಳಿಯು ಈ ಕೆಳಗಿನಂತಿರುವುದು:
ನಿರ್ದೇಶಕರುಗಳ ಮಂಡಳಿ:

ಕ್ರ. ಸಂ.	ಹೆಸರು	ಹುದ್ದೆ
1	ಶ್ರೀ ಜಿ. ಕುಮಾರ್ ನಾಯಕ್ ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ	ಅಧ್ಯಕ್ಷರು
2	ಶ್ರೀ ಸಂಗಪ್ಪ. ಕ.ಆ.ಸೇ. ನಿರ್ದೇಶಕರು. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.	ನಿರ್ದೇಶಕರು
3	ಶ್ರೀ ಹನುಮನರಸಯ್ಯ. ಎ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ.	ವ್ಯವಸ್ಥಾಪಕ ನಿರ್ದೇಶಕರು
4	ಶ್ರೀ ಡಿ.ಎಸ್. ಸುದರ್ಶನ್ ಕುಮಾರ್, ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಕಲ್ಯಾಣ), ಕರ್ನಾಟಕ ಸರ್ಕಾರ.	ನಿರ್ದೇಶಕರು
5	ಶ್ರೀಮತಿ ಸಿ. ಹೇಮಲತಾ, ಸರ್ಕಾರದ ಉಪ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ.	ನಿರ್ದೇಶಕರು
6	ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು. ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ	ನಿರ್ದೇಶಕರು
7	ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಪ್ರತಿನಿಧಿ ಭಾರತ ಸರ್ಕಾರ	ನಿರ್ದೇಶಕರು

ಶ್ರೀ ಪ್ರಿಯಾಂಕ್ ಎಂ ಖರ್ಗೆ ಸಚಿವರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಶ್ರೀ ಬಸನಗೌಡ ದದ್ದಲ ಶಾಸಕರು ರವರು ಅಧ್ಯಕ್ಷರಾಗಿ, ಹಾಗೂ ಶ್ರೀ ಟಿ. ರಾಘವೇಂದ್ರ, ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅವಧಿಯಲ್ಲಿ ಕಂಪನಿಗೆ ಸಲ್ಲಿಸಿದ ಸೇವೆಗಳಿಗಾಗಿ ನೀಡಿದ ಸಹಕಾರಕ್ಕಾಗಿ ಮಂಡಳಿಯು ಈ ಮೂಲಕ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಇಚ್ಛಿಸುತ್ತದೆ.

18. ಸ್ವತಂತ್ರ ನಿರ್ದೇಶಕರ ಘೋಷಣೆ

ಸ್ವತಂತ್ರ ನಿರ್ದೇಶಕರುಗಳ ನೇಮಕಕ್ಕೆ ಸಂಬಂಧಿಸಿದ ಪರಿಚ್ಛೇದ 149ರ ಅನುವುಗಳು ನಮ್ಮ ಕಂಪನಿಗೆ ಅನ್ವಯಿಸುವುದಿಲ್ಲ.

19. ಶಾಸನಬದ್ಧ ಲೆಕ್ಕಪರಿಶೋಧಕರುಗಳು

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮೆ. ಬಿ ಎಸ್ ಡಿ ಅಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್‌ಗಳು, ಬೆಂಗಳೂರು, ಇವರನ್ನು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವರು. ಅವರಿಗೆ ಪಾವತಿಸಬೇಕಾಗಿರುವ ಗೌರವಧನವನ್ನು ಮುಂದಿನ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನಿಸಬೇಕಾಗಿದೆ.

20. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳು

31.03.2018 ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಗಳನ್ನು ಲಗತ್ತಿಸಲಾಗಿದೆ.

21. ಲೆಕ್ಕಪರಿಶೋಧನಾ ಸಮಿತಿಯ ರಚನೆ ಹಾಗೂ ನಿಗಾ/ಜಾಗೃತಿ ವ್ಯವಸ್ಥೆಗಳ ಬಗ್ಗೆ ಬಹಿರಂಗಪಡಿಸುವಿಕೆ

ಕಂಪನಿಗಳ (ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು, 2013ರ ನಿಯಮಗಳು 6 ಮತ್ತು 7ರ ಜೊತೆಯಲ್ಲಿ ಓದಲ್ಪಡುವಂತಹ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 177ರ ಅನುವುಗಳು ನಮ್ಮ ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

22. ಷೇರುಗಳು

ಎ.ಭದ್ರತೆಗಳನ್ನು ಹಿಂದಕ್ಕೆ ಖರೀದಿಸಿರುವವುಗಳು

ಕಂಪನಿಯು, ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ತನ್ನ ಯಾವುದೇ ಭದ್ರತೆಗಳನ್ನೂ ಹಿಂದಕ್ಕೆ ಖರೀದಿಸಿರುವುದಿಲ್ಲ

ಬಿ. ಸ್ವೆಟ್ ಈಕ್ವಿಟಿ

ಕಂಪನಿಯು, ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ಯಾವುದೇ ಸ್ವೆಟ್ ಈಕ್ವಿಟಿ ಷೇರುಗಳನ್ನೂ ನೀಡಿರುವುದಿಲ್ಲ.

ಸಿ.ಬೋನಸ್ ಷೇರುಗಳು

ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ಯಾವುದೇ ಬೋನಸ್ ಷೇರುಗಳನ್ನು ನೀಡಿರುವುದಿಲ್ಲ.

ಡಿ. ಉದ್ಯೋಗಿಗಳ ದಾಸ್ತಾನು ಆಯ್ಕೆ ಯೋಜನೆ

ಕಂಪನಿಯು, ತನ್ನ ಉದ್ಯೋಗಿಗಳಿಗೆ ಯಾವುದೇ ದಾಸ್ತಾನು ಆಯ್ಕೆ ಯೋಜನೆಯನ್ನೂ ಒದಗಿಸಿರುವುದಿಲ್ಲ.

23. ಕೃತಜ್ಞತೆಗಳು

ಪ್ರಸಕ್ತ ಸಾಲಿನಲ್ಲಿ ನೀಡಿದಂತಹ ಬೆಂಬಲ, ಸಹಕಾರ ಹಾಗೂ ಅತ್ಯಮೂಲ್ಯ ಸಹಾಯಕ್ಕಾಗಿ ಕರ್ನಾಟಕ ಸರ್ಕಾರ, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಸಮಾಜ ಕಲ್ಯಾಣ ಇಲಾಖೆ ಹಾಗೂ ಎಲ್ಲಾ ಚುನಾವಣಾ ಕ್ಷೇತ್ರಗಳ ಶಾಸಕರಿಗೂ, ನಿರ್ದೇಶಕ ಮಂಡಳಿಯು ಈ ಮೂಲಕ ತನ್ನ ಕೃತಜ್ಞತೆಗಳನ್ನು ಸಮರ್ಪಿಸುತ್ತಿದೆ. ನಿಗಮದ ಉದ್ಯೋಗಿಗಳು ಸಲ್ಲಿಸಿರುವಂತಹ ಸಮರ್ಪಿತ ಸೇವೆಗಳಿಗಾಗಿಯೂ ಸಹ ನಿರ್ದೇಶಕರುಗಳ ಮಂಡಳಿಯು ಈ ಮೂಲಕ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದೆ.

ನಿರ್ದೇಶಕರುಗಳ ಮಂಡಳಿಗಾಗಿ ಹಾಗೂ ಅದರ ಪರವಾಗಿ

ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು

ದಿನಾಂಕ:–23/09/2019
ಸ್ಥಳ: ಬೆಂಗಳೂರು

ಅನುಬಂಧ –2

ನಮೂನೆ ಸಂಖ್ಯೆ ಎಂಜಿಟಿ 9
ವಾರ್ಷಿಕ ಸಲ್ಲಿಕೆಗಳ ಉದ್ಧೃತ ಭಾಗ (ಎಕ್ಸ್ಟ್ರಾಕ್ಟ್)
31.03.2018ಕ್ಕೆ ಅಂತ್ಯಗೊಂಡ ಹಣಕಾಸು ಸಾಲಿನಲ್ಲಿದ್ದಂತೆ

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 92(3) ಹಾಗೂ ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ)

ನಿಯಮಗಳು, 2014ರ ನಿಯಮ 12(1)ರ ಅನುಸರಣೆಯಂತೆ

I ನೋಂದಣಿ ಮತ್ತಿತರ ವಿವರಗಳು:

1	ಸಿಐಎನ್	U85310KA2006SGC040055
2	ನೋಂದಣಿ ದಿನಾಂಕ	26.07.2006.
3	ಕಂಪನಿಯ ಹೆಸರು	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ.
4	ಕಂಪನಿಯ ಪ್ರವರ್ಗ/ಉಪ–ಪ್ರವರ್ಗ	ಸರ್ಕಾರಿ ಕಂಪನಿ
5	ನೋಂದಾಯಿತ ಕಚೇರಿಯ ವಿಳಾಸ ಮತ್ತು ಸಂಪರ್ಕ ವಿವರಗಳು	ನಂ.10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
6	ಷೇರುಗಳನ್ನು ಮಾರಾಟ ಮಾಡುವುದಕ್ಕಾಗಿ, ಕಂಪನಿಯು ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿದೆಯೆ	ಇಲ್ಲ
7	ನೋಂದಣಿ ಅಧಿಕಾರಿಯವರು ಹಾಗೂ ವರ್ಗಾವಣೆ ಪ್ರತಿನಿಧಿಯ ಹೆಸರು, ವಿಳಾಸ ಹಾಗೂ ಸಂಪರ್ಕ ವಿವರಗಳು	ಅನ್ವಯಗೊಳ್ಳುವುದಿಲ್ಲ

II ಕಂಪನಿಯ ಪ್ರಧಾನ ವ್ಯಾಪಾರ/ವ್ಯವಹಾರ ಚಟುವಟಿಕೆಗಳು (ಕಂಪನಿಯ ಒಟ್ಟಾರೆ ವ್ಯವಹಾರದ ಶೇಕಡಾ 10ಕ್ಕಿಂತ ಅಧಿಕ ಕಾಣಿಕೆಯನ್ನು ನೀಡುತ್ತಿರುವಂತಹ ಎಲ್ಲಾ ವ್ಯಾಪಾರವ್ಯವಹಾರಗಳ ಬಗ್ಗೆ ತಿಳಿಸತಕ್ಕದ್ದು).

ಕ್ರಮ ಸಂಖ್ಯೆ	ಪ್ರಧಾನ ಉತ್ಪತ್ತಿಗಳ/ಸೇವೆಗಳ	ಉತ್ಪನ್ನದ/ಸೇವೆಯ ಎನ್‌ಐಸಿ ಸಂಕೇತ	ಕಂಪನಿಯ ಒಟ್ಟಾರೆ ವಹಿವಾಟಿಗೆ ಶೇಕಡಾವಾರು
1	ಕರ್ನಾಟಕದಲ್ಲಿನ ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಹಣಕಾಸು ಮತ್ತಿತರ ಸಹಾಯಗಳನ್ನು ಮಾಡುವುದಾಗಿದೆ	20293	100

III. ಇತರೆ ಕಂಪನಿಗಳ ದಾಸ್ತಾನನ್ನು ಹೊಂದಿರುವಂತಹ ಕಂಪನಿಗಳು, ಉಪ–ಕಂಪನಿಗಳು ಹಾಗೂ ಸಹ–ಕಂಪನಿಗಳ ವಿವರಗಳು

ಕಂಪನಿಯ ಒಟ್ಟಾರೆ ವಹಿವಾಟಿನ ಶೇಕಡಾ 10ಕ್ಕಿಂತ ಅಧಿಕವಾಗಿರುವಂತಹ ಎಲ್ಲಾ ವ್ಯಾಪಾರವ್ಯವಹಾರಗಳ ಬಗ್ಗೆ ತಿಳಿಸುವುದು:–

ಯಾವುದೂ ಇರುವುದಿಲ್ಲ.

VI. ಷೇರುಗಳನ್ನು ಹೊಂದಿರುವ ಮಾದರಿ (ಒಟ್ಟಾರೆ ಈಕ್ವಿಟಿಗಳಿಗೆ ಹೋಲಿಸಿದಲ್ಲಿ ಈಕ್ವಿಟಿ ಷೇರು ಬಂಡವಾಳದ ಶೇಕಡಾವಾರು)

ಷೇರುದಾರರ ಪ್ರವರ್ಗ	ವರ್ಷದ ಪ್ರಾರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31 ಮಾರ್ಚ್ 2017 ರಲ್ಲಿದ್ದಂತೆ)				ವರ್ಷದ ಕೊನೆಯಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31 ಮಾರ್ಚ್ 2018 ರಲ್ಲಿದ್ದಂತೆ)				ಪ್ರಸಕ್ತ ಸಾಲಿನಲ್ಲಿ ಶೇಕಡಾ ವಾರು ಬದಲಾ ವಣೆ
	ಡಿಮ್ಯಾಟು	ಭೌತಿಕ	ಒಟ್ಟು	ಒಟ್ಟಾರೆ ಷೇರುಗಳ ಶೇಕಡಾ ವಾರು	ಡಿಮ್ಯಾಟು	ಭೌತಿಕ	ಒಟ್ಟು	ಒಟ್ಟಾರೆ ಷೇರುಗಳ ಶೇಕಡಾ ವಾರು	
ಎ. ಪ್ರವರ್ತಕರು									
(1) ಭಾರತೀಯರು									
ಎ) ವೈಯಕ್ತಿಕ ವ್ಯಕ್ತಿಗಳು/ಹಿಂದು ಅವಿಭಕ್ತ ಕುಟುಂಬ	ಯಾವುದೂ ಇಲ್ಲ	0	0	0	ಯಾವುದೂ ಇಲ್ಲ	0	0	0	0
ಬಿ) ಕೇಂದ್ರ ಸರ್ಕಾರ	ಯಾವುದೂ ಇಲ್ಲ	792590	792590	39.62	ಯಾವುದೂ ಇಲ್ಲ	792590	792590	39.62	39.62
ಸಿ) ರಾಜ್ಯ ಸರ್ಕಾರ (ಗಳು)	ಯಾವುದೂ ಇಲ್ಲ	1207410	1207410	60.38	ಯಾವುದೂ ಇಲ್ಲ	1207410	1207410	60.38	60.38
ಡಿ) ಸಾಂಸ್ಥಿಕ ನಿಗಮಗಳು	ಯಾವುದೂ ಇಲ್ಲ	0	0	0	ಯಾವುದೂ ಇಲ್ಲ	0	0	0	0
ಇ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು	ಯಾವುದೂ ಇಲ್ಲ	0	0	0	ಯಾವುದೂ ಇಲ್ಲ	0	0	0	0
ಎಫ್) ಇನ್ನಿತರವುಗಳು ಯಾವುದಾದರೂ ಇದ್ದಲ್ಲಿ	ಯಾವುದೂ ಇಲ್ಲ	0	0	0	ಯಾವುದೂ ಇಲ್ಲ	0	0	0	0
ಪ್ರವರ್ತಕರು ಹೊಂದಿರುವಂತಹ ಒಟ್ಟಾರೆ ಷೇರುಗಳು (ಎ)	ಯಾವುದೂ ಇಲ್ಲ	2000000	2000000	100	ಯಾವುದೂ ಇಲ್ಲ	2000000	2000000	100	0
ಬಿ. ಸಾರ್ವಜನಿಕರು ಷೇರುಗಳನ್ನು ಹೊಂದಿರುವಿಕೆ	ಯಾವುದೂ ಇಲ್ಲ	–	–	–	ಯಾವುದೂ ಇಲ್ಲ	–	–	–	–
(ಬಿ)(1) ಉಪ–ಮೊತ್ತ :–	0	0	0	0	0	0	0	0	0
2. ಸಂಸ್ಥೆಯೇತರವುಗಳು	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ	ಯಾವುದೂ ಇಲ್ಲ
ಉಪ–ಮೊತ್ತ (ಬಿ)(2)	0	0	0	0	0	0	0	0	0
ಸಾರ್ವಜನಿಕರು ಹೊಂದಿರುವ ಒಟ್ಟಾರೆ ಷೇರುಗಳು (ಬಿ) = (ಬಿ)(1) + (ಬಿ)(2)	0	0	0	0	0	0	0	0	0
ಸಿ. ಜಿಡಿಆರ್‌ಗಳುಮತ್ತು ಎಡಿಆರ್‌ಗಳಿಗಾಗಿ ಪಾಲಕರು ಹೊಂದಿರುವ ಷೇರುಗಳು	0	0	0	0	0	0	0	0	0
ಒಟ್ಟಾರೆ ಮೊತ್ತ (ಎ+ಬಿ+ಸಿ)	ಯಾವುದೂ ಇಲ್ಲ	2000000	2000000	100	ಯಾವುದೂ ಇಲ್ಲ	2000000	2000000	100	0

ಬಿ) ಪ್ರವರ್ತಕರು ಷೇರುಗಳನ್ನು ಹೊಂದಿರುವುದು –

ಕ್ರಮ ಸಂಖ್ಯೆ	ಷೇರುದಾರರ ಹೆಸರು	ವರ್ಷದ ಪ್ರಾರಂಭದಲ್ಲಿ ಷೇರುಗಳನ್ನು ಹೊಂದಿರುವುದು			ವರ್ಷದ ಕೊನೆಯಲ್ಲಿ ಷೇರುಗಳನ್ನು ಹೊಂದಿರುವುದು			ಪ್ರಸಕ್ತ ಸಾಲಿನಲ್ಲಿ ಷೇರುಗಳನ್ನು ಹೊಂದಿರುವಲ್ಲಿನ ಶೇಕಡಾವಾರು ಬದಲಾವಣೆ
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟಾರೆ ಷೇರಿಗೆ ಹೋಲಿಸಿ ದಲ್ಲಿ ಶೇಕಡಾ ವಾರು	ಒಟ್ಟಾರೆ ಷೇರುಗಳಿಗೆ ಹೋಲಿಸಿದಲ್ಲಿ ಅಡ ಇಟ್ಟಿರುವುದರ ಶೇಕಡಾವಾರು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟಾರೆ ಷೇರಿಗೆ ಹೋಲಿಸಿ ದಲ್ಲಿ ಶೇಕಡಾವಾರು	ಒಟ್ಟಾರೆ ಷೇರುಗಳಿಗೆ ಹೋಲಿಸಿದಲ್ಲಿ ಅಡ ಇಟ್ಟಿರುವುದರ ಶೇಕಡಾವಾರು	
1	ಕರ್ನಾಟಕ ಸರ್ಕಾರ ಮತ್ತು ಅದರ ನಾಮ-ನಿರ್ದೇಶಿತರುಗಳು	382470	100	0	1207410	60.38	0	ಯಾವುದೂ ಇಲ್ಲ
2.	ಭಾರತ ಸರ್ಕಾರ	0	0	0	792590	39.62		

ಸಿ) ಪ್ರವರ್ತಕರುಗಳು ಹೊಂದಿರುವಂತಹ ಷೇರುಗಳಲ್ಲಿನ ಬದಲಾವಣೆಗಳು (ಯಾವುದೇ ಬದಲಾವಣೆಗಳೂ ಇಲ್ಲದಿದ್ದಲ್ಲಿ ದಯವಿಟ್ಟು ನಿರ್ದಿಷ್ಟವಾಗಿ ತಿಳಿಸುವುದು) – ಷೇರುಗಳನ್ನು ಹೊಂದಿರುವಿಕೆಯಲ್ಲಿ ಯಾವುದೇ ಬದಲಾವಣೆಗಳೂ ಇರುವುದಿಲ್ಲ.

ಕ್ರಮ ಸಂಖ್ಯೆ	ವಿವರಗಳು	ವರ್ಷದ ಪ್ರಾರಂಭದಲ್ಲಿ ಷೇರುಗಳನ್ನು ಹೊಂದಿದ್ದುದು		ಪ್ರಸಕ್ತ ಸಾಲಿನಲ್ಲಿ ಹೊಂದಿದ್ದಂತಹ ಕ್ರೋಡೀಕೃತ ಷೇರುಗಳು	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟಾರೆ ಷೇರುಗಳಿಗೆ ಹೋಲಿಸಿದಲ್ಲಿ ಶೇಕಡಾವಾರು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟಾರೆ ಷೇರುಗಳಿಗೆ ಹೋಲಿಸಿದಲ್ಲಿ ಶೇಕಡಾವಾರು
1	ವರ್ಷದ ಪ್ರಾರಂಭದಲ್ಲಿ	382470	100	2000000	100
2	ಹೆಚ್ಚಳ/ಇಳಿಮುಖಗಳಿಗೆ ಕಾರಣಗಳನ್ನು ನೀಡುವ ಮೂಲಕ ಪ್ರಸಕ್ತ ಸಾಲಿನಲ್ಲಿ ಪ್ರವರ್ತಕರುಗಳು ಹೊಂದಿರುವ ಷೇರುಗಳ ಸಂಖ್ಯೆಯಲ್ಲಿ ದಿನಾಂಕವಾರು ಹೆಚ್ಚಳ/ಇಳಿಮುಖಗೊಂಡಿರುವುದು	1617530			
3	ವರ್ಷದ ಅಂತ್ಯದಲ್ಲಿ	2000000	100	2000000	100

ಡಿ) ಮೊದಲ ಹತ್ತು ಸ್ಥಾನದಲ್ಲಿರುವಂತಹ ಷೇರುದಾರರು ಷೇರುಗಳನ್ನು ಹೊಂದಿರುವ ಮಾದರಿ

(ನಿರ್ದೇಶಕರುಗಳು, ಪ್ರವರ್ತಕರುಗಳು ಹಾಗೂ ಜಿಡಿಆರ್‌ಗಳನ್ನು ಮತ್ತು ಎಡಿಆರ್‌ಗಳನ್ನು ಹೊರತುಪಡಿಸಿದಂತೆ) : ಯಾವುದೂ ಇರುವುದಿಲ್ಲ.

ಇ) ನಿರ್ದೇಶಕರುಗಳು ಹಾಗೂ ಪ್ರಮುಖ ವ್ಯವಸ್ಥಾಪಕ/ಆಡಳಿತ ವಿಭಾಗದ ಸಿಬ್ಬಂದಿಗಳು ಹೊಂದಿರುವ ಷೇರುಗಳು: ಯಾವುದೂ ಇರುವುದಿಲ್ಲ.

V) ಸಾಲಗಳನ್ನು ಮಾಡಿರುವುದು – ಪಾವತಿಗಾಗಿ ಬಾಕಿಯಿರುವಂತಹ/ಬಾಕಿಯಿರುವಂತಹ ಆದರೆ ತಕ್ಷಣವೇ ಪಾವತಿಸಬೇಕಾಗಿರದ ಬಡ್ಡಿಯೂ ಸೇರಿದಂತೆ ಕಂಪನಿಯು ಮಾಡಿರುವಂತಹ ಸಾಲಗಳು.

(ಲಕ್ಷ ರೂಪಾಯಿಗಳಲ್ಲಿ

ವಿವರ	ಠೇವಣಿಗಳನ್ನು ಹೊರತುಪಡಿಸಿದಂತೆ ಭದ್ರತೆಯಿಂದ ಕೂಡಿರುವ ಸಾಲಗಳು	ಭದ್ರತೆಯಿಂದ ಕೂಡಿರದ ಸಾಲಗಳು	ಠೇವಣಿಗಳು	ಮಾಡಲಾಗಿರುವಂತಹ ಒಟ್ಟಾರೆ ಸಾಲಗಳು
ಹಣಕಾಸು ಸಾಲಿನ ಪ್ರಾರಂಭದಲ್ಲಿನ ಸಾಲಗಳು				
i) ಅಸಲಿನ ಮೊತ್ತ		5977.91		
ii) ಪಾವತಿಸಲು ಬಾಕಿಯಿರುವಂತಹ, ಆದರೆ ಪಾವತಿಸಿರದ ಬಡ್ಡಿ		0.00		
iii) ಸಂಚಿತಗೊಂಡಿರುವಂತಹ ಆದರೆ ಪಾವತಿಸಲು ಬಾಕಿಯಿರದ ಬಡ್ಡಿ		48.59		
ಒಟ್ಟು (i+ii+iii)		6026.50		
ಪ್ರಸಕ್ತ ಹಣಕಾಸು ಸಾಲಿನಲ್ಲಿನ ಸಾಲಗಳ ಸ್ಥಿತಿಗತಿಯಲ್ಲಿನ ಬದಲಾವಣೆ				
* ಹೆಚ್ಚಳಗೊಂಡಿರುವುದು		159.43		
* ಇಳಿಮುಖಗೊಂಡಿರುವುದು		784.61		
ನಿವ್ವಳ ಬದಲಾವಣೆ		(–)625.18		
ಹಣಕಾಸು ಸಾಲಿನ ಅಂತ್ಯದಲ್ಲಿನ ಸಾಲಗಳು				
i) ಅಸಲಿನ ಮೊತ್ತ		5241.89		
ii) ಪಾವತಿಸಲು ಬಾಕಿಯಿರುವಂತಹ, ಆದರೆ ಪಾವತಿಸದ ಬಡ್ಡಿ		119.77		
iii) ಸಂಚಿತಗೊಂಡಿರುವ, ಆದರೆ ಪಾವತಿಸಲು ಬಾಕಿಯಿರದ ಬಡ್ಡಿ		39.66		
ಒಟ್ಟು (i+ii+iii)		**5401.32**		

VI. ನಿರ್ದೇಶಕರುಗಳು ಹಾಗೂ ಪ್ರಮುಖ ವ್ಯವಸ್ಥಾಪಕ/ಆಡಳಿತ ವಿಭಾಗದ ಸಿಬ್ಬಂದಿಗಳ ಸಂಭಾವನೆ – ಯಾವುದೂ ಇರುವುದಿಲ್ಲ.

VII. ದಂಡಗಳನ್ನು ವಿಧಿಸಿರುವುದು/ಶಿಕ್ಷೆಗಳನ್ನು ವಿಧಿಸಿರುವುದು/ ದಂಡವನ್ನು ಸ್ವೀಕರಿಸುವ ಮೂಲಕ ಅಪರಾಧಗಳನ್ನು ಮನ್ನಾ ಮಾಡಿರುವುದು : ಅನ್ವಯಗೊಳ್ಳುವುದಿಲ್ಲ.

ನಿರ್ದೇಶಕರುಗಳ ಮಂಡಳಿಗಾಗಿ ಮತ್ತು ಅದರ ಪರವಾಗಿ

ಸಹಿ/–
ಅಧ್ಯಕ್ಷರು

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ದಿನಾಂಕ:23/09/2019.
ಸ್ಥಳ: ಬೆಂಗಳೂರು

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 134ರ ಅಡಿಯಲ್ಲಿ ಸದಸ್ಯರುಗಳಿಗೆ ನಿರ್ದೇಶಕರುಗಳ ವರದಿಗೆ ಅನುಬಂಧ

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು	ಆಡಳಿತ ಮಂಡಳಿಯ/ವ್ಯವಸ್ಥಾಪನೆಯ ಉತ್ತರ
(ಎ) ಟಿಪ್ಪಣಿ ಸಂಖ್ಯೆ 1.09 ಠೇವಣಿಗಳನ್ನು ಪುನರ್–ಹೂಡಿಕೆ ಮಾಡಿದ್ದರ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ ಗುತ್ತಿಗೆ/ಒಪ್ಪಂದದ ದರಗಳಲ್ಲಿ ಸರಳ ಬಡ್ಡಿಯ ಆಧಾರದ ಮೇರೆಗೆ ಸಂಚಿತಗೊಂಡಿದ್ದಿತು ಹಾಗೂ ನಿಯತಕಾಲಿಕ ಅಂತರಗಳಲ್ಲಿ ಸಂಯೋಜನೆಗೊಂಡಿದ್ದಿತು ಹಾಗೂ ಸರಳ ಬಡ್ಡಿ ಆಧಾರದಲ್ಲಿ ಸಂಚಿತಗೊಂಡಿದ್ದ ಬಡ್ಡಿಯ ಮೊತ್ತವನ್ನು ಠೇವಣಿಯ ಅವಧಿಯು ಮುಕ್ತಾಯಗೊಂಡ/ನವೀಕರಿಸಲಾದ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದಿತು.	ಹೂಡಿಕೆಯ ಮೇಲೆ ಸಂಚಿತಗೊಂಡ ಬಡ್ಡಿಯನ್ನು ತ್ರೈಮಾಸಿಕ ಸಂಯೋಜಿತ ದರದ ಆಧಾರದ ಮೇರೆಗೆ ಲೆಕ್ಕವನ್ನಿಡಲಾಗಿರುವುದು. ಹೂಡಿಕೆಗಳ ಮೇಲಿನ ಬಡ್ಡಿಯ ಮೇಲೆ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಲಾಗುವುದು ಹಾಗೂ ಇನ್ನು ಮುಂದೆ ಹೂಡಿಕೆಗಳ ಮೇಲಿನ ಬಡ್ಡಿಯನ್ನು ಸಂಚಿತ ಆಧಾರದ ಮೇರೆಗೆ ಅಳವಡಿಸಿಕೊಳ್ಳಲಾಗುವುದು/ಲೆಕ್ಕಹಾಕಲಾಗುವುದು.
(ಬಿ) ಟಿಪ್ಪಣಿ ಸಂಖ್ಯೆ 1.10 (iv) – ಹಿಂದಿನ ಸಾಲಿನ ಅಂತ್ಯದವರೆಗೆ ವಿತರಿಸಲಾಗಿದ್ದ ಸಾಲಗಳ ಮೇಲೆ ವಾರ್ಷಿಕ ಉಳಿಕೆ ಆಧಾರದ ಮೇರೆಗೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದುದರ ಬಗ್ಗೆ, ಟಿಪ್ಪಣಿ ಸಂಖ್ಯೆ 1.10 (v) – ಪ್ರಸಕ್ತ ಸಾಲಿನಲ್ಲಿ ವಿತರಿಸಲಾದ ಸಾಲದ ಮೇಲೆ ಬಡ್ಡಿಯನ್ನು ವಾಸ್ತವಿಕವಾಗಿ ವಿತರಿಸಲಾದ ದಿನಾಂಕದಿಂದ ಲೆಕ್ಕಹಾಕುವ ಬದಲು ವಿತರಣೆ ಮಾಡಲಾದ ತಿಂಗಳಿನ ಕಡೆಯ ದಿನದಿಂದ ಲೆಕ್ಕಹಾಕಲಾಗಿದ್ದರ ಬಗ್ಗೆ ಹಾಗೂ ಟಿಪ್ಪಣಿ ಸಂಖ್ಯೆ 12.1 – ಪಡೆದುಕೊಂಡಂತಹ ಸಾಲದ ಮರುಪಾವತಿಯಲ್ಲಿ ತಪ್ಪಿತಸ್ತರಾಗಿದ್ದವರ ಸಾಲಗಳ ಮೇಲೆ ದಂಡದ ರೂಪದ ಬಡ್ಡಿಯನ್ನು ವಿಧಿಸಲು ಸಾಲದ ದಾಖಲೆಗಳು ಅನುವು ಮಾಡಿದ್ದವಾದರೂ, ಸಾಮಾನ್ಯ ದರಗಳಲ್ಲಿ ಬಡ್ಡಿಯನ್ನು ವಿಧಿಸಲಾಗಿದ್ದಿತು.	ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶವನ್ನು ಮುಂದಿನ ಕ್ರಮಕ್ಕಾಗಿ ಮಾರ್ಗಸೂಚಿಯನ್ನಾಗಿ ಗಣನೆಗೆ ತೆಗೆದುಕೊಳ್ಳಲಾಗಿದೆ ಹಾಗೂ ಫಲಾನುಭವಿಗಳ ಅಭಿವೃದ್ಧಿಯ ಹಿತಾಸಕ್ತಿಯಿಂದ ದಂಡದ ಬಡ್ಡಿಯನ್ನು ಸಾಲ ಮರುಪಾವತಿಯಲ್ಲಿ ತಪ್ಪಿತಸ್ತರಾಗುವ ಫಲಾನುಭವಿಗಳ ಲೆಕ್ಕಕ್ಕೆ ಹಾಕಲಾಗುವುದಿಲ್ಲ.
(ಸಿ) ಟಿಪ್ಪಣಿ ಸಂಖ್ಯೆ 9.1 – ಪ್ರಧಾನ ಕಚೇರಿಯಲ್ಲಿ ನಿರ್ವಹಿಸಲಾಗಿರುವಂತಹ ಲೆಕ್ಕಪತ್ರಗಳ ಪುಸ್ತಕಗಳ ಪ್ರಕಾರ ಇರುವಂತಹ ಶಿಲ್ಕಿಗೆ ಹೋಲಿಸಿದಲ್ಲಿ ಕೆಲವು ಜಿಲ್ಲಾ ಕಚೇರಿಗಳ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳ ಪ್ರಕಾರ ಬ್ಯಾಂಕು ಖಾತೆಗಳಲ್ಲಿ ಪ್ರಾರಂಭಿಕ ಶಿಲ್ಕಿನ ಅಡಿಯಲ್ಲಿ ರೂ.22,43,583/– (ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಯ ಪ್ರಕಾರ ಶಿಲ್ಕು ಅಧಿಕ ಪ್ರಮಾಣದಲ್ಲಿದೆ) ಮತ್ತು ಪ್ರಸಕ್ತ ಸಾಲಿನ ವ್ಯತ್ಯಾಸದ ಅಂತಿಮ ಶಿಲ್ಕು ರೂ. 7,56,56,876/– ಹಾಗೂ ಲೆಕ್ಕಪತ್ರಗಳ ಪುಸ್ತಕಗಳ ಅನುಸಾರ ಹೋಲಿಸಿದಲ್ಲಿ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಯ ಪ್ರಕಾರ ಬ್ಯಾಂಕು ಖಾತೆಗಳಲ್ಲಿ ಪ್ರಸಕ್ತ ಸಾಲಿನ ವ್ಯತ್ಯಾಸವು ರೂ.7,34,13,293/– ಆಗಿರುತ್ತದೆ	2017–18ರಲ್ಲಿ ಹೊಸ ಯೋಜನೆಗಳಿಗಾಗಿ ಲೆಕ್ಕಪತ್ರಗಳ ಕಾರ್ಯಾಚರಣೆಯ ಕಾರಣ ಹಾಗೂ ಜಿಲ್ಲಾ ಬ್ಯಾಂಕು ಖಾತೆಗಳಲ್ಲಿ ವರ್ಗಾವಣೆಯ ಹಂತದಲ್ಲಿದ್ದಂತಹ ಚೆಕ್ಕುಗಳ ಕಾರಣ, ಪ್ರಧಾನ ಕಚೇರಿ ಹಾಗೂ ಜಿಲ್ಲಾ ಕಚೇರಿಗಳ ಪ್ರಾರಂಭಿಕ ಶಿಲ್ಕುಗಳ ನಡುವೆ ವ್ಯತ್ಯಾಸಗಳಿದ್ದವು. ಆದಾಗ್ಯೂ, 2018–19 ಹಣಕಾಸು ಸಾಲಿನಲ್ಲಿ ಅಗತ್ಯ ತಿದ್ದುಪಡಿ ನಮೂದುಗಳನ್ನು ಮಾಡಲಾಗುವುದು.
(ಡಿ) ಟಿಪ್ಪಣಿ 18.03 – ಡಾ. ಬಿಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತವು 2007–08ರಿಂದ 2012–13 ಅವಧಿಗೆ ವೆಚ್ಚಗಳ ಪಾಲಿನ ಕಡೆಗೆ ಜಿಲ್ಲಾ ಕಚೇರಿ ಮಟ್ಟದ ನಿಗಮದ ಕಾರ್ಯಚಟುವಟಿಕೆಗಳ ನಿರ್ವಹಣೆಗಾಗಿ ಮಾಡಿರುವ ರೂ.1433.00 ಲಕ್ಷ ಮೊತ್ತದಷ್ಟು ಕೋರಿಕೆಯನ್ನು, ಎರಡೂ ಸಂಸ್ಥೆಗಳು ಕರ್ನಾಟಕ ಸರ್ಕಾರದ ಸಂಸ್ಥೆಗಳಾಗಿರುವುದರಿಂದ ಹಾಗೂ ಅಲ್ಲದೆಯೇ ಈ ನಿಟ್ಟಿನಲ್ಲಿ ವಿಷಯವು ಸರ್ಕಾರದ ಮಟ್ಟದಲ್ಲಿ ಬಾಕಿ ಇರುವುದರಿಂದ ಲೆಕ್ಕಪತ್ರಗಳಲ್ಲಿ ಅನುವು ಮಾಡುವುದು ಅಗತ್ಯವಿಲ್ಲ ಎಂಬುದಾಗಿ ಪರಿಗಣಿಸಿದ್ದುದಕ್ಕೆ ಸಂಬಂಧಿಸಿದಂತೆ.	ಈ ನಿಟ್ಟಿನಲ್ಲಿ ಎರಡು ನಿಗಮಗಳ ನಡುವೆ ವಿಷಯವನ್ನು ಇತ್ಯರ್ಥಗೊಳಿಸುವ ಸಲುವಾಗಿ ವಿಷಯವು ಸರ್ಕಾರದ ಮಟ್ಟದಲ್ಲಿ ಪರಿಗಣನೆಯ ಹಂತದಲ್ಲಿರುವುದು.
(ಇ) ಟಿಪ್ಪಣಿ ಸಂಖ್ಯೆ 18.06 – ಫಲಾನುಭವಿಗಳಿಂದ ಪಡೆದುಕೊಂಡು ಜಿಲ್ಲಾ ಕಚೇರಿಗಳಲ್ಲಿ ನಿರ್ವಹಿಸಿರುವ ಸಾಲದ ಪತ್ರಗಳು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಅಪೂರ್ಣವಾಗಿರುವುದು ಹಾಗೂ ಅಸಮರ್ಪಕವಾಗಿರುವುದು ಕಂಡುಬಂದಿದ್ದು ಸಾಲದ ಪತ್ರಗಳನ್ನು ಸರ್ವಾಂಗೀಣವಾಗಿ/ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಇಂದಿನದಿನದನ್ನಾಗಿ ಮಾಡುವಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿರುವುದಕ್ಕೆ ಸಂಬಂಧಿಸಿದಂತೆ.	ಫಲಾನುಭವಿಗಳಿಗೆ ಸಹಾಯಧನ ಹಾಗೂ ಸಾಲಗಳನ್ನು ಬಿಡುಗಡೆಗೊಳಿಸುವ ಮೊದಲು ಅಗತ್ಯ ದಾಖಲೆಗಳನ್ನು ಇಂದಿನದಿನದನ್ನಾಗಿ ಮಾಡುವ ಸಲುವಾಗಿ ಸುಸ್ಪಷ್ಟವಾದಂತಹ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದನ್ನು ಅನುಸರಿಸದಿರುವುದನ್ನು ಕಂಡು ಬಂದಲೆಲ್ಲಾ/ವರದಿ ಮಾಡಲ್ಪಟ್ಟೆಲ್ಲಾ ದಾಖಲೆಗಳನ್ನು ಇಂದಿನದಿನದನ್ನಾಗಿ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಎಫ್) ರಾಯಚೂರು ಜಿಲ್ಲಾ ಕಚೇರಿಯಲ್ಲಿ ಎರಡು ತನಿಖೆಗಳು ಪ್ರಗತಿಯಲ್ಲಿರುವವು ಹಾಗೂ ಈ ತನಿಖೆಗಳಿಗೆ ಸಂಬಂಧಿಸಿದಂತೆ ಒಳಗೊಂಡಿರುವಂತಹ ಮೊತ್ತಗಳು ರೂ.6,95,29,473/–ಗಳು; ರೂ.5,36,394/–ಗಳು (2012–13ರ ಅವಧಿಗೆ ಸಂಬಂಧಿಸಿದ್ದು) ಹಾಗೂ ರೂ.3,00,000/– (2014–15ರ ಅವಧಿಗೆ ಸಂಬಂಧಿಸಿದ್ದು] ಆಗಿರುತ್ತವೆ. [ಟಿಪ್ಪಣಿ ಸಂಖ್ಯೆ : 11.1.ಎ ಮತ್ತು 11.1.ಬಿ]	ಕರ್ನಾಟಕದ ಗೌರವಾನ್ವಿತ ಲೋಕಾಯುಕ್ತರು ರಾಯಚೂರು ಜಿಲ್ಲಾ ಕಚೇರಿಯಲ್ಲಿನ ಹಣಕಾಸಿನ ದುರುಪಯೋಗದ ಪ್ರಕರಣವನ್ನು ತನಿಖೆ ನಡೆಸುತ್ತಿರುವರು, ತನಿಖೆಯ ಮೇಲಿನ ವರದಿಯನ್ನು ಸ್ವೀಕರಿಸಿದ ನಂತರ ಸಂಬಂಧಿತ ಸಿಬ್ಬಂದಿಯಿಂದ/ಅಧಿಕಾರಿಗಳಿಂದ ಮೊತ್ತವನ್ನು ವಸೂಲಾತಿ ಮಾಡುವ ಸಲುವಾಗಿ ಕ್ರಮವನ್ನು ಕೈಗೊಳ್ಳಲಾಗುವುದು.
(ಜಿ) ಬಿದರ್ ಜಿಲ್ಲಾ ಕಚೇರಿಯಲ್ಲಿ 2016–17 ಹಣಕಾಸು ಸಾಲಿಗೆ ರೂ.10,00,017/– ರಷ್ಟು ಮೊತ್ತವನ್ನು ಒಳಗೊಂಡಂತೆ ಸ್ವಯಂ ಉದ್ಯೋಗ ಯೋಜನೆಯ ಅಡಿಯಲ್ಲಿ ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದಂತೆ ಒಂದು ತನಿಖೆಯು ಪ್ರಗತಿಯಲ್ಲಿರುವುದು. [ಟಿಪ್ಪಣಿ ಸಂಖ್ಯೆ : 11.1. ಸಿ]	ಶ್ರೀ ಚಂದ್ರಕಾಂತ್, ಬಿದರ್ ಜಿಲ್ಲಾ ಕಚೇರಿಯ ಹಿಂದಿನ ಜಿಲ್ಲಾ ವ್ಯವಸ್ಥಾಪಕರು, ಇವರಿಗೆ ನಿವೃತ್ತಿಯ ಸಮಯದಲ್ಲಿ ನೀಡಲಾಗುವ ಹಣಕಾಸಿನ ಪ್ರಯೋಜನಗಳಿಂದ ಹಣಕಾಸಿನ ನಷ್ಟಗಳನ್ನು ವಸೂಲಾತಿ ಮಾಡುವಂತೆ ಹಾಗೂ ನ್ಯಾಯಾಲಯದ ಆದೇಶದ ಪ್ರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರವರು ಆದೇಶಿಸಿರುವರು.
(ಎಚ್) ಆದಾಯ ತೆರಿಗೆ ಇಲಾಖೆಯು ಪಾವತಿಗಾಗಿ ಕೋರಿರುವಂತಹ ರೂ.1,67,00,708/– ಮೊತ್ತವು ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆಯಲ್ಲಿನ ಲೋಪದೋಷಗಳು/ತಪ್ಪುಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯೊಂದಿಗೆ ಸಮನ್ವಯಗೊಳಿಸುವುದು ಬಾಕಿಯಿರುತ್ತದೆ.	ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವಂತಹ ತೆರಿಗೆಯಲ್ಲಿನ ತಪ್ಪುಗಳು/ಲೋಪದೋಷಗಳ ಕಾರಣ ಆದಾಯ ತೆರಿಗೆ ಇಲಾಖೆಯು ಪಾವತಿಗಾಗಿ ಮಾಡಲಾಗಿರುವ ಕೋರಿಕೆಯನ್ನು ಸಮನ್ವಯಗೊಳಿಸುವ ಸಲುವಾಗಿ ಕ್ರಮವನ್ನು ಪ್ರಾರಂಭಿಸಲಾಗಿದೆ.
(ಐ) ಜಿಲ್ಲಾ ಕಚೇರಿಗಳಿಗೆ ಸೂಕ್ತವಾಗುವ ರೀತಿಯಲ್ಲಿ ರೂಪಿಸಲಾಗಿರುವಂತಹ ಔಪಚಾರಿಕ ಲೆಕ್ಕವನ್ನಿಡುವ ವ್ಯವಸ್ಥೆಯ ಬಗ್ಗೆ ಯಾವುದೇ ಮಾಹಿತಿಯನ್ನೂ ದಾಖಲೆಗಳಲ್ಲಿ ದಾಖಲಿಸಿರುವ ಹಾಗೂ ನಿರ್ದೇಶಕರುಗಳ ಮಂಡಳಿಯಿಂದ ಅನುಮೋದನೆಯನ್ನು ಪಡೆಯಲಾಗಿರುವ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ.	ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುವ ಕ್ರಮಗಳಿಗಾಗಿ ಹಾಗೂ ಅನುಪಾಲನೆಗಾಗಿ ಇದನ್ನು ಮಾರ್ಗಸೂಚಿಯಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ
(ಜೆ) ಟಿಪ್ಪಣಿ ಸಂಖ್ಯೆ 6.7 ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವಂತಹ ಅನುದಾನಗಳು ಹಿಂದಿನ ಸಾಲುಗಳಿಂದ ಮುಂದಿನ ಅವಧಿಗೆ ತರಲಾಗಿರುವಂತಹ ಹಾಗೂ ಇತರೆ ಸರ್ಕಾರಿ ಇಲಾಖೆಗಳಿಂದ ಸ್ವೀಕರಿಸಲಾಗಿರುವ ಮೊತ್ತ ರೂ.1,16,25,709/–ರಷ್ಟನ್ನು ಒಳಗೊಂಡಿದ್ದು, ಅದನ್ನು ಸಮನ್ವಯಗೊಳಿಸುವ ಅಗತ್ಯತೆಯಿರುತ್ತದೆ.	ಹಿಂದಿನ ಸಾಲಿನ ಅನುದಾನದಗಳು ಸಮನ್ವಯ ಪ್ರಕ್ರಿಯೆಯ ಅಡಿಯಲ್ಲಿರುತ್ತವೆ.
(ಕೆ) ಟಿಪ್ಪಣಿ ಸಂಖ್ಯೆ 18.09 – ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45–1 ಎ ಅಡಿಯಲ್ಲಿನ ಅನುವುಗಳ ಅಡಿಯಲ್ಲಿ ಬ್ಯಾಂಕೇತರ ಹಣಕಾಸು ನಿಗಮವನ್ನಾಗಿ ನೋಂದಣಿ ಮಾಡಿಸಿಕೊಂಡಿಲ್ಲದಿರುವುದು	ಶೇಕಡಾವಾರು ಹಣಕಾಸು ಆಸ್ತಿಗಳು ಒಟ್ಟಾರೆ ಆಸ್ತಿಗಳ ಶೇಕಡಾ 50ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿರುತ್ತವೆ ಹಾಗೂ ಹಣಕಾಸು ಆಸ್ತಿಗಳಿಂದ ಶೇಕಡಾವಾರು ವರಮಾನವು ಒಟ್ಟಾರೆ ವರಮಾನದ ಶೇಕಡಾ 50ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿರುತ್ತವೆ. ಕಂಪನಿಯ ಪ್ರಧಾನ ವ್ಯವಹಾರಕ್ಕಾಗಿನ ನಿರ್ಧಾರಕ ಅಂಶಗಳಾಗಿರುವಂತಹ ಈ ಪರಿಮಿತಿಗಳನ್ನು ತಲುಪಲಾಗಿರುವುದಿಲ್ಲ, ಆದ್ದರಿಂದ ನಿಗಮವು ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45 – 1 ಎ ಅಡಿಯಲ್ಲಿ ಅಗತ್ಯವಿರುವಂತೆ ಬ್ಯಾಂಕುಯೇತರ ಹಣಕಾಸು ನಿಗಮ ಎಂಬುದಾಗಿ ನೋಂದಣಿಯ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಅರ್ಹತೆಯನ್ನು ಹೊಂದಿರುವುದಿಲ್ಲ.

(ಎಲ್) ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಿಂದ ಪ್ರತ್ಯೇಕಿಸಿ ಸ್ಥಾಪಿಸಲಾಗಿರುವಂತಹ ಕಂಪನಿಯನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 8ರ ಅಡಿಯಲ್ಲಿ ನೋಂದಣಿ ಮಾಡಿಸಿರುವುದಿಲ್ಲ. ಇದು ಆದಾಯ ತೆರಿಗೆ ಅಧಿನಿಯಮ, 1961ರ ಪರಿಚ್ಛೇದ 10(26)(ಬಿ) ಅಡಿಯಲ್ಲಿನ ವಿನಾಯಿತಿಯ ಮೇಲೆ ಪರಿಣಾಮವನ್ನು ಭೀರಬಹುದು.	ಆದಾಯ ತೆರಿಗೆ ಅಧಿನಿಯಮದ ಪರಿಚ್ಛೇದ 10 (26) (ಬಿ) ತೆರಿಗೆ ವಿನಾಯಿತಿಯನ್ನು ನೀಡುವ ಸಲುವಾಗಿ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 8ರ ಅಡಿಯಲ್ಲಿ ನೋಂದಣಿಯ ಬಗ್ಗೆ ನಿರ್ದಿಷ್ಟಪಡಿಸಿರುವುದಿಲ್ಲ.ಆದಾಗ್ಯೂ, ಆದಾಯ ತೆರಿಗೆ ಇಲಾಖೆಯು 2014–15 ಹಣಕಾಸು ಸಾಲಿಗೆ ಆದಾಯ ತೆರಿಗೆಯನ್ನು ನಿಗಮಕ್ಕೆ ಮರುಪಾವತಿಸಿರುವುದು.
(ಎಂ) ನಮ್ಮ ಅಭಿಪ್ರಾಯದಲ್ಲಿ, ಕೆಲವು ಜಿಲ್ಲಾ ಕಚೇರಿಗಳಿಂದ ಸ್ವೀಕರಿಸಲಾಗಿರುವ ಮಾಸಿಕ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳನ್ನು ಪ್ರಧಾನ ಕಚೇರಿಯಲ್ಲಿ ಮಾಸಿಕ ಆಧಾರದ ಮೇರೆಗೆ ಲೆಕ್ಕವನ್ನಿಡದಿರುವುದು ಹಾಗೂ ತ್ವರಿತವಾಗಿ ಕ್ರಮವನ್ನು ತೆಗೆದುಕೊಳ್ಳಲು ಅಗತ್ಯವಿದ್ದಾಗ್ಯೂ ಎಲ್ಲಾ ಜಿಲ್ಲಾ ಕಚೇರಿಗಳ ಬ್ಯಾಂಕು ಖಾತೆಗಳನ್ನು ಮಾಸಿಕ ಆಧಾರದ ಮೇರೆಗೆ ಪ್ರಧಾನ ಕಚೇರಿಯಲ್ಲಿ ಸಮನ್ವಯಗೊಳಿಸದಿರುವುದನ್ನು ಹೊರತುಪಡಿಸಿದಂತೆ ಕಾನೂನಾತ್ಮಕವಾಗಿ ಅಗತ್ಯವಿರುವಂತೆ ಸಮರ್ಪಕವಾದಂತಹ ಲೆಕ್ಕಪತ್ರಗಳ ಪುಸ್ತಕಗಳನ್ನು, ನಿಗಮವು ಈವರೆವಿಗೂ ನಿರ್ವಹಿಸಿರುವುದು.	2018–19 ಸಾಲಿನಿಂದ ಜಿಲ್ಲಾ ಕಚೇರಿಗಳ ಸ್ವೀಕೃತಿಗಳು ಮತ್ತು ಪಾವತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿದೆ ಹಾಗೂ ಪ್ರಧಾನ ಕಚೇರಿಯಲ್ಲಿ ಮಾಸಿಕ ಆಧಾರದ ಮೇರೆಗೆ ಸಮನ್ವಯಗೊಳಿಸಲಾಗುತ್ತಿದೆ.
(ಒ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ ಪ್ರಸಕ್ತ ಸಾಲಿನಲ್ಲಿ ವ್ಯವಸ್ಥಾಪನೆಯು ಸ್ಥಿರಾಸ್ತಿಗಳನ್ನು ಭೌತಿಕವಾಗಿ ಪರಿಶೀಲಿಸಿರುವುದಿಲ್ಲ. ಈ ಕಾರಣದಿಂದ ಲೆಕ್ಕಪತ್ರಗಳ ಪುಸ್ತಕಗಳು ಹಾಗೂ ಭೌತಿಕ ದಾಸ್ತಾನಿನ ದಾಖಲೆಗಳ ನಡುವೆ ಯಾವುದಾದರೂ ವ್ಯತ್ಯಾಸಗಳು ಇದ್ದಲ್ಲಿ, ಅವುಗಳನ್ನು ಖಚಿತಪಡಿಸಿಕೊಂಡಿರುವುದಿಲ್ಲ ಹಾಗೂ ಲೆಕ್ಕಪತ್ರ ಪುಸ್ತಕಗಳಲ್ಲಿ ಅವುಗಳ ಬಗ್ಗೆ ಸೂಕ್ತ ರೀತಿಯಲ್ಲಿ ಹೊಂದಾಣಿಕೆ ನಮೂದುಗಳನ್ನು ಮಾಡಿರುವುದಿಲ್ಲ.	ಕಂಪನಿಯು ಸ್ಥಿರಾಸ್ತಿಗಳ ವಹಿಯನ್ನು ಇಂದಿನದಿನದನ್ನಾಗಿ ಮಾಡುವ ಪ್ರಕ್ರಿಯೆಯ ಅಡಿಯಲ್ಲಿರುತ್ತದೆ. ಇಂದಿನದಿನದನ್ನಾಗಿ ಮಾಡುವುದು ಪೂರ್ಣಗೊಂಡ ಕೂಡಲೆಯೇ, ಆಸ್ತಿಗಳ ಭೌತಿಕ ಪರೀಕ್ಷಣೆಯನ್ನು ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.
(1) ಪ್ರಧಾನ ಲೆಕ್ಕವನ್ನಿಡುವಿಕೆಯನ್ನು ನಿರ್ವಹಿಸುವ ಹಾಗೂ ಎಲ್ಲಾ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವಂತಹ ಪ್ರಧಾನ ಕಚೇರಿಗೆ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯು ಇರುವುದಿಲ್ಲ.	2018–19 ಹಣಕಾಸು ಸಾಲಿನಿಂದ ಪ್ರಧಾನ ಕಚೇರಿಗೆ ಆಂತರಿಕ ಲೆಕ್ಕನಿಯಂತ್ರಕರನ್ನು ನೇಮಕ ಮಾಡಲಾಗಿದೆ.
(2) ಜಿಲ್ಲಾ ಕಚೇರಿಗಳ ಮಟ್ಟಕ್ಕೆ ಸಂಬಂಧಿಸಿದಂತೆ ಆಂತರಿಕ ಲೆಕ್ಕಪರಿಶೋಧನಾ ವರದಿಗಳಲ್ಲಿ ಗಮನಿಸಲಾಗಿರುವಂತಹ ನಕಾರಾತ್ಮಕ/ಪ್ರತಿಕೂಲ ಅಂಶಗಳನ್ನು ಬಗೆಹರಿಸುವ ಹಾಗೂ ಸರಿಪಡಿಸುವಲ್ಲಿ ಆಡಳಿತಾತ್ಮಕ ವ್ಯವಸ್ಥೆಯ ಒಂದು ಭಾಗವಾಗಿ ಪರಿಪೂರ್ಣತೆಯನ್ನು ಖಚಿತಪಡಿಸಿಕೊಂಡಿರುವುದಿಲ್ಲ.	ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳಿಗೆ ಅನುಪಾಲನಾ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಹಾಗೂ ಅನುಪಾಲನಾ ವರದಿಗಳನ್ನು ಪ್ರಧಾನ ಕಚೇರಿಗೆ ಸಲ್ಲಿಸುವಂತೆ ಜಿಲ್ಲಾ ಕಚೇರಿಗಳನ್ನು ಪ್ರಧಾನ ಕಚೇರಿಯು ಒತ್ತಾಯಿಸುತ್ತಿರುವುದು.
(3) ಸಂಭವಿಸಿದ್ದಂತಹ ವಂಚನೆಯ ಪ್ರಕರಣಗಳ ತನಿಖೆಯು ಬಹಳ ಮಂದಗತಿಯಲ್ಲಿ ನಡೆಯುತ್ತಿರುವುದು. 2012–13 ಹಣಕಾಸು ಸಾಲಿನಲ್ಲಿ ಸಂಭವಿಸಿದ್ದಂತಹ ವಂಚನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ಇನ್ನೂ ಪೂರ್ಣಗೊಳಿಸಿರುವುದಿಲ್ಲ.	ಸರ್ಕಾರಿ ಕಚೇರಿಗಳಲ್ಲಿ ಇರುವಂತಹ ವಂಚನೆಗಳ ಸುಧಾರಣಾ ನಿರ್ವಹಣಾ ಕಾರ್ಯನೀತಿಗಳನ್ನು ಅನುಸರಿಸಲಾಗುತ್ತಿರುವುದು.
(4) ದಾಖಲೆಗಳ ನಿರ್ವಹಣೆಯು, ಆದಾಯ ತೆರಿಗೆ ನಿಯಮಗಳು ಹಾಗೂ ಕಂಪನಿ ನಿಯಮಗಳ ಅಗತ್ಯತೆಗೆ ತಕ್ಕಂತೆ ಸಮಯೋಚಿತವಾಗಿ ಲಭ್ಯವಿರುವುದನ್ನು ಖಚಿತಪಡಿಸುವುದಿಲ್ಲ.	ಸಮರ್ಪಕ ಕಡತಗಳನ್ನು ನಿರ್ವಹಿಸಲಾಗಿದೆ ಹಾಗೂ ಅಗತ್ಯ ಸಲ್ಲಿಕೆಗಳನ್ನು ಸಂಬಂಧಿತ ಕಚೇರಿಗಳಲ್ಲಿ/ಪ್ರಾಧಿಕಾರಗಳಲ್ಲಿ ಸಲ್ಲಿಸಲಾಗಿದೆ. ನಿಗಮದ ನಿಯಂತ್ರಣದಲ್ಲಿ ಇರದ ಕಾರಣಗಳಿಂದಾಗಿ ಸಲ್ಲಿಕೆಗಳನ್ನು ಸಲ್ಲಿಸುವಲ್ಲಿ ಕೆಲವು ಸಲ ವಿಳಂಬಗಳಾಗಿರುತ್ತವೆ.

(5) ಎಲ್ಲಾ ಜಿಲ್ಲೆಗಳಲ್ಲಿನ ಯೋಜನೆಗಳಿಗೆ ಸಂಬಂಧಿಸಿದಂತೆ ಸಮನ್ವಯ ತ:ಖ್ತೆಗಳ ಅನುಸಾರ ಬ್ಯಾಂಕು ಖಾತೆಗಳು ವಿವರಣೆಗಳಿಲ್ಲದ ಸಮನ್ವಯ ವ್ಯತ್ಯಾಸಗಳನ್ನು ಹೊಂದಿರುತ್ತವೆ.	2017–18 ಹಣಕಾಸು ಸಾಲಿಗೆ ಪ್ರಧಾನ ಕಚೇರಿಯೊಂದಿಗಿನ ಜಿಲ್ಲಾ ಕಚೇರಿಗಳ ಲೆಕ್ಕಪತ್ರಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಲಾಗಿದೆ ಹಾಗೂ 2018–19ರಲ್ಲಿ ಅಗತ್ಯ ತಿದ್ದುಪಡಿ ನಮೂದುಗಳನ್ನು ಮಾಡಲಾಗಿದೆ.
(6) ಸಾಲಗಳಿಗೆ ಸಂಬಂಧಿತ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸಾಲಗಳ ಮಂಜೂರಾತಿ ಮಾರ್ಗಸೂಚಿಗಳ ಅನುಸರಣೆಯು ತೃಪ್ತಿದಾಯಕವಾಗಿರುವುದಿಲ್ಲ.	ಮೇಲಿನ ಕ್ರಮ ಸಂಖ್ಯೆ (ಇ) ಪ್ರತಿಯಾಗಿ ತಿಳಿಸಿರುವಂತೆ.
(7) ನಮಗೆ ನೀಡಲಾಗಿರುವ ವಿವರಣೆಗಳ ಅನುಸಾರ ಜಿಲ್ಲಾ ಕಚೇರಿಗಳು ಹಾಗೂ ಪ್ರಧಾನ ಕಚೇರಿಯಲ್ಲಿ ಒಂದು ಪ್ರಮಾಣಕ/ಒಂದೇ ರೀತಿಯ ಕಾರ್ಯಾಚರಣೆಗಳಿಗೆ ಮಾರ್ಗದರ್ಶನ ಮಾಡುವ ಹಾಗೂ ಅದರ ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಔಪಚಾರಿಕವಾಗಿ ಅನುಮೋದನೆಗೊಂಡಿರುವ ಲೆಕ್ಕವನ್ನಿಡುವಿಕೆ ಕೈಪಿಡಿಯು ಇರುವುದಿಲ್ಲ.	ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕೈಪಿಡಿಗೆ ಅನುಮೋದನೆಯನ್ನು ಪಡೆಯುವಿಕೆಯ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು.
(8) ನಮಗೆ ನೀಡಲಾಗಿರುವ ವಿವರಣೆಗಳಂತೆ, ಔಪಚಾರಿಕವಾಗಿ ಅನುಮೋದಿಸಲ್ಪಟ್ಟಿರುವ ಹಾಗೂ ದಾಖಲೆಗಳಲ್ಲಿ ಇಡಲಾಗಿರುವಂತಹ ವಂಚನೆಗಳ ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯವಿಧಾನಗಳು ಇರುವುದಿಲ್ಲ.	ಮೇಲಿನ ಕ್ರಮ ಸಂಖ್ಯೆ (3)ರ ಪ್ರತಿಯಾಗಿ ತಿಳಿಸಿರುವಂತೆ.

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇದರ 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ವರ್ಷದ ಲೆಕ್ಕಪತ್ರಗಳ ಮೇಲೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 146(6) (ಬಿ) ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸಿನ ವರದಿಯ ಚೌಕಟ್ಟಿನ ಪ್ರಕಾರ 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ವರ್ಷಕ್ಕೆ **ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು,** ಇದರ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವ ಶಾಸನಬದ್ಧ ಲೆಕ್ಕಪರಿಶೋಧಕರು, ಕಂಪನಿಗಳ ಅಧಿನಿಯಮದ ಪರಿಚ್ಛೇದ 143ರ ಅನುಸಾರ ಅಧಿನಿಯಮದ ಪರಿಚ್ಛೇದ 143(1)ರ ಅಡಿಯಲ್ಲಿ ಲೆಕ್ಕಪರಿಶೋಧನೆಗಾಗಿ ನಿರ್ದಿಷ್ಟಪಡಿಸಲಾಗಿರುವ ಮಾನದಂಡಗಳ ಅನುಸಾರ ನಡೆಸಲಾದಂತಹ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಹಣಕಾಸು ತ:ಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಜವಾಬ್ದಾರರಾಗಿರುತ್ತಾರೆ. ಇದನ್ನು ಮಾಡಲಾಗಿದೆ ಎಂಬುದಾಗಿ ಅವರು ತಮ್ಮ 30.03.2019 ದಿನಾಂಕದ ಲೆಕ್ಕಪರಿಶೋಧನಾ ವರದಿಯ ಮೂಲಕ ತಿಳಿಸಿರುತ್ತಾರೆ.

ನಾವು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ, **ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು,** ಇದರ 31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಅಧಿನಿಯಮದ ಪರಿಚ್ಛೇದ 143(6) (ಎ) ಅಡಿಯಲ್ಲಿ ಒಂದು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿದೆವು.

ಈ ಪೂರಕ ಲೆಕ್ಕಪರಿಶೋಧನೆಯನ್ನು ಸ್ವತಂತ್ರವಾಗಿ ಶಾಸನಬದ್ಧ ಲೆಕ್ಕಪರಿಶೋಧಕರುಗಳ ಲೆಕ್ಕಪರಿಶೋಧನಾ ಕಾರ್ಯಕ್ಕೆ ಸಂಬಂಧಿತ ಕಾಗದಪತ್ರಗಳನ್ನು ಗಮನಿಸದೆಯೇ ನಡೆಸಲಾಯಿತು ಹಾಗೂ ಪ್ರಾಥಮಿಕವಾಗಿ ಶಾಸನಬದ್ಧಲೆಕ್ಕಪರಿಶೋಧಕರುಗಳ ಜೊತೆ ಹಾಗೂ ಕಂಪನಿಯ ಸಿಬ್ಬಂದಿಯ ಜೊತೆ ವಿಚಾರಣೆಗಳು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕೆಲವು ದಾಖಲೆಗಳ ಪರೀಕ್ಷಾ-ಪರಿಶೀಲನೆಗೆ ಸೀಮಿತಗೊಳಿಸಲಾಯಿತು. ಶಾಸನಬದ್ಧ ಲೆಕ್ಕಪರಿಶೋಧಕರುಗಳು ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಮಾಡಿರುವ ಪರಿಷ್ಕರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿಯಲ್ಲಿ 'ನಮ್ಮ ಅಭಿಪ್ರಾಯ' ಇದರ ಅಡಿಯಲ್ಲಿ ತಿಳಿಸಿರುವಂತೆ ಹಾಗೂ ಪೂರಕ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಎತ್ತಿತೋರಿಸಿರುವಂತೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಫಲವಾಗಿ, ಅಧಿನಿಯಮದ ಪರಿಚ್ಛೇದ 143 (6)(ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಗೆ ಪೂರಕವಾಗಿ ಇನ್ನೂ ಹೆಚ್ಚಿನ ಟೀಕೆಟಿಪ್ಪಣಿಗಳನ್ನು ಮಾಡಲು ನಮಗೆ ಯಾವುದೇ ಅಂಶಗಳು ಉಳಿದಿರುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗಾಗಿ ಮತ್ತು ಅವರ ಪರವಾಗಿ

-ಸಹಿ ಮಾಡಲಾಗಿದೆ-
(ಇ.ಪಿ. ನಿವೇದಿತಾ)
ಪ್ರಧಾನ ಮಹಾಲೇಖಾಪಾಲರು
(ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ: 06 ಸೆಪ್ಟೆಂಬರ್ 2019

ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಸದಸ್ಯರುಗಳಿಗೆ

ಹಣಕಾಸು ತ:ಖ್ತೆಗಳ ಮೇಲಿನ ವರದಿ

1. 31-3-2018ರಲ್ಲಿದ್ದಂತೆ ಆಸ್ತಿ-ಜವಾಬ್ದಾರಿ ತ:ಖ್ತೆ, ಆ ದಿನಾಂಕಕ್ಕೆ ಅಂತ್ಯಗೊಂಡಂತಹ ಪ್ರಸಕ್ತ ಸಾಲಿನ ಲಾಭ ಮತ್ತು ನಷ್ಟ ತ:ಖ್ತೆ, ಅದೇ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ಹಣಕಾಸಿನ ಹರಿವಿನ ತ:ಖ್ತೆ ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು ಹಾಗೂ ಅದಕ್ಕೆ ಲಗತ್ತಿಸಲಾಗಿರುವ ವಿವರಣಾತ್ಮಕ ಮಾಹಿತಿಯ ಸಂಕ್ಷಿಪ್ತ ವರದಿಯನ್ನು ಒಳಗೊಂಡಂತೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ("ನಿಗಮ"), ಈ ವರದಿಯ ಜೊತೆಯಲ್ಲಿರುವ ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ಹಣಕಾಸು ತ:ಖ್ತೆಗಳಿಗೆ ಸಂಬಂಧಿಸಿದಂತೆ ವ್ಯವಸ್ಥಾಪನೆಯ/ಆಡಳಿತ ಮಂಡಳಿಯ ಜವಾಬ್ದಾರಿ

2. ಕಂಪನಿಗಳ ಅಧಿನಿಯಮ, 2013ರ ("ಅಧಿನಿಯಮ") ಪರಿಚ್ಛೇದ 134 (5) ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ನಿಗಮದ ಹಣಕಾಸಿನ ಸ್ಥಿತಿಗತಿ, ಹಣಕಾಸಿಗೆ ಸಂಬಂಧಿತ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವಂತಹ ಈ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ಹಾಗೂ ಕಂಪನಿಯ ಹಣಕಾಸಿನ ಹರಿವಿನ ಸ್ಥಿತಿಗತಿಯನ್ನು ತೋರಿಸುವ ತ:ಖ್ತೆಯನ್ನು ಕಂಪನಿಗಳ (ಲೆಕ್ಕಪತ್ರಗಳು), ನಿಯಮ, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನೂ ಒಳಗೊಂಡಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ತಯಾರಿಸುವಲ್ಲಿ ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ಜವಾಬ್ದಾರಿಯುತವಾಗಿದೆ. ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆಗಳು ಮತ್ತಿತರ ನಿಯಮಬಾಹಿರತೆಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದಕ್ಕಾಗಿ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ದಾಖಲೆಗಳ ನಿರ್ವಹಣೆ, ಸೂಕ್ತವಾದಂತಹ ರೀತಿಯಲ್ಲಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಆಯ್ಕೆ ಹಾಗೂ ಅವುಗಳನ್ನು ಅನ್ವಯಗೊಳಿಸುವುದು, ನ್ಯಾಯಸಮ್ಮತ ಹಾಗೂ ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಅಂದಾಜುಗಳನ್ನು ಮಾಡುವುದು, ಹಾಗೂ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವಂತಹ ಹಾಗೂ ವಂಚನೆಗಳ ಕಾರಣವೇ ಆಗಿರಲಿ ಅಥವಾ ತಪ್ಪುಗಳನ್ನು ಎಸಗುವುದರ ಕಾರಣವೇ ಆಗಿರಲಿ, ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾದಂತಹ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವ ಸಲುವಾಗಿ ಪ್ರಸ್ತುತವಾದಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ದಾಖಲೆಗಳ ಯಥಾರ್ಥತೆಯನ್ನು ಮತ್ತು ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುವಂತಹ ಸಮರ್ಪಕ ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸುವುದು, ಕಾರ್ಯಗತಗೊಳಿಸುವುದು ಹಾಗೂ ನಿರ್ವಹಿಸುವುದನ್ನು ಕೂಡ ಒಳಗೊಂಡಿರುತ್ತದೆ.

ಲೆಕ್ಕಪರಿಶೋಧಕರ ಜವಾಬ್ದಾರಿ:

3. ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಭಾರತೀಯ ಚಾರ್ಟರ್ಡ್ ಅಕೌಂಟೆಂಟರುಗಳ ಸಂಸ್ಥೆಯು ನೀಡಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವ ಹಾಗೂ ಲೆಕ್ಕಪರಿಶೋಧನೆಯನ್ನು ನಡೆಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ.

4. ಹಣಕಾಸು ತ:ಖ್ತೆಗಳಲ್ಲಿ ತೋರಿಸಿರುವ ಮೊತ್ತಗಳು ಹಾಗೂ ಬಹಿರಂಗಪಡಿಸಿರುವಿಕೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಅಗತ್ಯವಿರುವ ದಾಖಲೆಗಳ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವ ಸಲುವಾಗಿ ಕಾರ್ಯವಿಧಾನಗಳನ್ನು ಅನುಸರಿಸುವುದನ್ನು ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಆಯ್ಕೆಮಾಡಿಕೊಳ್ಳಲಾಗುವ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣಗಳಿಂದಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣಗಳಿಂದಾಗಿರಲಿ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ. ಅಂತಹ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವಲ್ಲಿ, ಪ್ರಸ್ತುತ ಸಂದರ್ಭದಲ್ಲಿ ಸೂಕ್ತವೆನಿಸಬಹುದಾದ ಲೆಕ್ಕಪರಿಶೋಧನಾ ಕಾರ್ಯವಿಧಾನವನ್ನು ರೂಪಿಸುವ ಉದ್ದೇಶದಿಂದ, ಹಣಕಾಸು ತ:ಖ್ತೆಗಳನ್ನು ನ್ಯಾಯಸಮ್ಮತ ರೀತಿಯಲ್ಲಿ ಮಂಡಿಸುವಿಕೆಗೆ ನಿಗಮದ ಸಿದ್ಧತೆಗೆ ಸೂಕ್ತವೆನಿಸುವ, ಆಂತರಿಕ ನಿಯಂತ್ರಣವನ್ನು ಲೆಕ್ಕಪರಿಶೋಧಕರು ಪರಿಗಣಿಸುತ್ತಾರೆ. ಒಂದು ಲೆಕ್ಕಪರಿಶೋಧನೆಯು, ಬಳಸಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದನ್ನು ಹಾಗೂ ವ್ಯವಸ್ಥಾಪನೆಯು ಮಾಡಿದ್ದ ಲೆಕ್ಕವನ್ನಿಡುವುದಕ್ಕೆ ಸಂಬಂಧಿಸಿದಂತೆ ಮಾಡಲಾದ ಅಂದಾಜುಗಳ ನ್ಯಾಯಸಮ್ಮತತೆಯನ್ನು ಹಾಗೂ ಅಲ್ಲದೆಯೇ ಹಣಕಾಸು ತ:ಖ್ತೆಗಳ ಒಟ್ಟಾರೆ ಮಂಡನೆಯನ್ನು ಮೌಲ್ಯಮಾಪನ ಮಾಡುವುದನ್ನೂ ಸಹ ಒಳಗೊಂಡಿರುತ್ತದೆ.

5. ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು, ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿ ಒಂದು ಆಧಾರವನ್ನು ಒದಗಿಸುವಲ್ಲಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವನ್ನು ನಾವು ಹೊಂದಿರುವೆವು.

ನಮ್ಮ ಷರತ್ತುಬದ್ಧ / ವ್ಯತಿರಿಕ್ತ ಅಭಿಪ್ರಾಯಗಳಿಗೆ ಆಧಾರ :

6.ಇಲ್ಲಿಂದ ಮುಂದಕ್ಕೆ ಚರ್ಚಿಸಲ್ಪಟ್ಟಿರುವಂತಹ ವಿಷಯಗಳ ಗಮನಾರ್ಹತೆ/ಪ್ರಭಾವಗಳು, ಷರತ್ತುಬದ್ಧ/ವ್ಯತಿರಿಕ್ತ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿನ ಆಧಾರದಿಂದ ಕಂಪನಿಯ ಹಣಕಾಸಿನ ಮೇಲಿನ ಪ್ರಭಾವಗಳನ್ನು ಪರಿಮಾಣೀಕರಿಸಲು ಸಾಧ್ಯವಿರುವುದಿಲ್ಲ.

(ಎ) ಟಿಪ್ಪಣಿ ಸಂಖ್ಯೆ 1.09 – ಠೇವಣಿಗಳನ್ನು ಪುನರ್-ಹೂಡಿಕೆ ಮಾಡಿದ್ದರ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ ಗುತ್ತಿಗೆ ದರಗಳಲ್ಲಿ ಸರಳ ಬಡ್ಡಿಯ ಆಧಾರದ ಮೇರೆಗೆ ಸಂಚಿತಗೊಂಡಿದ್ದಿತು ಹಾಗೂ ನಿಯತಕಾಲಿಕ ಅಂತರಗಳಲ್ಲಿ ಸಂಯೋಜನೆಗೊಂಡಿದ್ದಿತು ಹಾಗೂ ಸರಳ ಬಡ್ಡಿ ಆಧಾರದಲ್ಲಿ ಸಂಚಿತಗೊಂಡಿದ್ದ ಬಡ್ಡಿಯ ಮೊತ್ತವನ್ನು ಠೇವಣಿಯ ಅವಧಿಯು ಮುಕ್ತಾಯಗೊಂಡ/ನವೀಕರಿಸಲಾದ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದಿತು.

(ಬಿ) ಟಿಪ್ಪಣಿ ಸಂಖ್ಯೆ 1.10 (iv) – ಹಿಂದಿನ ಸಾಲಿನ ಅಂತ್ಯದವರೆಗೆ ವಿತರಿಸಲಾಗಿದ್ದ ಸಾಲಗಳ ಮೇಲೆ ವಾರ್ಷಿಕ ಉಳಿಕೆ ಆಧಾರದ ಮೇರೆಗೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದುದರ ಬಗ್ಗೆ, ಟಿಪ್ಪಣಿ ಸಂಖ್ಯೆ 1.10 (v) – ಪ್ರಸಕ್ತ ಸಾಲಿನಲ್ಲಿ ವಿತರಿಸಲಾದ ಸಾಲದ ಮೇಲೆ ಬಡ್ಡಿಯನ್ನು ವಾಸ್ತವಿಕವಾಗಿ ವಿತರಿಸಲಾದ ದಿನಾಂಕದಿಂದ ಲೆಕ್ಕಹಾಕುವ ಬದಲು ವಿತರಣೆ ಮಾಡಲಾದ ತಿಂಗಳಿನ ಕಡೆಯ ದಿನದಿಂದ ಲೆಕ್ಕಹಾಕಲಾಗಿದ್ದರ ಬಗ್ಗೆ ಹಾಗೂ ಟಿಪ್ಪಣಿ ಸಂಖ್ಯೆ 12.1 – ಪಡೆದುಕೊಂಡಂತಹ ಸಾಲದ ಮರುಪಾವತಿಯಲ್ಲಿ ತಪ್ಪಿತಸ್ಥರಾಗಿದ್ದವರ ಸಾಲಗಳ ಮೇಲೆ ದಂಡದ ರೂಪದ ಬಡ್ಡಿಯನ್ನು ವಿಧಿಸಲು ಸಾಲದ ದಾಖಲೆಗಳು ಅನುವು ಮಾಡಿದ್ದವಾದರೂ, ಸಾಮಾನ್ಯ ದರಗಳಲ್ಲಿ ಬಡ್ಡಿಯನ್ನು ವಿಧಿಸಲಾಗಿದ್ದಿತು.

(ಸಿ) ಟಿಪ್ಪಣಿ ಸಂಖ್ಯೆ 9.1 – ಪ್ರಧಾನ ಕಚೇರಿಯಲ್ಲಿ ನಿರ್ವಹಿಸಲಾಗಿರುವಂತಹ ಲೆಕ್ಕಪತ್ರಗಳ ಪುಸ್ತಕಗಳ ಪ್ರಕಾರ ಇರುವಂತಹ ಶಿಲ್ಕಿಗೆ ಹೋಲಿಸಿದಲ್ಲಿ ಕೆಲವು ಜಿಲ್ಲಾ ಕಚೇರಿಗಳ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳ ಪ್ರಕಾರ ಬ್ಯಾಂಕು ಖಾತೆಗಳಲ್ಲಿ ಪ್ರಾರಂಭಿಕ ಶಿಲ್ಕಿನ ಅಡಿಯಲ್ಲಿ ರೂ.22,43,583/– (ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಯ ಪ್ರಕಾರ ಶಿಲ್ಕು ಅಧಿಕ ಪ್ರಮಾಣದಲ್ಲಿದೆ) ಮತ್ತು ಪ್ರಸಕ್ತ ಸಾಲಿನ ವ್ಯತ್ಯಾಸದ ಅಂತಿಮ ಶಿಲ್ಕು ರೂ. 7,56,56,876/- ಹಾಗೂ ಲೆಕ್ಕಪತ್ರಗಳ ಪುಸ್ತಕಗಳ ಅನುಸಾರ ಹೋಲಿಸಿದಲ್ಲಿ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಯ ಪ್ರಕಾರ ಬ್ಯಾಂಕು ಖಾತೆಗಳಲ್ಲಿ ಪ್ರಸಕ್ತ ಸಾಲಿನ ವ್ಯತ್ಯಾಸವು ರೂ.7,34,13,293/– ಆಗಿರುತ್ತದೆ

(ಡಿ)ಟಿಪ್ಪಣಿ 18.03 – ಡಾ. ಬಿಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತವು 2007–08ರಿಂದ 2012–13 ಅವಧಿಗೆ ವೆಚ್ಚಗಳ ಪಾಲಿನ ಕಡೆಗೆ ಜಿಲ್ಲಾ ಕಚೇರಿ ಮಟ್ಟದ ನಿಗಮದ ಕಾರ್ಯಚಟುವಟಿಕೆಗಳ ನಿರ್ವಹಣೆಗಾಗಿ ಮಾಡಿರುವ ರೂ.1433.00 ಲಕ್ಷ ಮೊತ್ತದಷ್ಟು ಕೋರಿಕೆಯನ್ನು, ಎರಡೂ ಸಂಸ್ಥೆಗಳು ಕರ್ನಾಟಕ ಸರ್ಕಾರದ ಸಂಸ್ಥೆಗಳಾಗಿರುವುದರಿಂದ ಹಾಗೂ ಅಲ್ಲದೆಯೇ ಈ ನಿಟ್ಟಿನಲ್ಲಿ ವಿಷಯವು ಸರ್ಕಾರದ ಮಟ್ಟದಲ್ಲಿ ಬಾಕಿ ಇರುವುದರಿಂದ ಲೆಕ್ಕಪತ್ರಗಳಲ್ಲಿ ಅನುವು ಮಾಡುವುದು ಅಗತ್ಯವಿಲ್ಲ ಎಂಬುದಾಗಿ ಪರಿಗಣಿಸಿದ್ದುದಕ್ಕೆ ಸಂಬಂಧಿಸಿದಂತೆ.

(ಇ) ಟಿಪ್ಪಣಿ ಸಂಖ್ಯೆ 18.06 – ಫಲಾನುಭವಿಗಳಿಂದ ಪಡೆದುಕೊಂಡು ಜಿಲ್ಲಾ ಕಚೇರಿಗಳಲ್ಲಿ ನಿರ್ವಹಿಸಿರುವ ಸಾಲದ ಪತ್ರಗಳು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಅಪೂರ್ಣವಾಗಿರುವುದು ಹಾಗೂ ಅಸಮರ್ಪಕವಾಗಿರುವುದು ಕಂಡುಬಂದಿದ್ದು ಸಾಲದ ಪತ್ರಗಳನ್ನು ಸರ್ವಾಂಗೀಣವಾಗಿ/ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಇಂದಿನದಿನದನ್ನಾಗಿ ಮಾಡುವಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿರುವುದಕ್ಕೆ ಸಂಬಂಧಿಸಿದಂತೆ.

(ಎಫ್) ರಾಯಚೂರು ಜಿಲ್ಲಾ ಕಚೇರಿಯಲ್ಲಿ ಎರಡು ತನಿಖೆಗಳು ಪ್ರಗತಿಯಲ್ಲಿರುವವು ಹಾಗೂ ಈ ತನಿಖೆಗಳಿಗೆ ಸಂಬಂಧಿಸಿದಂತೆ ಒಳಗೊಂಡಿರುವಂತಹ ಮೊತ್ತಗಳು ರೂ.6,95,29,473/–ಗಳು; ರೂ.5,36394/–ಗಳು (2012–13ರ ಅವಧಿಗೆ ಸಂಬಂಧಿಸಿದ್ದು) ಹಾಗೂ ರೂ.3,00,000/–ಗಳು (2014–15ರ ಅವಧಿಗೆ ಸಂಬಂಧಿಸಿದ್ದು] ಆಗಿರುತ್ತವೆ. [ಟಿಪ್ಪಣಿ ಸಂಖ್ಯೆ : 11.1.ಎ ಮತ್ತು 11.1.ಬಿ]

(ಜಿ) ಬಿದರ್ ಜಿಲ್ಲಾ ಕಚೇರಿಯಲ್ಲಿ 2016–17 ಹಣಕಾಸು ಸಾಲಿಗೆ ರೂ.10,00,017/–ರಷ್ಟು ಮೊತ್ತವನ್ನು ಒಳಗೊಂಡಂತೆ ಸ್ವಯಂ ಉದ್ಯೋಗ ಯೋಜನೆಯ ಅಡಿಯಲ್ಲಿ ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದಂತೆ ಒಂದು ತನಿಖೆಯು ಪ್ರಗತಿಯಲ್ಲಿರುವುದು. . [ಟಿಪ್ಪಣಿ ಸಂಖ್ಯೆ : 11.1. ಸಿ]

(ಎಚ್) ಆದಾಯ ತೆರಿಗೆ ಇಲಾಖೆಯು ಪಾವತಿಗಾಗಿ ಕೋರಿರುವಂತಹ ರೂ.1,67,00,708/–ರಷ್ಟು ಮೊತ್ತವು ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆಯಲ್ಲಿನ ಲೋಪದೋಷಗಳು/ತಪ್ಪುಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯೊಂದಿಗೆ ಸಮನ್ವಯಗೊಳಿಸುವುದು ಬಾಕಿಯಿರುತ್ತದೆ.

(ಐ) ಹಿಂದಿನ ಸಾಲುಗಳಲ್ಲಿ ಸಂಭವಿಸಿರುವ ವಂಚನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ 11.1ರ ಕಡೆಗೆ ಗಮನವನ್ನು ಸೆಳೆಯಲಾಗುತ್ತಿದೆ.

(ಜೆ) ಜಿಲ್ಲಾ ಕಚೇರಿಗಳಿಗೆ ಸೂಕ್ತವಾಗುವ ರೀತಿಯಲ್ಲಿ ರೂಪಿಸಲಾಗಿರುವಂತಹ ಔಪಚಾರಿಕ ಲೆಕ್ಕವನ್ನಿಡುವ ವ್ಯವಸ್ಥೆಯ ಬಗ್ಗೆ ಯಾವುದೇ ಮಾಹಿತಿಯನ್ನೂ ದಾಖಲೆಗಳಲ್ಲಿ ದಾಖಲಿಸಿರುವ ಹಾಗೂ ನಿರ್ದೇಶಕರುಗಳ ಮಂಡಳಿಯಿಂದ ಅನುಮೋದನೆಯನ್ನು ಪಡೆಯಲಾಗಿರುವ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ.

ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಹತ್ವಪೂರ್ಣ ಕಾರ್ಯನೀತಿಗಳು ಹಾಗೂ ಹಣಕಾಸು ತ:ಖ್ತೆಗಳ ಒಂದು ಅವಿಭಾಜ್ಯ ಅಂಗಗಳಾಗಿರುವ ಟಿಪ್ಪಣಿಗಳ ಜೊತೆಯಲ್ಲಿ ಓದಲ್ಪಡುವ ಮೇಲೆ ತಿಳಿಸಲಾಗಿರುವಂತಹ ಹಣಕಾಸು ತ:ಖ್ತೆಗಳು ಕಂಪನಿಗಳ ಅಧಿನಿಯಮ, 2013ರಲ್ಲಿ ಅಗತ್ಯವಿರುವ ಮಾಹಿತಿಯನ್ನು ಅಗತ್ಯವಿರುವ ರೀತಿಯಲ್ಲಿ ಹಾಗೂ **ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಅಭಿಪ್ರಾಯವನ್ನು ಈ ಕೆಳಗೆ ತಿಳಿಸಿರುವಂತೆ ನೀಡುವುದಿಲ್ಲ.**

(ಎ) ಆಸ್ತಿ–ಜವಾಬ್ದಾರಿ ತ:ಖ್ತೆಗೆ ಸಂಬಂಧಿಸಿದಂತೆ, ಮಾರ್ಚ್ 31, 2018ರಲ್ಲಿದ್ದಂತೆ ಕಂಪನಿಯ ಹಣಕಾಸು ವ್ಯವಹಾರಗಳು.

(ಬಿ) ಲಾಭ ಮತ್ತು ನಷ್ಟ ತ:ಖ್ತೆಗೆ ಸಂಬಂಧಿಸಿದಂತೆ, ಆ ದಿನಾಂಕದಂದು ಮುಕ್ತಾಯಗೊಂಡ ಸಾಲಿಗೆ.

(ಸಿ) ಹಣಕಾಸು ಹರಿವಿನ ತ:ಖ್ತೆಗೆ ಸಂಬಂಧಿಸಿದಂತೆ, ಆ ದಿನಾಂಕದಂದು ಮುಕ್ತಾಯಗೊಂಡಂತಹ ಸಾಲಿಗೆ.

ಸದಸ್ಯರುಗಳು ಗಮನ ಹರಿಸಬೇಕಾದ ವಿಷಯಗಳು:

7. ನಮ್ಮ ಅಭಿಪ್ರಾಯಗಳನ್ನು ಒಳಗೊಂಡಂತಹ ಕಂಡಿಕೆ –7ರಲ್ಲಿ ವಿವರಿಸಲಾಗಿರುವ ವಿಷಯಗಳ ಮಹತ್ವ/ಪ್ರಭಾವಗಳು ಹಾಗೂ ಅಲ್ಲದೆಯೇ ಹಣಕಾಸು ತ:ಖ್ತೆಗಳ ಮೇಲಿನ ಈ ಕೆಳಗಿನ ನಮ್ಮ ಅಭಿಪ್ರಾಯಗಳ ಬಗ್ಗೆ ನಾವು ಈ ಮೂಲಕ ಸದಸ್ಯರುಗಳ ಗಮನವನ್ನು ಸೆಳೆಯುತ್ತಿರುವೆವು.

(ಎ) ಟಿಪ್ಪಣಿ ಸಂಖ್ಯೆ 6.4 ಬುಡಕಟ್ಟು ಜನರ ಕ್ಷೇಮಾಭಿವೃದ್ಧಿಗಾಗಿನ ನಿರ್ದೇಶನಾಲಯಕ್ಕಾಗಿ ಇರುವ ಟ್ರಸ್ಟಿನ ಪ್ರತ್ಯೇಕ ಬ್ಯಾಂಕು ಖಾತೆಯಲ್ಲಿ ಹಾಗೂ ನಿಶ್ಚಿತ ಅವಧಿ ಠೇವಣಿ ಖಾತೆಗಳಲ್ಲಿ ಹೊಂದಿದ್ದ ಹಣಕಾಸಿನ ಮೇಲೆ ಗಳಿಸಲಾದ ಬಡ್ಡಿಯನ್ನು ನಿಗಮದ ವರಮಾನವನ್ನಾಗಿ ಪರಿಗಣಿಸಿರುವುದಕ್ಕೆ ಸಂಬಂಧಿಸಿದಂತೆ.

(ಬಿ) ಟಿಪ್ಪಣಿ ಸಂಖ್ಯೆ 6.3 ಎನ್‌ಎಸ್‌ಟಿಎಫ್‌ಡಿಸಿಯಿಂದ ಪಡೆದುಕೊಳ್ಳಲಾಗಿರುವ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ ಸಾಲ ಮರುಪಾವತಿಯಲ್ಲಿ ತಪ್ಪಿತಸ್ಥಗೊಂಡಿದ್ದರೂ ಸಹ ಸಾಮಾನ್ಯ ದರದಲ್ಲಿ ಬಡ್ಡಿ ಪಾವತಿಗೆ ಅನುವು ಮಾಡಿರುವುದು ಹಾಗೂ ಎನ್‌ಎಸ್‌ಟಿಎಫ್‌ಡಿಸಿಯು ಸಾಮಾನ್ಯ ಬಡ್ಡಿ ದರದ ಆಧಾರದ ಮೇರೆಗೆ ಸಾಲದ ಅಸಲು ಹಾಗೂ ಬಡ್ಡಿ ಬಾಕಿಗಳನ್ನು ಖಚಿತಪಡಿಸಿರುವುದು ಹಾಗೂ ಇದರಿಂದಾಗಿ ಪಾವತಿಸಬೇಕಾಗಬಹುದಾದ ಸುಸ್ತೀ ಬಡ್ಡಿಯ ಕಡೆಗೆ ಯಾವುದೇ ಪಾವತಿ ಕೋರಿಕೆಯೂ ಕಂಡು ಬರದಿರುವುದಕ್ಕೆ ಸಂಬಂಧಿಸಿದಂತೆ.

(ಸಿ) ಟಿಪ್ಪಣಿ ಸಂಖ್ಯೆ 6.7 ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವಂತಹ ಅನುದಾನಗಳು ಹಿಂದಿನ ಸಾಲುಗಳಿಂದ ಮುಂದಿನ ಸಾಲಿಗೆ ಮುಂದಕ್ಕೆ ತರಲಾಗಿರುವಂತಹ ಹಾಗೂ ಇತರೆ ಸರ್ಕಾರಿ ಇಲಾಖೆಗಳಿಂದ ಸ್ವೀಕರಿಸಲಾಗಿರುವ ಮೊತ್ತ ರೂ.1,16,25,709/–ರಷ್ಟನ್ನು ಒಳಗೊಂಡಿದ್ದು, ಅದನ್ನು ಸಮನ್ವಯಗೊಳಿಸುವ ಅಗತ್ಯತೆಯಿರುತ್ತದೆ.

(ಡಿ) ಟಿಪ್ಪಣಿ ಸಂಖ್ಯೆ 18.09 – ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45–1 ಎ ಅಡಿಯಲ್ಲಿನ ಅನುವುಗಳ ಅಡಿಯಲ್ಲಿ ಬ್ಯಾಂಕೇತರ

ಹಣಕಾಸು ನಿಗಮವನ್ನಾಗಿ ನೋಂದಣಿ ಮಾಡಿಸಿಕೊಂಡಿಲ್ಲದಿರುವುದು

(ಇ) ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಿಂದ ಪ್ರತ್ಯೇಕಿಸಿ ಸ್ಥಾಪಿಸಲಾಗಿರುವಂತಹ ಕಂಪನಿಯನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 8ರ ಅಡಿಯಲ್ಲಿ ನೋಂದಣಿ ಮಾಡಿಸಿರುವುದಿಲ್ಲ.

ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ

8. ಪರಿಚ್ಛೇದ 143ರ ಉಪ–ಪರಿಚ್ಛೇದ (11)ರ ಪ್ರಕಾರ, ಕೇಂದ್ರ ಸರ್ಕಾರವು (ಭಾರತ ಸರ್ಕಾರ) ನೀಡಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ (ಆದೇಶ) ಅಗತ್ಯತೆಯ ಅನುಸಾರ, ಮೇಲೆ ತಿಳಿಸಲಾದ ಆದೇಶದ ಕಂಡಿಕೆಗಳು 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಲಾಗಿರುವ ವಿಷಯಗಳ ಬಗ್ಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ **ಅನುಬಂಧ – ಎ** ನಲ್ಲಿ ನಾವು ನೀಡಿರುವೆವು.

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(5)ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಒಂದು ವರದಿಯನ್ನು **ಅನುಬಂಧ – ಬಿ** ಪ್ರಕಾರ ಲಗತ್ತಿಸಲಾಗಿದೆ.

ಅಧಿನಿಯಮದ ಪರಿಚ್ಛೇದ 143 (3)ರ ಅಗತ್ಯತೆಯ ಅನುಸಾರ ನಾವು ಈ ಕೆಳಗಿನಂತೆ ವರದಿಯನ್ನು ನೀಡುತ್ತಿರುವೆವು :

(ಎ) ನಮ್ಮ ಅತ್ಯುತ್ತಮ ಅರಿವು ಹಾಗೂ ನಂಬಿಕೆಯ ಪ್ರಕಾರ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವಿದ್ದಂತಹ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನೂ ನಾವು ಪಡೆದುಕೊಂಡಿರುವೆವು.

(ಬಿ) ನಮ್ಮ ಅಭಿಪ್ರಾಯದಲ್ಲಿ, ಕೆಲವು ಜಿಲ್ಲಾ ಕಚೇರಿಗಳಿಂದ ಸ್ವೀಕರಿಸಲಾಗಿರುವ ಮಾಸಿಕ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳನ್ನು ಪ್ರಧಾನ ಕಚೇರಿಯಲ್ಲಿ ಮಾಸಿಕ ಆಧಾರದ ಮೇರೆಗೆ ಲೆಕ್ಕವನ್ನಿಡದಿರುವುದು ಹಾಗೂ ತ್ವರಿತವಾಗಿ ಕ್ರಮವನ್ನು ತೆಗೆದುಕೊಳ್ಳಲು ಅಗತ್ಯವಿದ್ದಾಗ್ಯೂ ಎಲ್ಲಾ ಜಿಲ್ಲಾ ಕಚೇರಿಗಳ ಬ್ಯಾಂಕು ಖಾತೆಗಳನ್ನು ಮಾಸಿಕ ಆಧಾರದ ಮೇರೆಗೆ ಪ್ರಧಾನ ಕಚೇರಿಯಲ್ಲಿ ಸಮನ್ವಯಗೊಳಿಸದಿರುವುದನ್ನು ಹೊರತುಪಡಿಸಿದಂತೆ ಕಾನೂನಾತ್ಮಕವಾಗಿ ಅಗತ್ಯವಿರುವಂತೆ ಸಮರ್ಪಕವಾದಂತಹ ಲೆಕ್ಕಪತ್ರಗಳ ಪುಸ್ತಕಗಳನ್ನು, ನಿಗಮವು ಈವರೆವಿಗೂ ನಿರ್ವಹಿಸಿರುವುದು.

(ಸಿ) ಈ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ ಹಾಗೂ ಲಾಭ ಮತ್ತು ನಷ್ಟ ತ:ಖ್ತೆ ಹಾಗೂ ಹಣಕಾಸಿನ ಹರಿವು ತ:ಖ್ತೆಗಳು ಲೆಕ್ಕಪತ್ರ ಪುಸ್ತಕಗಳ ಜೊತೆ ತಾಳೆ ಹೊಂದುತ್ತವೆ.

(ಡಿ) ನಮ್ಮ ಅಭಿಪ್ರಾಯದಲ್ಲಿ, ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ, ಕಂಪನಿಗಳ ಅಧಿನಿಯಮ, 2013ರ ಷರತ್ತು (2)ರಲ್ಲಿ ಉಲ್ಲೇಖಿಸಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರವೇ ಆಸ್ತಿ ಮತ್ತು ಜವಾಬ್ದಾರಿಗಳ ತ:ಖ್ತೆಗಳು ಹಾಗೂ ಲಾಭ ಮತ್ತು ನಷ್ಟ ತ:ಖ್ತೆಗಳನ್ನು ತಯಾರಿಸಲ್ಪಟ್ಟಿವೆ.

(1) ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 15 – ಉದ್ಯೋಗಿಗಳಿಗೆ ನೀಡಲಾಗುವ ಅನುಕೂಲತೆಗಳಿಗೆ ಸಂಬಂಧಿಸಿದಂತೆ

ಕಂಪನಿಯು, ರಜೆ ನಗದೀಕರಣದ ಕಡೆಗೆ ಸಂಚಿತ ಜವಾಬ್ದಾರಿಯನ್ನು ಪರಿಗಣಿಸುತ್ತದೆಯಾದರೂ, ಅದು 31 ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ವಿಮಾ ವ್ಯವಹಾರದಲ್ಲಿ ಪ್ರೀಮಿಯಂ ಕಂತನ್ನು ಲೆಕ್ಕಹಾಕುವ ಆಧಾರದ ಮೇರೆಗೆ ಆಗಿರಲಿಲ್ಲ. ಮಾಹಿತಿಯ ಹಾಗೂ ಲೆಕ್ಕಾಚಾರಗಳ ಅನುಪಸ್ಥಿತಿಯಲ್ಲಿ, ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳಿಗೆ ಬದ್ಧವಾಗಿರದಿದ್ದುದು ಹಣಕಾಸು ತ:ಖ್ತೆಗಳ ಮೇಲೆ ಬೀರಿದ ಪ್ರಭಾವವನ್ನು ನಾವು ಪರಿಮಾಣೀಕರಿಸಲಾಗಲಿಲ್ಲ.

(ಇ) ಪರಿಚ್ಛೇದ 164 (2)ರ ಅಡಿಯಲ್ಲಿನ ಅಗತ್ಯತೆಯಾಗಿರುವಂತಹ ನಿರ್ದೇಶಕರುಗಳ ಮಂಡಳಿಯಲ್ಲಿ ಮುಂದುವರೆಯಲು ಅನರ್ಹರಾಗಿರುವಂತಹ ನಿರ್ದೇಶಕರುಗಳ ವಿವರಗಳು ಸರ್ಕಾರಿ ಕಂಪನಿಗಳಿಗೆ ಅನ್ವಯಗೊಳ್ಳುವುದಿಲ್ಲ.

(ಎಫ್) ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (1)ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿಯನ್ನು ಈ ವರದಿಯ ಅನುಬಂಧ 'ಸಿ'ಯಲ್ಲಿ ಲಗತ್ತಿಸಲಾಗಿದೆ.

(ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಿರುವ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳ ಅನುಸಾರ:

i. ನಮಗೆ ನೀಡಲಾಗಿರುವ ಮಾಹಿತಿಯಂತೆ ಅದರ ಹಣಕಾಸಿನ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರುವಂತಹ ಯಾವುದೇ ವಿವಾದಗಳನ್ನು ಕಂಪನಿಯು ಹೊಂದಿರುವುದಿಲ್ಲ.

ii. ಕಂಪನಿಯು ಜನ್ಯ ಗುತ್ತಿಗೆಗಳೂ ಸೇರಿದಂತೆ ಯಾವುದೇ ವಿಷಯಕ ನಿರೀಕ್ಷಿಸಬಹುದಾದ ನಷ್ಟಗಳನ್ನು ಹೊಂದಿರುವಂತಹ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ.

iii. ಹೂಡಿಕೆದಾರರ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸುವ ಅಗತ್ಯತೆಯಿರುವಂತಹ ಯಾವುದೇ ಮೊತ್ತಗಳನ್ನು ಕಂಪನಿಯು ಹೊಂದಿರುವುದಿಲ್ಲ.

ಬಿ.ಎಸ್.ಡಿ. ಅಂಡ್ ಕಂಪನಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ : 000312ಎಸ್

ಸಹಿ/–
ಆರ್. ದೇವರಾಜ್
ಪಾಲುದಾರರು
ಸದಸ್ಯತ್ವ ಸಂಖ್ಯೆ 028395

ಸ್ಥಳ : ಬೆಂಗಳೂರು
ದಿನಾಂಕ : 30 ಮಾರ್ಚ್ 2019

ಅನುಬಂಧ–ಎ

(ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿಯ ಅಡಿಯಲ್ಲಿ ಕಂಡಿಕೆ 8 ಎಂಬುದಾಗಿ ಉಲ್ಲೇಖಿಸಲ್ಪಡುವ)

(i) (ಎ) ನಿಗಮವು ಪರಿಮಾಣಕ ಹಾಗೂ ಸ್ಥಳದ ವಿವರಗಳನ್ನೂ ಒಳಗೊಂಡಂತೆ ಸ್ಥಿರಾಸ್ತಿಗಳ ವಹಿಯನ್ನು ನಿರ್ವಹಿಸಿದೆ. **ಆದಾಗ್ಯೂ, ಅದನ್ನು ಇಂದಿನದಿನದನ್ನಾಗಿ ಮಾಡುವ ಅಗತ್ಯತೆಯಿರುತ್ತದೆ.**

(ಬಿ) ನಮಗೆ ಒದಗಿಸಲಾಗಿರುವಂತಹ ಮಾಹಿತಿ ಹಾಗೂ ನೀಡಲಾಗಿರುವಂತಹ ವಿವರಣೆಗಳ ಅನುಸಾರ, **ಪ್ರಸಕ್ತ ಸಾಲಿಗೆ ವ್ಯವಸ್ಥಾಪನೆಯು/ಕಂಪನಿಯು ಸ್ಥಿರಾಸ್ತಿಗಳನ್ನು ಭೌತಿಕವಾಗಿ ಪರಿಶೀಲಿಸಿರುವುದಿಲ್ಲ. ಈ ಕಾರಣದಿಂದಾಗಿ, ಲೆಕ್ಕಪತ್ರ ಪುಸ್ತಕಗಳು ಹಾಗೂ ಭೌತಿಕ ದಾಖಲೆಗಳ ನಡುವೆ ವ್ಯತ್ಯಾಸಗಳು/ಅಸಾಂಗತ್ಯಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಹಾಗೂ ಲೆಕ್ಕಪುಸ್ತಕಗಳಲ್ಲಿ ಯಾವ ರೀತಿ ವ್ಯವಹರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.**

(ಸಿ) ಕಂಪನಿಯು ತುಮಕೂರಿನ ಉರ್ಡಿಗೆರೆ ಹೋಬಳಿಯ ಕ್ಯಾತಸಂದ್ರ ಗ್ರಾಮದ ಸರ್ವೆ ಸಂಖ್ಯೆ 93/3, 94/4ರಲ್ಲಿ 1 ಎಕರೆ ಮತ್ತು 15.08 ಗುಂಟೆಗಳಷ್ಟು ಸ್ಥಿರಾಸ್ತಿಯನ್ನು ಹೊಂದಿದ್ದು ಈ ನಿಟ್ಟಿನಲ್ಲಿ ತನ್ನ ಹೆಸರಿನಲ್ಲಿ ಹಕ್ಕು ಪತ್ರವನ್ನು ಹೊಂದಿರುವುದು, ಈ ಸ್ಥಿರಾಸ್ತಿಗಾಗಿ 15.02.2017ರಂದು ಮುಂಗಡ ಹಣವನ್ನು ಪಾವತಿಸಲಾಗಿರುವುದು.

(ii) ಸರಕುಸಾಮಗ್ರಿಗಳ ದಾಸ್ತಾನು

ಕಂಪನಿಯು ಸರಕುಸರಂಜಾಮುಗಳನ್ನು ತಯಾರಿಸುವ ಅಥವಾ ವ್ಯಾಪಾರವ್ಯವಹಾರಗಳನ್ನು ಮಾಡುವ ಕಂಪನಿಯಾಗಿರುವುದಿಲ್ಲ ಅಥವಾ ಸರಕುಸಾಮಗ್ರಿಗಳ ಉಗ್ರಾಣಗಳು, ಬಿಡಿ ಭಾಗಗಳು, ಕಚ್ಚಾ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ವ್ಯವಹರಿಸುವುದಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತುಗಳು (ii) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(iii) ಸಾಲಗಳು ಮತ್ತು ಮುಂಗಡಗಳು

ನಿಗಮವು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ನಿರ್ವಹಿಸಲ್ಪಟ್ಟಿರುವಂತಹ ವಹಿಯಲ್ಲಿ ವ್ಯಾಪಿಸುವಂತಹ ಕಂಪನಿಗಳಿಗೆ, ಸಂಸ್ಥೆಗಳಿಗೆ ಅಥವಾ ಇತರೆ ತಂಡಗಳಿಗೆ ಯಾವುದೇ ಭದ್ರತೆಯಿಂದ ಕೂಡಿದ ಅಥವಾ ಭದ್ರತೆಯಿಂದ ಕೂಡಿರದ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಕಂಪನಿಗಳಿಂದ, ಸಂಸ್ಥೆಗಳಿಂದ ಅಥವಾ ಇತರೆ ತಂಡಗಳಿಂದ ಯಾವುದೇ ಭದ್ರತೆಯಿಂದ ಕೂಡಿದ ಅಥವಾ ಭದ್ರತೆಯಿಂದ ಕೂಡಿರದ ಸಾಲಗಳನ್ನು ಪಡೆದಿರುವುದಿಲ್ಲ. ತತ್ಪರಿಣಾಮವಾಗಿ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಷರತ್ತುಗಳು (iii)(ಎ) ಮತ್ತು (iii) (ಬಿ) ಹಾಗೂ (iii)(ಸಿ) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

(iv) ಕಂಪನಿಯ ಹಿತಾಸಕ್ತಿಗಳಿಗೆ ಕೆಡಕುಂಟು ಮಾಡುವಂತಹ ಷರತ್ತುಗಳು ಮತ್ತು ನಿಬಂಧನೆಗಳು ಇರುವಲ್ಲಿ ಕಂಪನಿಯು ತನ್ನ ಉದ್ಯೋಗಿಗಳಿಗೆ, ನಿರ್ದೇಶಕರುಗಳಿಗೆ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಅಂತಹ ಸಾಲಗಳನ್ನು ಪಡೆದುಕೊಳ್ಳಲು ಖಾತರಿಗಳನ್ನು ನೀಡಿರುವುದಿಲ್ಲ.

(v) ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳಂತೆ, ನಿಗಮವು ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದಗಳು 58ಎ, 58ಎಎ ಅಥವಾ ಮತ್ಯಾವುದೇ ಸಂಬಂಧಿತ ಅನುವುಗಳು ಹಾಗೂ ಅಧಿನಿಯಮದ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅಡಿಯಲ್ಲಿ ಅರ್ಥೈಸುವಂತಹ ರೀತಿಯಲ್ಲಿ ಸಾರ್ವಜನಿಕರಿಂದ ಯಾವುದೇ ರೀತಿಯ ಠೇವಣಿಗಳನ್ನೂ ಸ್ವೀಕರಿಸಿರುವುದಿಲ್ಲ. ಆದ್ದರಿಂದ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 73ರಿಂದ 76 ಅಥವಾ ಇನ್ಯಾವುದೇ ಸಂಬಂಧಿತ ಅನುವುಗಳು ಅನ್ವಯಗೊಳ್ಳುವುದಿಲ್ಲ.

vi) ನಮಗೆ ಒದಗಿಸಲಾಗಿರುವಂತಹ ಮಾಹಿತಿಯ ಪ್ರಕಾರ ಹಾಗೂ ನಮಗೆ ನೀಡಲಾಗಿರುವಂತಹ ವಿವರಣೆಗಳ ಪ್ರಕಾರ, ವೆಚ್ಚ ಲೆಕ್ಕ/ಮೌಲ್ಯಗಳಿಗೆ ಸಂಬಂಧಿತ ದಾಖಲೆಗಳನ್ನು ನಿರ್ವಹಿಸುವಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 148(1)ರ ಅಡಿಯಲ್ಲಿ ನಿಗಮಕ್ಕೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿರುವುದಿಲ್ಲ.

vii) ಶಾಸನಬದ್ಧ ಬಾಕಿಗಳು

(ಎ) ನಮಗೆ ಒದಗಿಸಿದ ದಾಖಲೆಗಳ ಪ್ರಕಾರ, ಕಂಪನಿಯು ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ, ಭವಿಷ್ಯ ನಿಧಿ, ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ, ಕಾರ್ಮಿಕರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ, ಐಶ್ವರ್ಯ ತೆರಿಗೆ, ಸೇವಾ ತೆರಿಗೆ, ಆಮದು ಸುಂಕ, ಅಬಕಾರಿ ಶುಲ್ಕ, ಸೆಸ್ಸುಗಳು, ಇತರೆ ಶಾಸನಬದ್ಧ ಬಾಕಿಗಳನ್ನು ಇವುಗಳನ್ನು ಒಳಗೊಂಡಂತೆ ಅವಿವಾಧಿತ ಶಾಸನಬದ್ಧ ಬಾಕಿಗಳನ್ನು ಹಾಗೂ ಇನ್ನಿತರೆ ಶಾಸನಬದ್ಧ ಬಾಕಿಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಪಾವತಿಸುವಲ್ಲಿ ಸರ್ವೇಸಾಮಾನ್ಯವಾಗಿ ನಿಯತವಾಗಿದೆ:.

(ಬಿ) ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಯಂತೆ, ಯಾವುದೇ ವಿವಾದಗಳ ಕಾರಣ, ಸೂಕ್ತ ಪ್ರಾಧಿಕಾರಗಳಿಗೆ ವಿವಾದಗಳ ಕಾರಣ ಪಾವತಿಸಲು ಯಾವುದೇ ಶಾಸನಬದ್ಧ ಬಾಕಿಗಳೂ ಇರಲಿಲ್ಲ. **ಆದಾಗ್ಯೂ, ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆ ಪಾವತಿಯಲ್ಲಿ ತಪ್ಪಿತಸ್ಥಗೊಂಡಿರುವುದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯು ರೂ.1,67,00,708.71/–ರಷ್ಟು ಮೊತ್ತಕ್ಕೆ ತಗಾದೆ ನೋಟೀಸನ್ನು ನೀಡಿರುವುದಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ 18.04ರತ್ತ ಗಮನವನ್ನು ಸೆಳೆಯಲಾಗುತ್ತಿದೆ. ಈ ತಗಾದೆಯ ಮೊತ್ತವನ್ನು ಇಲಾಖೆಯ ಲೆಕ್ಕಪುಸ್ತಕಗಳ ಜೊತೆಯಲ್ಲಿ ಸಮನ್ವಯಗೊಳಿಸಿಕೊಳ್ಳುವ ಅಗತ್ಯತೆಯಿರುತ್ತದೆ.**

viii) ಲೆಕ್ಕಪತ್ರಗಳ ಪುಸ್ತಕಗಳನ್ನು ನಾವು ಪರಿಶೀಲಿಸಿದಂತೆ ಹಾಗೂ ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ಹಣಕಾಸು ಸಂಸ್ಥೆಗಳಿಗೆ, ಬ್ಯಾಂಕುಗಳಿಗೆ ಸರ್ಕಾರ ಹಾಗೂ ಡಿಬೆಂಚರುಗಳನ್ನು ಹೊಂದಿರುವವರಿಗೆ ಸಾಲಗಳ ಮರುಪಾವತಿ ಅಥವಾ ಅನ್ಯಥಾ ಪಡೆದುಕೊಂಡಿರುವ ಹಣಕಾಸನ್ನು ಮರುಪಾವತಿಸುವಲ್ಲಿ ತಪ್ಪಿತಸ್ತಗೊಂಡಿರುವುದಿಲ್ಲ.

ix) ಕಂಪನಿಯು ಸಾರ್ವಜನಿಕರಿಂದ ಪ್ರಾರಂಭಿಕ ಸಂಗ್ರಹಣೆಗಳು ಅಥವಾ ಸಾರ್ವಜನಿಕರಿಂದ ಹೆಚ್ಚುವರಿ ಸಂಗ್ರಹಣೆಗಳ ರೂಪದಲ್ಲಿ ಸಾಲ/ಋಣ ಸಾಧನಗಳೂ ಸೇರಿದಂತೆ ಸಾರ್ವಜನಿಕರಿಂದ ಯಾವುದೇ ಹಣಕಾಸನ್ನೂ ಸಂಗ್ರಹಿಸಿರುವುದಿಲ್ಲ, ಆದರೆ ಕಂಪನಿಯು ಎನ್‌ಎಸ್‌ಟಿಎಫ್‌ಡಿಸಿ ಯಿಂದ ಅವಧಿ ಸಾಲದ ಅನುಕೂಲತೆಯನ್ನು ಉಪಯೋಗಿಸಿಕೊಂಡಿರುವುದು. ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ ಪಡೆದುಕೊಳ್ಳಲಾಗಿರುವ ಸಾಲಗಳನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಗಿದ್ದಿತೋ, ಅಂತಹ ಉದ್ದೇಶಗಳಿಗಾಗಿಯೇ

ಬಳಸಿಕೊಳ್ಳಲಾಗಿರುವುದು. **ಆದಾಗ್ಯೂ, ತನ್ನ ಕಂಪನಿಯ ನಿಯಮನಿಬಂಧನೆಗಳಲ್ಲಿ ವಿವರಿಸಿರುವ ರೀತಿಯಲ್ಲಿ ಸಾಮಾಜಿಕ ಘಟಕಗಳಿಗೆ ಹಣಕಾಸನ್ನು ಒದಗಿಸುವ ಬದಲಾಗಿ ತಾನು ಪಡೆದುಕೊಂಡಿದ್ದ ಸಾಲದ ಮೊತ್ತದ ಪೈಕಿ ಬಹಳಷ್ಟು ಭಾಗವನ್ನು ಬ್ಯಾಂಕಿನ ನಿಶ್ಚಿತ ಅವಧಿ ಠೇವಣಿಗಳಲ್ಲಿ ಇಟ್ಟಿದ್ದಿತು.**

x) ಪತ್ತೆಹಚ್ಚಲಾಗಿರುವ ಹಾಗೂ ತನಿಖೆಯ ಹಂತದಲ್ಲಿರುವ ವಂಚನೆಯ ಪ್ರಕರಣಗಳನ್ನು ಹಣಕಾಸು ತ:ಖ್ತೆಗಳ ಟಿಪ್ಪಣಿ ಸಂಖ್ಯೆ 11.1ರ ಅಡಿಯಲ್ಲಿ ವರದಿ ಮಾಡಲಾಗಿದೆ. ನಮಗೆ ಒದಗಿಸಲಾದಂತಹ ಮಾಹಿತಿಯ ಅನುಸಾರ ತನಿಖೆಗಳು ಪ್ರಗತಿಯಲ್ಲಿರುತ್ತವೆ.

xi) ಕಂಪನಿಯು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 197ರ ಅನುವುಗಳಿಂದ ಅನುಮೋದಿಸಲ್ಪಟ್ಟಿರುವಂತೆ ಅಗತ್ಯ ಅನುಮೋದನೆಗಳೊಂದಿಗೆ ವ್ಯವಸ್ಥಾಪನಾ ಅಧಿಕಾರಿಗಳ ಸಂಬಳ–ಸಂಭಾವನೆಗಳನ್ನು ಪಾವತಿಸಿರುವುದು.

xii) ಇದು ಒಂದು ಸರ್ಕಾರಿ ಕಂಪನಿಯಾಗಿರುವುದರಿಂದ ಕಂಪನಿಗಳ (ಲೆಕ್ಕಪರಿಶೋಧನ್ಕರುಗಳ ವರದಿ) ಆದೇಶ, 2016ರ ಷರತ್ತು (xii) ಅನ್ವಯಗೊಳ್ಳುವುದಿಲ್ಲ.

xiii) ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸುವ ಹಾಗೂ ಲೆಕ್ಕಪರಿಶೋಧನಾ ಸಮಿತಿಯು ಹಣಕಾಸು ತ:ಖ್ತೆಗಳನ್ನು ಸಮೀಕ್ಷಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಯು ರಾಜ್ಯ ಸರ್ಕಾರದ ಒಂದು ಖಾಸಗಿ ಕಂಪನಿಯಾಗಿ ನೋಂದಣಿಯಾಗಿರುವುದರಿಂದ, ಅಧಿನಿಯಮದ ಪರಿಚ್ಛೇದ 177ರ ಅನುವುಗಳು ಅನ್ವಯಗೊಳ್ಳುವುದಿಲ್ಲ ಹಾಗೂ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 188ರ ಅನುಸಾರ ಸಂಬಂಧಿತ ತಂಡಗಳೊಂದಿಗೆ ಯಾವುದೇ ವ್ಯವಹಾರಗಳೂ ನಡೆದಿರುವುದಿಲ್ಲ.

xiv) ಕಂಪನಿಯು ಸಮೀಕ್ಷೆಯ ಅಡಿಯಲ್ಲಿನ ಸಾಲಿನಲ್ಲಿ ಷೇರುಗಳನ್ನು ಯಾವುದೇ ಆದ್ಯತೆಯ ಹಂಚಿಕೆ ಮಾಡಿರುವುದಿಲ್ಲ ಅಥವಾ ಆಯ್ದ ಖಾಸಗಿ ಹೂಡಿಕೆದಾರರುಗಳಿಗೆ ಷೇರುಗಳ ಖಾಸಗಿ ಹಂಚಿಕೆ ಮಾಡಿರುವುದಿಲ್ಲ ಅಥವಾ ಭಾಗಶ: ಪರಿವರ್ತಿಸಬಹುದಾದ ಡಿಬೆಂಚರುಗಳನ್ನು ನೀಡಿರುವುದಿಲ್ಲ. ಆದಾಗ್ಯೂ, ಕಂಪನಿಯು ಷೇರುಗಳ ಹಂಚಿಕೆಗಾಗಿ ಕೇಂದ್ರ ಸರ್ಕಾರದಿಂದ ಅನುಮೋದನೆಯು ಬಾಕಿಯಿರುವಂತೆ ಹಾಗೂ ಅದಕ್ಕೆ ಸಂಬಂಧಿತ ಪ್ರಕ್ರಿಯೆಯು ಪ್ರಗತಿಯಲ್ಲಿರುವಂತೆ, ಷೇರು ಬಂಡವಾಳವನ್ನು ಹೆಚ್ಚಳಗೊಳಿಸುವ ಸಲುವಾಗಿ ರಾಜ್ಯ ಸರ್ಕಾರದಿಂದ ರೂ.2.00 ಕೋಟಿ ಮೊತ್ತವನ್ನು ಸ್ವೀಕರಿಸಿರುವುದು.

xv) ಕಂಪನಿಯು ಯಾವುದೇ ನಿರ್ದೇಶಕರುಗಳೊಂದಿಗೆಯೇ ಆಗಲಿ ಅಥವಾ ಅವರುಗಳಿಗೆ ಸಂಬಂಧಿತ ವ್ಯಕ್ತಿಗಳೊಂದಿಗೆಯೇ ಆಗಲೀ ಯಾವುದೇ ನಗದು ವ್ಯವಹಾರಗಳನ್ನು ಮಾಡಿರುವುದಿಲ್ಲ.

xvi) ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45 – 1 ಎ ಅಡಿಯಲ್ಲಿ ಬ್ಯಾಂಕುಯೇತರ ಹಣಕಾಸು ನಿಗಮವನ್ನಾಗಿ ನೋಂದಣಿ ಮಾಡಿಸಿಕೊಳ್ಳುವ ಅಗತ್ಯತೆಯಿರುತ್ತದೆ.

ಬಿ.ಎಸ್.ಡಿ. ಅಂಡ್ ಕಂಪನಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ : 000312ಎಸ್

ಸಹಿ/–
ಆರ್. ದೇವರಾಜ್
ಪಾಲುದಾರರು
ಸದಸ್ಯತ್ವ ಸಂಖ್ಯೆ 028395

ಸ್ಥಳ : ಬೆಂಗಳೂರು
ದಿನಾಂಕ : 30 ಮಾರ್ಚ್ 2019

ಅನುಬಂಧ–ಬಿ

ಲೆಕ್ಕಪರಿಶೋಧಕರುಗಳ ವರದಿಗೆ ಅನುಬಂಧ

(ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ನಿರ್ದೇಶನಗಳಿಗೆ ಉತ್ತರಗಳು)

1. ಕಂಪನಿಯು ಬಂಡವಾಳ ಹಿಂಪಡೆಯುವುದಕ್ಕೆ ಆಯ್ಕೆಯಾಗಿದ್ದಲ್ಲಿ, ಆಸ್ತಿಗಳ (ಅಗೋಚರ/ಸ್ಪರ್ಷಿಸಲಾಗದ ಆಸ್ತಿಗಳು ಹಾಗೂ ಭೂಮಿಯೂ ಸೇರಿದಂತೆ) ಹಾಗೂ ಜವಾಬ್ದಾರಿಗಳ (ಬದ್ಧತೆಯಿಂದ ಕೂಡಿದ ಹಾಗೂ ಸಾಮಾನ್ಯ ಕಾದಿರಿಸಿದವುಗಳು ಸೇರಿದಂತೆ) ಹಾಗೂ ಬಂಡವಾಳವನ್ನು ಹಿಂಪಡೆಯುವ ಪ್ರಕ್ರಿಯೆಗಳ ಪದ್ಧತಿ/ವಾಡಿಕೆ ಹಾಗೂ ಪ್ರಸಕ್ತ ಹಂತವೂ ಒಳಗೊಂಡಂತೆ ಒಂದು ಸಂಪೂರ್ಣ ಸ್ಥಿತಿಗತಿಯ ವರದಿಯನ್ನು ಪರಿಶೀಲಿಸುವುದು.

ಕಂಪನಿಯು ಬಂಡವಾಳ ಹಿಂತೆಗೆತಕ್ಕೆ ಆಯ್ಕೆಯಾಗಿರುವುದಿಲ್ಲ.

2. ಋಣಗಳು/ಸಾಲಗಳು/ಬಡ್ಡಿ, ಇತ್ಯಾದಿಗಳನ್ನು ಮನ್ನಾ ಮಾಡಿರುವಂತಹ ಪ್ರಕರಣಗಳು ಯಾವುದಾದರೂ ಇದ್ದಲ್ಲಿ ವರದಿ ಮಾಡುವುದು. ಹೌದು ಎಂದಾದಲ್ಲಿ, ಅದಕ್ಕೆ ಕಾರಣಗಳು ಹಾಗೂ ಒಳಗೊಂಡಿರುವ ಮೊತ್ತವನ್ನು ತಿಳಿಸುವುದು.

ಅಂತಹ ಯಾವ ಪ್ರಕರಣವೂ ಇರುವುದಿಲ್ಲ.

3. ಮೂರನೇ ತಂಡಗಳ ಜೊತೆಯಲ್ಲಿ ಇರುವಂತಹ ಸರಕುಸಾಮಗ್ರಿಗಳಿಗಾಗಿ ಹಾಗೂ ಸರ್ಕಾರ ಅಥವ ಇತರೆ ಪ್ರಾಧಿಕಾರಗಳಿಂದ ಸ್ವೀಕರಿಸಲಾಗಿರುವ ಉಡುಗೊರೆ ಸಾಮಗ್ರಿಗಳಿಗೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಲಾಗಿದೆಯೆ.

ಅಂತಹ ಯಾವ ಪ್ರಕರಣವೂ ಇರುವುದಿಲ್ಲ.

4. ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇರುವುದಕ್ಕೆ ಕಾರಣಗಳು ಹಾಗೂ ನ್ಯಾಯಾಲಯದಲ್ಲಿ ಬಾಕಿಯಿರುವಂತಹ ಎಲ್ಲಾ ಪ್ರಕರಣಗಳ ಮೇಲಿನ ವೆಚ್ಚಗಳಿಗಾಗಿ ಒಂದು ಮೇಲ್ವಿಚಾರಣಾ ವ್ಯವಸ್ಥೆಯು ಇರುವಿಕೆ/ ಅದರ ಪರಿಣಾಮಕಾರಿತ್ವವೂ ಸೇರಿದಂತೆ ಕಾನೂನು/ವಿವಾದಿತ ಪ್ರಕರಣಗಳ ವರ್ಷವಾರು ವಿಶ್ಲೇಷಣೆಯ ಒಂದು ವರದಿ.

ನ್ಯಾಯಾಲಯದಲ್ಲಿ ಬಾಕಿಯಿರುವಂತಹ ಅಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಂತಹ ಉಪ–ನಿರ್ದೇಶನಗಳಿಗೆ ಉತ್ತರಗಳು)

1. ಬಾಕಿಗಳ ಇತ್ಯರ್ಥಕ್ಕಾಗಿ ಯಾವುದಾದರೂ ಯೋಜನೆಯನ್ನು ಪ್ರಾರಂಭಿಸಲಾಗಿದೆಯೆ ಹಾಗೂ ಅದರ ವಿಸ್ತರಣೆಯು ಕಂಪನಿಯ/ಸರ್ಕಾರದ ಕಾರ್ಯನೀತಿ/ಮಾರ್ಗಸೂಚಿಗಳ ಅನುಸಾರವೇ ಆಗಿರುವುದೆ.

ಅಂತಹ ಯಾವುದೇ ಯೋಜನೆಯೂ ಕಾರ್ಯಾಚರಣೆಯಲ್ಲಿರುವುದಿಲ್ಲ.

2. ಪ್ರತಿಯೊಂದು ಯೋಜನೆಗೂ ಸ್ವೀಕರಿಸಲಾಗಿರುವಂತಹ ಹಣಕಾಸಿಗೆ ಯೋಜನೆಯಲ್ಲಿನ ನಿರ್ದಿಷ್ಟ ಮಾರ್ಗಸೂಚಿಗಳ ಪ್ರಕಾರ ಲೆಕ್ಕವನ್ನಿಡಲಾಗಿದೆಯೆ ಹಾಗೂ ಅವುಗಳ ಶಿಲ್ಕುಗಳನ್ನು ನಿಯತವಾಗಿ ಸಮನ್ವಯಗೊಳಿಸಲಾಗಿದೆಯೆ ಹಾಗೂ ಯಾವುದಾದರೂ ವ್ಯತ್ಯಾಸಗಳನ್ನು/ಲೋಪದೋಷಗಳನ್ನು ಗಮನಿಸಿದ್ದಲ್ಲಿ, ಅವುಗಳನ್ನು ಹಣಕಾಸು ತ:ಖ್ತೆಗಳಲ್ಲಿ ಸಮರ್ಪಕವಾಗಿ ಗಣನೆಗೆ ತೆಗೆದುಕೊಳ್ಳಲಾಗಿದೆಯೆ.

ಹೌದು, ಆದಾಗ್ಯೂ, ಯೋಜನೆವಾರು ಸಮನ್ವಯಗೊಳಿಸುವುದು ಬಾಕಿಯಿರುತ್ತದೆ.

ಫಲಾನುಭವಿಗಳಿಂದ ಸ್ವೀಕರಿಸಲಾದಂತಹ ಮರುಪಾವತಿಗಳನ್ನು ವಿನಿಯೋಗಿಸುವ ಸಲುವಾಗಿ ಕಂಪನಿಯು ಒಂದು ಕಾರ್ಯನೀತಿಯನ್ನು ಹೊಂದಿರುವುದೆ ಹಾಗೂ ಅಂತಹ ಕಾರ್ಯನೀತಿಯು ಫಲಾನುಭವಿಯು ಯಾವ ಯೋಜನೆಯಿಂದ ಹಣಕಾಸನ್ನು ಸ್ವೀಕರಿಸಿದ್ದರೋ, ಆ ಯೋಜನೆಯ ಮಾರ್ಗಸೂಚಿಗಳ ಅನುಸಾರವೇ ಆಗಿದ್ದಿತೆ.

ಹೌದು, ಸಾಲಗಳಿಗೆ ಸಂಬಂಧಿತ ಲೆಡ್ಜರುಗಳನ್ನು ನಿರ್ವಹಿಸಲಾಗಿದೆ, ಬಡ್ಡಿಯನ್ನು ಸಮರ್ಪಕವಾಗಿ ಲೆಕ್ಕ ಹಾಕಿರುವುದಿಲ್ಲ.

3. ಕಂಪನಿಯು, ತಾನು ಭರಿಸಿದ ವೆಚ್ಚಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳ ಪಾಲನ್ನು ನಗದು ರೂಪದಲ್ಲಿ ಸ್ವೀಕರಿಸಿರುವುದೆ ಅಥವಾ ಕೂಲಿ ರೂಪದಲ್ಲಿ ಕಾಣಿಕೆಯಾಗಿ ಪಡೆದಿರುವುದೆ. ಫಲಾನುಭವಿಯ ಪಾಲನ್ನು ಕೂಲಿ ರೂಪದಲ್ಲಿ ಪಡೆದಿದ್ದಲ್ಲಿ ಕೂಲಿ ರೂಪದ ಕಾಣಿಕೆಯ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡಲಾಗಿರುವುದೆ ಹಾಗೂ ಕಂಪನಿಯ ಲೆಕ್ಕಪುಸ್ತಕಗಳಲ್ಲಿ ಸಮರ್ಪಕವಾಗಿ ಪರಿಗಣಿಸಲಾಗಿರುವುದೆ ?

ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.

4. ಕಂಪನಿಯು, ಸರ್ಕಾರದಿಂದ ಬರಬೇಕಾದಂತಹ ಸಹಾಯಧನಗಳ ಪಾವತಿಗಾಗಿ ಕೋರಿಕೆಗಳನ್ನು ಸಮಯೋಚಿತವಾಗಿ ಸಲ್ಲಿಸಿರುವುದೆ. ಪಾವತಿಗಾಗಿ ಕೋರಿಕೆಗಳನ್ನು ವಿಳಂಬದೊಂದಿಗೆ ಸಲ್ಲಿಸಿದ್ದಲ್ಲಿ, ಅವುಗಳನ್ನು ಕಂಪನಿಯ ಲೆಕ್ಕಪುಸ್ತಕಗಳಲ್ಲಿ ಸಮರ್ಪಕವಾಗಿ ಪರಿಗಣಿಸಲಾಗಿದೆಯೆ.

ಯಾವುದೇ ಸಹಾಯಧನ ಯೋಜನೆಯೂ ಕಾರ್ಯಾಚರಣೆಯಲ್ಲಿಲ್ಲ.

ಬಿ.ಎಸ್.ಡಿ. ಅಂಡ್ ಕಂಪನಿಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ : 000312ಎಸ್

ಸಹಿ/–
ಆರ್. ದೇವರಾಜ್
ಪಾಲುದಾರರು
ಸದಸ್ಯತ್ವ ಸಂಖ್ಯೆ 028395

ಸ್ಥಳ : ಬೆಂಗಳೂರು
ದಿನಾಂಕ : 30 ಮಾರ್ಚ್ 2019

ಅನುಬಂಧ – ಸಿ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಹಣಕಾಸು ತ:ಖ್ತೆಗಳ ಮೇಲೆ ಸ್ವತಂತ್ರ ಲೆಕ್ಕಪರಿಶೋಧಕರ ಅದೇ ದಿನಾಂಕದ ವರದಿಗೆ "ಅನುಬಂಧ ಸಿ".

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಹಣಕಾಸು ತ:ಖ್ತೆಗಳ ಮೇಲೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (i) ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ (ಕಂಪನಿ) 31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು, ಅದೇ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ಕಂಪನಿಯ ಪ್ರತ್ಯೇಕ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ನಾವು ಲೆಕ್ಕಪರಿಶೋಧನೆಯನ್ನು ಮಾಡಿರುವೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗಾಗಿ ವ್ಯವಸ್ಥಾಪನೆಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ನಿಗಮದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ನಿಗಮದ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರುಗಳ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು.

ಅಧಿನಿಯಮದ ಅನುವುಗಳು, ಲೆಕ್ಕವನ್ನಿಡುವಿಕೆಯ ಹಾಗೂ ಲೆಕ್ಕಪರಿಶೋಧನೆಯ ಮಾನದಂಡಗಳು ಹಾಗೂ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ವಿಷಯಗಳನ್ನು ನಾವು ಗಣನೆಗೆ ತೆಗೆದುಕೊಂಡಿರುವೆವು. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ಹಣಕಾಸು ವರದಿಯ ಮೇಲೆ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಸ್ಥಾಪಿಸಲಾಗಿದೆಯೇ ಹಾಗೂ ನಿರ್ವಹಿಸಲಾಗಿದೆಯೇ ಹಾಗೂ ಅಂತಹ ನಿಯಂತ್ರಣಗಳನ್ನು ಎಲ್ಲಾ ವಿಷಯಕಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಗೊಳಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಒಂದು ನ್ಯಾಯ ಸಮ್ಮತ ಭರವಸೆಯನ್ನು ಪಡೆಯುವ ಸಲುವಾಗಿ ನಾವು ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಆ ಮಾನದಂಡಗಳು ಮತ್ತು ಮಾರ್ಗಸೂಚಿಗಳ ಟಿಪ್ಪಣಿಗಳು ಅಗತ್ಯತೆಯನ್ನು ಹೊಂದಿರುತ್ತವೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳು ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣ ವ್ಯವಸ್ಥೆಗಳ ಒಂದು ತಿಳಿವಳಿಕೆ, ಒಂದು ವಿಷಯಕ ದುರ್ಬಲತೆಯು ಇರಬಹುದಾದ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ರೂಪುರೇಷೆ/ವಿನ್ಯಾಸವನ್ನು ಪರೀಕ್ಷಣೆ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಪರಿಣಾಮಕಾರಿತ್ವದಿಂದ ಕೂಡಿದ ಆಂತರಿಕ ನಿಯಂತ್ರಣವನ್ನು ಕಾರ್ಯಾಚರಣೆಗೊಳಿಸಿರುವುದರ ಸಮರ್ಪಕತೆಯ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯವಿಧಾನಗಳನ್ನು ಅನುಸರಿಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ.

ಆಯ್ಕೆ ಮಾಡಲಾಗುವ ಕಾರ್ಯವಿಧಾನಗಳು ವಂಚನೆಗಳು ಅಥವಾ ತಪ್ಪುಗಳ ಕಾರಣದಿಂದ ಸಂಭವಿಸಿರಬಹುದಾದ ಹಣಕಾಸು ತ:ಖ್ತೆಗಳಲ್ಲಿನ ವಿಷಯಕ ತಪ್ಪು ಹೇಳಿಕೆಗಳು ಇವುಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನದ ಮೇಲೆ ಅವಲಂಭಿತವಾಗಿರುತ್ತದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ನಿಯಂತ್ರಣಗಳ ವ್ಯವಸ್ಥೆಯ ಮೇಲೆ ನಮ್ಮ ನಕಾರಾತ್ಮಕ/ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರವಾಗಿ ಈ ಕೆಳಗೆ ವಿವರಿಸಲಾಗಿರುವಂತಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಷರತ್ತಿಗೆ ಒಳಪಟ್ಟಂತೆ ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ನಿಯಂತ್ರಣಗಳ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ಒಂದು ಆಧಾರವನ್ನು ಒದಗಿಸುವಲ್ಲಿ ಸಮರ್ಪಕವಾಗಿರುತ್ತವೆ ಹಾಗೂ ಸೂಕ್ತವಾಗಿರುತ್ತವೆ ಎಂಬ ವಿಶ್ವಾಸವು ನಮಗಿರುವುದು.

ಷರತ್ತುಬದ್ಧ ನಕಾರಾತ್ಮಕ ಅಭಿಪ್ರಾಯಕ್ಕೆ ಆಧಾರ

1. ಕಂಪನಿಯು ಸಮರ್ಪಕ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಪ್ರಮುಖ ಲೆಕ್ಕಪತ್ರಗಳ ನಿರ್ವಹಣೆಯನ್ನು ಮಾಡುವ ಹಾಗೂ ಇತರೆ ಎಲ್ಲಾ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವಂತಹ

ಪ್ರಧಾನ ಕಚೇರಿಯು ಆಂತರಿಕ ನಿಯಂತ್ರಣದ ಅಡಿಯಲ್ಲಿ ವ್ಯಾಪಿಸಿರುವುದಿಲ್ಲ.

2. ಆಡಳಿತಾತ್ಮಕ ವ್ಯವಸ್ಥೆಯ ಒಂದು ಭಾಗವಾಗಿ, ಜಿಲ್ಲಾ ಕಚೇರಿಗಳ ಮಟ್ಟಕ್ಕೆ ಸಂಬಂಧಿಸಿದಂತೆ ಆಂತರಿಕ ಲೆಕ್ಕಪರಿಶೋಧನಾ ವರದಿಗಳಲ್ಲಿ ಗಮನಿಸಲಾಗಿರುವಂತಹ ನಕಾರಾತ್ಮಕ ಅಂಶಗಳನ್ನು ಬಗೆಹರಿಸುವ ಸಲುವಾಗಿ ಹಾಗೂ ಅವುಗಳನ್ನು ಸರಿಪಡಿಸುವ ಸಲುವಾಗಿ ಪರಿಪೂರ್ಣತೆಯಿಂದ ಕೂಡಿದ ಕ್ರಮಗಳನ್ನು ಖಚಿತಪಡಿಸಿಕೊಂಡಿರುವುದಿಲ್ಲ

3. ಸಂಭವಿಸಿರುವಂತಹ ವಂಚನೆಗಳಿಗೆ ಸಂಬಂಧಿಸಿದಂತೆ ತನಿಖೆಗಳ ಪ್ರಗತಿಯು ಬಹಳ ಮಂದಗತಿಯಲ್ಲಿರುವುದು. 2012–13 ಹಣಕಾಸು ಸಾಲಿನಲ್ಲಿ ಸಂಭವಿಸಿದ್ದಂತಹ ವಂಚನೆಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ಇನ್ನೂ ಪೂರ್ಣಗೊಳಿಸಿರುವುದಿಲ್ಲ.

4. ದಾಖಲೆಗಳ ನಿರ್ವಹಣೆಯು, ಆದಾಯ ತೆರಿಗೆ ನಿಯಮಗಳು ಹಾಗೂ ಕಂಪನಿ ನಿಯಮಗಳ ಅಗತ್ಯತೆಗೆ ತಕ್ಕಂತೆ ಸಮಯೋಚಿತವಾಗಿ ಲಭ್ಯವಿರುವುದನ್ನು ಖಚಿತಪಡಿಸುವುದಿಲ್ಲ.

5. ಎಲ್ಲಾ ಜಿಲ್ಲೆಗಳಲ್ಲಿನ ಯೋಜನೆಗಳಿಗೆ ಸಂಬಂಧಿಸಿದಂತೆ ಸಮನ್ವಯ ತಃಖ್ತೆಗಳ ಅನುಸಾರ ಬ್ಯಾಂಕು ಖಾತೆಗಳು ವಿವರಣೆಗಳಿಲ್ಲದ ಸಮನ್ವಯ ವ್ಯತ್ಯಾಸಗಳನ್ನು ಹೊಂದಿರುತ್ತವೆ.

6. ಸಾಲಗಳಿಗೆ ಸಂಬಂಧಿತ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸಾಲಗಳ ಮಂಜೂರಾತಿ ಮಾರ್ಗಸೂಚಿಗಳ ಅನುಸರಣೆಯು ತೃಪ್ತಿದಾಯಕವಾಗಿರುವುದಿಲ್ಲ.

7. ಜಿಲ್ಲಾ ಕಚೇರಿಗಳು ಹಾಗೂ ಪ್ರಧಾನ ಕಚೇರಿಯಲ್ಲಿ ಒಂದು ಪ್ರಮಾಣಕ/ಒಂದೇ ರೀತಿಯ ಕಾರ್ಯಾಚರಣೆಗಳಿಗೆ ಮಾರ್ಗದರ್ಶನ ಮಾಡುವ ಹಾಗೂ ಅದರ ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಔಪಚಾರಿಕವಾಗಿ ಅನುಮೋದನೆಗೊಂಡಿರುವ ಲೆಕ್ಕವನ್ನಿಡುವಿಕೆಯ ಕೈಪಿಡಿಯು ಇರುವುದಿಲ್ಲ.

8. ನಮಗೆ ನೀಡಲಾದ ವಿವರಣೆಗಳಂತೆ ಔಪಚಾರಿಕವಾಗಿ ಅನುಮೋದಿಸಲ್ಪಟ್ಟಿರುವ ಹಾಗೂ ದಾಖಲೆಗಳಲ್ಲಿ ನಿರ್ವಹಿಸಲ್ಪಟ್ಟಿರುವ ವಂಚನೆಗಳ ಸಂಭಾವ್ಯ ಅಪಾಯಗಳ ನಿರ್ವಹಣಾ ಕಾರ್ಯವಿಧಾನಗಳು ಇರುವುದಿಲ್ಲ.

ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ

ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಒಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ತಯಾರಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು,

(1) ನಿಗಮದ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ವ್ಯವಸ್ಥೆಯನ್ನು ಸವಿವರವಾದಂತಹ ರೀತಿಯಲ್ಲಿ ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ತೋರಿಸುವುದು

(2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ನಿಗಮದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು. ಹಾಗೂ

(3) ಹಣಕಾಸು ತಃಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಹೊಂದಿರುವಂತಹ ನಿಗಮದ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೇವಾರಿಯನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದು ಇವುಗಳನ್ನು ಒಳಗೊಂಡಿರುತ್ತದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತವು ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನದ ಪ್ರಕ್ಷೇಪಣೆಗಳು ಮುಂದಿನ ಅವಧಿಗಳಿಗೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಪರಿಸ್ಥಿತಿಯಲ್ಲಿನ ಬದಲಾವಣೆಗಳು ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳ ಅನುಸರಣೆಯ ಮಟ್ಟವು ಕಡಿಮೆಗೊಂಡಿರಬಹುದಾದ/ ಹದಗೆಟ್ಟಿರಬಹುದಾದ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತವೆ.

ನಮ್ಮ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ, ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಲಾಗಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯು ಸ್ಥಾಪಿಸಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣದ ಆಧಾರದ ಮೇರೆಗೆ ಕಂಪನಿಯು ಮೇಲೆ ತಿಳಿಸಲಾಗಿರುವಂತಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ಷರತ್ತಿಗೆ ಒಳಪಟ್ಟಂತೆ ಹಣಕಾಸು ವರದಿಯ ಮೇಲೆ ಒಂದು ಸಮರ್ಪಕ ಆಂತರಿಕ ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರುವುದು ಹಾಗೂ ಅಂತಹ ಆಂತರಿಕ ಹಣಕಾಸು ವರದಿಯು ಮಾರ್ಚ್ 31, 2018ರಿಂದ ಜಾರಿಗೆ ಬಂದಂತೆ ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಯಲ್ಲಿರುವುದು.

ಬಿ.ಎಸ್.ಡಿ. ಅಂಡ್ ಕಂಪನಿಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ : 000312ಎಸ್

ಸಹಿ/–
ಆರ್. ದೇವರಾಜ್
ಪಾಲುದಾರರು
ಸದಸ್ಯತ್ವ ಸಂಖ್ಯೆ 028395

ಸ್ಥಳ : ಬೆಂಗಳೂರು
ದಿನಾಂಕ : 30 ಮಾರ್ಚ್ 2019

ಟಿಪ್ಪಣಿ ಸಂಖ್ಯೆ 1 :
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಹತ್ವಪೂರ್ಣ ಕಾರ್ಯನೀತಿಗಳು:
ಹಣಕಾಸು ತ:ಖ್ತೆಗಳ ತಯಾರಿಕೆಗೆ ಆಧಾರ

1.01 ಅನ್ಯಥಾ ತಿಳಿಸದ ಹೊರತು ಹಣಕಾಸು ತ:ಖ್ತೆಗಳನ್ನು ಚಾರಿತ್ರಿಕ/ದಾಖಲೆಗಳಲ್ಲಿ ನಮೂದಿಸಲಾಗಿರುವ ಮೌಲ್ಯಗಳ ಆಧಾರದ ಮೇರೆಗೆ ತಯಾರಿಸಲಾಗುತ್ತದೆ ಹಾಗೂ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳು ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಡ್ಡಾಯ ಕಾರ್ಯನೀತಿಗಳು ಹಾಗೂ ಕಂಪನಿಗಳ ಅಧಿನಿಯಮ, 2013ರ ಅನುವುಗಳ ಪ್ರಕಾರವೇ ಆಗಿರುತ್ತವೆ.

ಸ್ಥಿರಾಸ್ತಿಗಳು ಮತ್ತು ಸವಕಳಿ

1.02 ಸ್ಥಿರಾಸ್ತಿಗಳನ್ನು ಕ್ರೋಡೀಕೃತ ಸವಕಳಿಯನ್ನು ಕಳೆದು ನಿವ್ವಳ ಖರೀದಿ ಮೌಲ್ಯದಲ್ಲಿ ತಿಳಿಸಲಾಗುತ್ತದೆ. ಆಸ್ತಿಯನ್ನು ಅಸ್ತಿತ್ವಕ್ಕೆ ತರುವಲ್ಲಿ ಹೊರಿಸಬಹುದಾದ ಸಾಗಾಣಿಕೆ ವೆಚ್ಚಗಳು, ಸುಂಕಗಳು, ತೆರಿಗೆಗಳು ಹಾಗೂ ಇನ್ನಿತರೆ ಸಂಭವನೀಯ ವೆಚ್ಚಗಳನ್ನು ಮೌಲ್ಯವು ಒಳಗೊಂಡಿರುತ್ತದೆ.

1.03 ಸವಕಳಿಯನ್ನು ಕಂಪನಿಗಳ ಅಧಿನಿಯಮ 2013ರ ಷೆಡ್ಯೂಲು ಖಖರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ಹಾಗೂ ಪ್ರತೀ ವರ್ಷವೂ ಸಮಾನ ಕಂತುಗಳಲ್ಲಿ ಮೌಲ್ಯವನ್ನು ಕಡಿಮೆಗೊಳಿಸುವ (ಸ್ಟ್ರೈಟ್ ಲೈನ್) ಪದ್ಧತಿಯಲ್ಲಿ ವೆಚ್ಚಕ್ಕೆ ಹಾಕಲಾಗುವುದು.

1.04 ಪ್ರಸಕ್ತ ಸಾಲಿನಲ್ಲಿ ಸೇರ್ಪಡೆಗೊಂಡಂತಹ/ವಿಲೆವಾರಿ ಮಾಡಲಾದಂತಹ/ತೆಗೆದುಹಾಕಲಾದಂತಹ ಆಸ್ತಿಗಳ ಮೇಲಿನ ಸವಕಳಿಯನ್ನು ಸೇರ್ಪಡೆಗೊಂಡಂತಹ ದಿನಾಂಕದಿಂದ/ವಿಲೆವಾರಿ ಮಾಡಲಾದಂತಹ/ತೆಗೆದುಹಾಕಲಾದಂತಹ ದಿನಾಂಕದವರೆಗೆ ಪ್ರಮಾಣಾನುಪಾತದ ಆಧಾರದ ಮೇರೆಗೆ ಅನುವು ಮಾಡಲಾಗುವುದು.

1.05 ನಿಗಮವು ಸವಕಳಿ ಪದ್ಧತಿಯನ್ನು ಕಂಪನಿಗಳ ಅಧಿನಿಯಮ 2013ರ ಷೆಡ್ಯೂಲು ಖಖರ ಅನುಸಾರ ಆಸ್ತಿಯ ಉಪಯುಕ್ತ ಆಯಸ್ಸಿನ ಮೂಲ ಪದ್ಧತಿಗೆ ಬದಲಾಯಿಸಿದೆ.

ಅನುದಾನಗಳಿಗೆ ಲೆಕ್ಕವನ್ನಿಡುವಿಕೆ

1.06 ನಿರ್ದಿಷ್ಟ ಯೋಜನೆಗಳಿಗಾಗಿ ಸ್ವೀಕರಿಸಲಾದಂತಹ ಅನುದಾನಗಳನ್ನು ಅವುಗಳನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿಯೇ ಬಳಸಿಕೊಳ್ಳಲಾಗುವುದು ಹಾಗೂ ಸಂಬಂಧಿತ ಅನುದಾನಕ್ಕೆ (ಗಳಿಗೆ) ಖರ್ಚನ್ನು ಹಾಕಲಾಗುವುದು. ಖರ್ಚಾಗದೇ ಉಳಿದಿರುವ ಅನುದಾನಗಳನ್ನು ನಿರ್ದಿಷ್ಟ ಯೋಜನಾ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕಾಗಿ ಚಾಲ್ತಿ ಜವಾಬ್ದಾರಿಗಳ ಅಡಿಯಲ್ಲಿ ಹಿಡಿದಿಟ್ಟುಕೊಂಡಿರಲಾಗುವುದು.

1.07 ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗುವ ಅಂಚಿನ ಹಣ – ಎಂಸಿಎಫ್ ಅನ್ನು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–12ರ ಅನುಸಾರ ಬಂಡವಾಳ ಮೀಸಲುಗಳಿಗೆ ವರ್ಗಾಯಿಸಲಾಗುವುದು.

ವರಮಾನವನ್ನು ಪರಿಗಣಿಸುವಿಕೆ

(ಎ) ಪರಿಶಿಷ್ಟ ಪಂಗಡಗಳ ಕಲ್ಯಾಣ ನಿರ್ದೇಶನಾಲಯಕ್ಕಾಗಿ ಹಾಗೂ ಅದರ ಪರವಾಗಿ ಹೊಂದಲಾಗಿರುವ ಹಣಕಾಸಿನ ಮೇಲಿನ ಬಡ್ಡಿ

1.08 ಯೋಜನೆಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು ಬಾಕಿಯಿದ್ದು, ಬ್ಯಾಂಕು ಖಾತೆಗಳಲ್ಲಿ ಹೊಂದಿರುವ ಯೋಜನೆಯ ಅನುದಾನಗಳು/ಹಣಕಾಸಿನ ಮೇಲೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿರ್ದೇಶನಾಲಯಕ್ಕಾಗಿ (ಡಿಟಿಡಬ್ಲ್ಯೂ) ಟ್ರಸ್ಟಿನಲ್ಲಿ ಹೊಂದಿರುವ ಹಣಕಾಸಿನ ಮೇಲೆ ಗಳಿಸಲಾದ ಬಡ್ಡಿಯನ್ನು, ನಿಗಮವು ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದಕ್ಕಾಗಿ ಸರ್ಕಾರದಿಂದ ಯಾವುದೇ ಅನುದಾನಗಳನ್ನು/ಸಹಾಯಧನವನ್ನು ಪಡೆಯುವುದಿಲ್ಲವಾದ್ದರಿಂದ ನಿಗಮದ ವರಮಾನ ಎಂಬುದಾಗಿ ಪರಿಗಣಿಸಲಾಗುವುದು.

(ಬಿ) ಬ್ಯಾಂಕು ಠೇವಣಿಗಳು ಹಾಗೂ ಉಳಿತಾಯ ಖಾತೆಗಳ ಮೇಲಿನ ಬಡ್ಡಿ

1.09 ಒಪ್ಪಂದದ ದರದಲ್ಲಿ ಸರಳ ಬಡ್ಡಿಯ ಆಧಾರದ ಮೇರೆಗೆ ಸಂಚಿತಗೊಂಡಿರುವ ಪುನರ್–ಹೂಡಿಕೆ ಮಾಡಲ್ಪಟ್ಟ ಠೇವಣಿಗಳ ಮೇಲೆ ಬಡ್ಡಿಯೊಂದಿಗೆ, ಬ್ಯಾಂಕುಗಳಲ್ಲಿನ ಅವಧಿ/ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯನ್ನು ಅವಧಿ ಅನುಪಾತ ಆಧಾರದ ಮೇರೆಗೆ (ಟೈಮ್ ಪ್ರೊಪೋರ್ಷನ್ ಬೇಸಿಸ್) ಪರಿಗಣಿಸಲಾಗುವುದು. ನಿಯತಕಾಲಿಕ ಮಧ್ಯಂತರಗಳಲ್ಲಿ ಸಂಯೋಜನೆಯ ಕಾರಣ ಹಾಗೂ ಸರಳ ಬಡ್ಡಿಯ ಆಧಾರದ ಮೇರೆಗೆ ಸಂಚಿತಗೊಂಡವುಗಳ ನಡುವಿನ ವ್ಯತ್ಯಾಸವನ್ನು ಅವಧಿ ಮುಗಿದ/ನವೀಕರಿಸುವ ವೇಳೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಉಳಿತಾಯ ಖಾತೆಗಳ ಮೇಲಿನ ಬಡ್ಡಿಯನ್ನು ಬ್ಯಾಂಕು ಜಮೆ ಮಾಡಿದ ದಿನಾಂಕದಂದು ಪರಿಗಣಿಸಲಾಗುವುದು.

(ಸಿ)ಫಲಾನುಭವಿಗಳಿಗೆ ನೀಡಲಾದ ಸಾಲಗಳ ಮೇಲಿನ ಬಡ್ಡಿ

1.10 ಫಲಾನುಭವಿಗಳಿಗೆ ನೀಡಲಾದ ಸಾಲಗಳ ಮೇಲಿನ ಬಡ್ಡಿಯನ್ನು ಈ ಕೆಳಗಿನ ಷರತ್ತುಗಳಿಗೆ ಒಳಪಡಿಸಿದಂತೆ ಅವಧಿ ಅನುಪಾತ ಆಧಾರದ ಮೇರೆಗೆ (ಟೈಮ್ ಪ್ರೊಪೋರ್ಷನ್ ಬೇಸಿಸ್) ವರಮಾನವನ್ನಾಗಿ ಪರಿಗಣಿಸಲಾಗುವುದು.

(i) ಬಡ್ಡಿಯನ್ನು ಸರಳ ಬಡ್ಡಿ ಆಧಾರದ ಮೇರೆಗೆ ವೆಚ್ಚಕ್ಕೆ ಹಾಕಲಾಗುವುದು ಹಾಗೂ ಅಂಗೀಕರಿಸಲಾಗುವುದು.

(ii) ಸಹಾಯಧನ ಮತ್ತು ಸಾಲ ಭಾಗಗಳ ಜೊತೆಯಲ್ಲಿನ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಅನುಮೋದಿತ ಘಟಕ ವೆಚ್ಚದ ಪೈಕಿ, ಸಾಲದ ಭಾಗದ ಮೇಲಿನ ಬಡ್ಡಿಯನ್ನು, ಕೊಳವೆ ಬಾವಿಯನ್ನು ಕಾರ್ಯೋನ್ಮುಕ್ತಗೊಳಿಸಿದ ದಿನಾಂಕ ಹಾಗೂ ಫಲಾನುಭವಿಯು ನೀರಾವರಿ ಅನುಕೂಲತೆಯನ್ನು ಉಪಯೋಗಿಸಿಕೊಳ್ಳುವ ದಿನಾಂಕದಿಂದ ಹೊರತುಪಡಿಸಿದಂತೆ, ಒಂದು ಕೊಳವೆ ಬಾವಿಯ ಒಟ್ಟಾರೆ ಪಾವತಿಗಳು ಸಹಾಯಧನದ ಮಿತಿಯನ್ನು ಮೀರಿದ ದಿನಾಂಕದಿಂದ ಅಂಗೀಕರಿಸಲಾಗುವುದು.

(iii) ಕಂಡಿಕೆ (೧೩)ರಲ್ಲಿ ತಿಳಿಸಲಾಗಿರುವ ಷರತ್ತಿಗೆ ಒಳಪಡಿಸಿದಂತೆ, ಸಾಲದ ಮೊತ್ತವನ್ನು ವಾಹನಗಳು, ಉಪಕರಣಗಳು, ಇತ್ಯಾದಿಗಳ ಸರಬರಾಜುದಾರರುಗಳಿಗೆ ಹಾಗೂ ಫಲಾನುಭವಿಗಳಿಗೆ ಸಾಲದ ಅನುಕೂಲತೆಯನ್ನು ಮಂಜೂರು ಮಾಡುವ ಸಲುವಾಗಿ ಬ್ಯಾಂಕುಗಳಿಗೆ ನೇರವಾಗಿ ಬಿಡುಗಡೆಗೊಳಿಸಲಾಗುವಂತಹ ನೇರ ಹಾಗೂ ಅಂಚಿನ ಹಣ ಸಾಲ ಯೋಜನೆಗಳ ಅಡಿಯಲ್ಲಿ, ನಿಗಮವು ವಿತರಣೆ ಮಾಡಿದ ದಿನಾಂಕವು ಫಲಾನುಭವಿಯ ಸಾಲದ ಲೆಕ್ಕಗಳ ಮೇಲೆ ಬಡ್ಡಿಯನ್ನು ವಿಧಿಸುವುದಕ್ಕಾಗಿ ಆಧಾರವಾಗಿರುತ್ತದೆ.

(iv) ಹಿಂದಿನ ಸಾಲಿನ ಅಂತ್ಯದವರೆಗೆ ವಿತರಿಸಲಾದಂತಹ ಸಾಲಗಳ ಮೇಲಿನ ಬಡ್ಡಿಯನ್ನು ವಾರ್ಷಿಕ ಪ್ರತಿಫಲ ಗಳಿಕೆಯ ಆಧಾರ ಮೇಲೆ ಹಾಕಲಾಗುವುದು.

(v) ಪ್ರಸಕ್ತ ಸಾಲಿನಲ್ಲಿ ವಿತರಿಸಲಾದಂತಹ ಸಾಲದ ಮೇಲೆ ಬಡ್ಡಿಯನ್ನು ಸಾಲವನ್ನು ವಿತರಿಸಲಾದಂತಹ ತಿಂಗಳಿನ ಕಡೆಯ ದಿನಾಂಕದಿಂದ ವಿಧಿಸಲಾಗುವುದು.

ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳು

1.11 ಕರ್ನಾಟಕ ಸರ್ಕಾರ ಹಾಗೂ ಇತರೆ ನಿಗಮ, ಉದ್ದಿಮೆಗಳಿಂದ ನಿಯೋಜನೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಸಂಬಂಧಿಸಿದಂತೆ, ಭವಿಷ್ಯ ನಿಧಿ, ಪಿಂಚಣಿ, ಗ್ರಾಚುಯಿಟಿ ಹಾಗೂ ರಜೆ ಸಂಬಳ ಕಾಣಿಕೆಗಳ ಕಡೆಗೆ ಪಾವತಿಗಳನ್ನು ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳು, 1958ರ ಅನುವುಗಳ ಅನುಸಾರ ಹಾಗೂ/ಅಥವಾ ಮಾತೃ ಇಲಾಖೆಗಳಿಂದ/ ಉದ್ಯೋಗದಾತರಿಂದ ಬರುವಂತಹ ಪಾವತಿಗಾಗಿನ ಕೋರಿಕೆಗಳ ಆಧಾರದ ಮೇರೆಗೆ ಮಾಡಲಾಗುವುದು ಹಾಗೂ ವರಮಾನ ಲೆಕ್ಕ ಶೀರ್ಷಿಕೆಗೆ ವೆಚ್ಚವನ್ನು ಹಾಕಲಾಗುವುದು.

1.12 ಗುತ್ತಿಗೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳು ಉದ್ಯೋಗದ ಯಾವುದೇ ಅಂತಿಮ ಪ್ರಯೋಜನಗಳಿಗೆ ಅರ್ಹರಿರುವುದಿಲ್ಲ.

1.13 ಉದ್ಯೋಗದ ಇತರೆ ಅಂತಿಮ ಪ್ರಯೋಜನಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪಾವತಿಯ ಆಧಾರದ ಮೇರೆಗೆ ಅಂಗೀಕರಿಸಲಾಗುವುದು.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

31 ಮಾರ್ಚ್ 2018 ರಲ್ಲಿದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ

(ಮೊತ್ತ ರೂಪಾಯಿಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
I. ಈಕ್ವಿಟಿ ಹಾಗೂ ಜವಾಬ್ದಾರಿಗಳು:			
ಷೇರುದಾರರ ನಿಧಿಗಳು:			
(ಎ) ಷೇರು ಬಂಡವಾಳ	2	20,00,00,000	20,00,00,000
(ಬಿ) ಕಾದಿರಿಸಿರುವಿಕೆಗಳು ಹಾಗೂ ಮಿಗುತಾಯಗಳು	3	149,61,49,659	120,68,65,408
		169,61,49,659	**140,68,65,408**
ಹಂಚಿಕೆ ಮಾಡಲು ಬಾಕಿ ಇರುವ ಷೇರು ಅರ್ಜಿಗಳ ಹಣ		–	16,66,27,000
ಚಾಲ್ತಿಯೇತರ ಜವಾಬ್ದಾರಿಗಳು:			
ಎ)ದೀರ್ಘಾವಧಿ ಸಾಲಗಳು	4	23,16,12,355	35,66,54,159
ಚಾಲ್ತಿ ಜವಾಬ್ದಾರಿಗಳು:			
(ಎ)ವ್ಯಾಪಾರ-ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು	5	27,30,52,480	21,43,00,591
(ಬಿ) ಇತರೆ ಚಾಲ್ತಿ ಜವಾಬ್ದಾರಿಗಳು	6	650,07,92,894	413,67,43,293
		677,38,45,374	**435,10,43,884**
ಒಟ್ಟು		**870,16,07,388**	**628,11,90,451**
II ಆಸ್ತಿಗಳು: ಚಾಲ್ತಿಯೇತರ ಆಸ್ತಿಗಳು			
(ಎ) ಸ್ಥಿರಾಸ್ತಿಗಳು:			
ಸ್ಪರ್ಶಿಸಬಹುದಾದ/ಭೌತಿಕ ಆಸ್ತಿಗಳು		1,92,04,345	2,11,47,232
ಸ್ಪರ್ಶಿಸಲಾಗದ/ಅಗೋಚರ ಆಸ್ತಿಗಳು	7	19,461	24,337
(ಬಿ) ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು	8	75,96,52,012	53,61,44,821
		77,88,75,818	**55,73,16,390**
ಚಾಲ್ತಿ ಆಸ್ತಿಗಳು:			
(ಎ) ನಗದು ಮತ್ತು ಬ್ಯಾಂಕು ಶಿಲ್ಕುಗಳು	9	771,09,19,673	556,47,67,947
(ಬಿ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು	10	50,704	12,40,827
(ಸಿ) ಇತರೆ ಚಾಲ್ತಿ ಆಸ್ತಿಗಳು	11	21,17,61,193	15,78,65,287
		792,27,31,570	**572,38,74,061**
ಒಟ್ಟು		**870,16,07,388**	**628,11,90,451**

III. ಅನುಬಂಧದ ಮೂಲಕ ನೀಡಲಾಗಿರುವ ಟಿಪ್ಪಣಿ ಸಂಖ್ಯೆಗಳು 1ರಿಂದ 18 ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಹತ್ವಪೂರ್ಣ ಕಾರ್ಯನೀತಿಗಳು ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗಗಳಾಗಿರುತ್ತವೆ.

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಮೆ: ಬಿ ಎಸ್ ಡಿ ಅಂಡ್ ಕೋ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್ಆರ್ಎನ್: 000312ಎಸ್

ಮಂಡಳಿಗಾಗಿ ಹಾಗೂ ಅದರ ಪರವಾಗಿ

ಸಹಿ/-	ಸಹಿ/-	ಸಹಿ/-	ಸಹಿ/-
ಸಿಎ. ಆರ್. ದೇವರಾಜ್	**ಶ್ರೀ ಟಿ. ರಾಘವೇಂದ್ರ**	**ಶ್ರೀ. ಬಿ. ಜಯಪ್ರಕಾಶ್**	**ಶ್ರೀ ಸಿ.ವೈ. ಧರ್ಮೇಶ್**
ಪಾಲುದಾರರು	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು	ಲೆಕ್ಕಾಧಿಕಾರಿ
ಸದಸ್ಯತ್ವ ಸಂಖ್ಯೆ 028395			

ಬೆಂಗಳೂರು
ದಿನಾಂಕ: 27 ಫೆಬ್ರವರಿ 2019

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

31 ಮಾರ್ಚ್ 2018 ಕ್ಕೆ ಅಂತ್ಯಗೊಂಡ ಸಾಲಿಗೆ ಲಾಭ ಮತ್ತು ನಷ್ಟದ ತ:ಖ್ತೆ

(ಮೊತ್ತ ರೂಪಾಯಿಗಳಲ್ಲಿ)

	ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
I.	ಕಾರ್ಯಾಚರಣೆಗಳಿಂದ ವರಮಾನ/ಆದಾಯ	12	4,20,05,399	2,24,28,215
II.	ಇತರೆ ವರಮಾನ/ಆದಾಯ	13	34,95,49,174	42,43,83,654
III.	ಒಟ್ಟು ಆದಾಯ (I+ II)		**39,15,54,573**	**44,68,11,869**
IV.	**ವೆಚ್ಚಗಳು**			
	ನಿರ್ದೇಶಕರುಗಳಿಗೆ ಸಂಭಾವನೆ	14	17,48,455	17,18,820
	ಸಿಬ್ಬಂದಿ ವೆಚ್ಚ/ಪ್ರಯೋಜನಗಳು	15	4,98,04,102	4,68,04,792
	ಹಣಕಾಸು ಸಂಬಂಧಿತ ವೆಚ್ಚ	16	2,14,78,535	3,09,81,680
	ಇತರೆ ವೆಚ್ಚಗಳು	17	2,59,40,893	2,70,23,858
	ಸವಕಳಿ	7	32,98,337	39,49,616
	ಒಟ್ಟು ವೆಚ್ಚಗಳು		**10,22,70,322**	**11,04,78,766**
V.	ಪೂರ್ವಾವಧಿ ಹೊಂದಾಣಿಕೆಗಳಿಗೆ ಮುಂಚಿನ ಲಾಭ (III- IV)		**28,92,84,251**	**33,63,33,103**
VI.	ಕೂಡಿಸುವುದು/(ಕಳೆಯುವುದು) ಪೂರ್ವಾವಧಿ ಹೊಂದಾಣಿಕೆಗಳು	18	–	(16,74,577)
VII.	ತೆರಿಗೆಗಳ ಪಾವತಿಗೆ ಮುನ್ನ ಲಾಭ/(ನಷ್ಟ) (V- VI)		**28,92,84,251**	**33,46,58,526**
VIII.	**ತೆರಿಗೆ ವೆಚ್ಚ:**			
	(1) ಚಾಲ್ತಿ/ಪ್ರಸಕ್ತ ಸಾಲಿನ ತೆರಿಗೆ		–	–
	(2) ಮುಂದೂಡಲ್ಪಟ್ಟಿರುವ ತೆರಿಗೆ		–	–
IX.	ಪ್ರಸಕ್ತ ಸಾಲಿಗೆ ಲಾಭ/(ನಷ್ಟ) (VII- VIII)		**28,92,84,251**	**33,46,58,526**
	ಈಕ್ವಿಟಿ ಷೇರು ಒಂದಕ್ಕೆ ಗಳಿಕೆಗಳು (ಪ್ರತಿಯೊಂದಕ್ಕೂ ರೂ.100/–) ರೂಪಾಯಿಗಳಲ್ಲಿ:			
	ಮೂಲ ಹಾಗೂ ದುರ್ಬಲಗೊಳಿಸಲಾದ/ಡೈಲ್ಯೂಟೆಡ್		144.64	167.33

III. ಅನುಬಂಧದ ಮೂಲಕ ನೀಡಲಾಗಿರುವ ಟಿಪ್ಪಣಿ ಸಂಖ್ಯೆಗಳು 1ರಿಂದ 18 ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಹತ್ವಪೂರ್ಣ ಕಾರ್ಯನೀತಿಗಳು ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗಗಳಾಗಿರುತ್ತವೆ.

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಮೆ: ಬಿ ಎಸ್ ಡಿ ಅಂಡ್ ಕೋ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್‌ಆರ್‌ಎನ್: 000312ಎಸ್

ಮಂಡಳಿಗಾಗಿ ಹಾಗೂ ಅದರ ಪರವಾಗಿ

ಸಹಿ/–
ಸಿಎ. ಆರ್. ದೇವರಾಜ್
ಪಾಲುದಾರರು
ಸದಸ್ಯತ್ವ ಸಂಖ್ಯೆ 028395

ಸಹಿ/–
(ಶ್ರೀ ಟಿ. ರಾಘವೇಂದ್ರ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಶ್ರೀ. ಬಿ. ಜಯಪ್ರಕಾಶ್)
ನಿರ್ದೇಶಕರು

ಸಹಿ/–
(ಶ್ರೀ ಸಿ.ವೈ. ಧರ್ಮೇಶ್)
ಲೆಕ್ಕಾಧಿಕಾರಿ

ಬೆಂಗಳೂರು
ದಿನಾಂಕ: 27 ಫೆಬ್ರವರಿ 2019

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

31 ಮಾರ್ಚ್ 2018 ಕ್ಕೆ ಅಂತ್ಯಗೊಂಡ ಸಾಲಿಗೆ ಹಣಕಾಸು ಹರಿವಿನ ತ:ಖ್ತೆ

(ಮೊತ್ತ ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ	31 ಮಾರ್ಚ್ 2017 ರಲ್ಲಿದ್ದಂತೆ
ಕಾರ್ಯಾಚರಣೆಗಳಿಗೆ ಸಂಬಂಧಿತ ಚಟುವಟಿಕೆಗಳಿಂದ ಹಣಕಾಸಿನ ಹರಿವು:			
ತೆರಿಗೆಗಳು ಮತ್ತು ಅತೀ ವಿಶೇಷ ಬಾಬುಗಳಿಗೆ ಮುಂಚಿನ ನಿವ್ವಳ ಲಾಭ		**28,92,84,251**	**33,46,58,526**
ಕಾರ್ಯಾಚರಣೆಗಳಿಗೆ ಸಂಬಂಧಿತ ಚಟುವಟಿಕೆಗಳು ಒದಗಿಸಿರುವ ನಿವ್ವಳ ನಗದಿನ ಜೊತೆ ನಿವ್ವಳ ಲಾಭದ ಸಮನ್ವಯಗೊಳಿಸುವಿಕೆಗಾಗಿ ಹೊಂದಾಣಿಕೆಗಳು			
ಸವಕಳಿ		32,98,337	39,49,616
ಬಡ್ಡಿಯ ವರಮಾನ		(34,92,52,463)	(42,32,62,454)
ಪಾವತಿಸಲಾಗಿರುವ ಬಡ್ಡಿ		2,14,78,535	3,09,81,680
		(3,51,91,341)	(5,36,72,632)
ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳ (ಹೆಚ್ಚಳ)/ಇಳಿಕೆ		11,90,123	(10,35,508)
(ಇತರೆ ಚಾಲ್ತಿ ಆಸ್ತಿಗಳಲ್ಲಿನ (ಹೆಚ್ಚಳ)/ಇಳಿಕೆ		(5,38,95,906)	4,95,69,237
ವ್ಯಾಪಾರವ್ಯವಹಾರಗಳಿಗೆ ಸಂಬಂಧಿತ ಪಾವತಿಗಳಲ್ಲಿನ ಹೆಚ್ಚಳ/(ಇಳಿಕೆ)		5,87,51,889	5,79,82,368
ಇತರೆ ಚಾಲ್ತಿ ಜವಾಬ್ದಾರಿಗಳಲ್ಲಿನ ಹೆಚ್ಚಳ/(ಇಳಿಕೆ)		236,40,49,601	(123,04,32,932)
		237,00,95,707	(112,39,16,835)
ಪಾವತಿಸಲಾಗಿರುವ ಆದಾಯ ತೆರಿಗೆ		--	--
ಕಾರ್ಯಾಚರಣೆಗೆ ಸಂಬಂಧಿತ ಚಟುವಟಿಕೆಗಳಿಂದ ನಿವ್ವಳ ನಗದಿನ ಹರಿವು (ಎ)		**233,49,04,367**	**(117,75,89,467)**
ಬಿ) ಹೂಡಿಕೆ ಚಟುವಟಿಕೆಗಳಿಂದ ನಗದಿನ ಹರಿವು			
ಸ್ಥಿರಾಸ್ತಿಗಳ ಖರೀದಿ		(13,50,574)	(94,26,298)
ಸ್ಥಿರಾಸ್ತಿಗಳ ಮಾರಾಟದಿಂದ ಬಂದ ಪ್ರತಿಫಲ		–	–
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು		–	–
ದೀರ್ಘಾವಧಿ ಸಾಲುಗಳು ಮತ್ತು ಮುಂಗಡಗಳಲ್ಲಿನ (ಹೆಚ್ಚಳ)/ಇಳಿಕೆ		(22,35,07,191)	(16,51,25,195)
ಸ್ವೀಕರಿಸಲಾಗಿರುವ ಬಡ್ಡಿ		34,92,52,463	42,32,62,454
ಹೂಡಿಕೆ ಚಟುವಟಿಕೆಗಳಿಂದ ನಿವ್ವಳ ನಗದಿನ ಹರಿವು (ಬಿ)		**12,43,94,699**	**24,87,10,961**
ಸಿ) ಹಣಕಾಸಿಗೆ ಸಂಬಂಧಿತ ಚಟುವಟಿಕೆಗಳಿಂದ ನಗದಿನ ಹರಿವು			
ದೀರ್ಘಾವಧಿ ಸಾಲಗಳಲ್ಲಿ ಹೆಚ್ಚಳ/(ಇಳಿಕೆ)		(12,50,41,804)	(28,21,33,407)
ಷೇರು ಬಂಡವಾಳದಲ್ಲಿನ ಹೆಚ್ಚಳ		--	–
ಹಂಚಿಕೆ ಮಾಡುವುದು ಬಾಕಿಯಿರುವ ಷೇರುಗಳಿಗಾಗಿನ ಅರ್ಜಿಗಳು		2,00,00,000	2,00,00,000
ಬಂಡವಾಳ ಮೀಸಲಿರಿಸಿರುವವುಗಳಿಗೆ/ಕಾಯ್ದಿರಿಸಿರುವವುಗಳಿಗೆ ವರ್ಗಾವಣೆ ಮಾಡಲಾಗಿರುವ ಮೊತ್ತ		(18,66,27,000)	–
ಪಾವತಿಸಲಾಗಿರುವ ಬಡ್ಡಿ		(2,14,78,535)	(3,09,81,680)
ಹಣಕಾಸಿಗೆ ಸಂಬಂಧಿತ ಚಟುವಟಿಕೆಗಳಿಂದ ನಿವ್ವಳ ನಗದಿನ ಹರಿವು (ಸಿ)		**(31,31,47,339)**	**(29,31,15,087)**
ನಗದು ಮತ್ತು ನಗದಿಗೆ ಸಮಾನವಾದವುಗಳ ನಿವ್ವಳ ಹೆಚ್ಚಳ/ಇಳಿಕೆ ((ಎ+ಬಿ+ಸಿ)		**214,61,51,727**	**(122,19,93,593)**

ಡಿ) ವರ್ಷದ ಪ್ರಾರಂಭದಲ್ಲಿ ನಗದು ಮತ್ತು ನಗದಿಗೆ ಸಮಾನವಾದವುಗಳು		556,47,67,947	678,67,61,539
ವರ್ಷದ ಕೊನೆಯಲ್ಲಿ ನಗದು ಮತ್ತು ನಗದಿಗೆ ಸಮಾನವಾದವುಗಳು		771,09,19,673	556,47,67,947
		214,61,51,727	**(122,19,93,593)**

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಮೆ: ಬಿ ಎಸ್ ಡಿ ಅಂಡ್ ಕೋ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್‌ಆರ್‌ಎನ್: 000312ಎಸ್

ಮಂಡಳಿಗಾಗಿ ಹಾಗೂ ಅದರ ಪರವಾಗಿ

ಸಹಿ/–
ಸಿ.ಎ. ಆರ್. ದೇವರಾಜ್
ಪಾಲುದಾರರು
ಸದಸ್ಯತ್ವ ಸಂಖ್ಯೆ 028395

ಸಹಿ/–
(ಶ್ರೀ ಟಿ. ರಾಘವೇಂದ್ರ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಶ್ರೀ. ಬಿ. ಜಯಪ್ರಕಾಶ್)
ನಿರ್ದೇಶಕರು

ಸಹಿ/–
(ಶ್ರೀ ಸಿ.ವೈ. ಧರ್ಮೇಶ್)
ಲೆಕ್ಕಾಧಿಕಾರಿ

ಬೆಂಗಳೂರು
ದಿನಾಂಕ: 27 ಫೆಬ್ರವರಿ 2019

ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗಗಳಾಗಿರುವ ಟಿಪ್ಪಣಿಗಳು

ಹಣಕಾಸು ತ:ಖ್ತೆಗಳನ್ನು ತಯಾರಿಸಲು ಆಧಾರ/ನಿರ್ಣಾಯಕ ತತ್ವಗಳು

ಆಸ್ತಿಗಳು ಹಾಗೂ ಜವಾಬ್ದಾರಿಗಳನ್ನು ಕಂಪನಿಯ ಸಾಮಾನ್ಯ ಕಾರ್ಯಾಚರಣೆಯ ಆವರ್ತನ ಹಾಗೂ ಕಂಪನಿಗಳ ಅಧಿನಿಯಮ, 2013ರ ಪರಿಷ್ಕೃತ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರೆ ಮಾನದಂಡಗಳ ಪ್ರಕಾರ ಚಾಲ್ತಿ ಹಾಗೂ ಚಾಲ್ತಿಯೇತರ ಆಸ್ತಿಗಳನ್ನಾಗಿ ವರ್ಗೀಕರಿಸಲಾಗಿದೆ. ಆಸ್ತಿಗಳನ್ನು ಹಾಗೂ ಜವಾಬ್ದಾರಿಗಳನ್ನು ಚಾಲ್ತಿ ಹಾಗೂ ಚಾಲ್ತಿಯೇತರ ಆಸ್ತಿಗಳನ್ನಾಗಿ ವರ್ಗೀಕರಿಸುವ ಉದ್ದೇಶಕ್ಕಾಗಿ, ಉತ್ಪನ್ನಗಳ ಸ್ವರೂಪ ಹಾಗೂ ಸಂಸ್ಕರಣೆಗಾಗಿ ಆಸ್ತಿಗಳನ್ನು ಖರೀದಿಸಲಾದ ದಿನಾಂಕ ಹಾಗೂ ಅವುಗಳನ್ನು ವಿಲೆವಾರಿ ಮಾಡಲಾಗಿ ನಗದು ರೂಪದಲ್ಲಿ ಹಾಗೂ ನಗದಿಗೆ ಸಮಾನವಾಗಿ ಪಡೆಯಲಾದ ಸಮಯದ ನಡುವಿನ ಅವಧಿಯ ಆಧಾರದ ಮೇರೆಗೆ, ಕಂಪನಿಯ ಕಾರ್ಯಾಚರಣೆಯ ಆವರ್ತನವನ್ನು ಹನ್ನೆರಡು ತಿಂಗಳುಗಳು ಎಂಬುದಾಗಿ ಪರಿಗಣಿಸಲಾಗುವುದು.

ಟಿಪ್ಪಣಿ ಸಂಖ್ಯೆ 2: ಷೇರು ಬಂಡವಾಳ

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ		31.03.2017 ರಲ್ಲಿದ್ದಂತೆ	
	ಷೇರುಗಳ ಸಂಖ್ಯೆ	ಮೊತ್ತ	ಷೇರುಗಳ ಸಂಖ್ಯೆ	ಮೊತ್ತ
ಅಧಿಕೃತ ಷೇರು ಬಂಡವಾಳ ಪ್ರತಿಯೊಂದಕ್ಕೂ ರೂ.100ರಂತೆ ಈಕ್ವಿಟಿ ಷೇರುಗಳು	20,00,000	20,00,00,000	20,00,000	20,00,00,000
ವಿತರಿಸಿರುವ, ಸಂಪೂರ್ಣ ಪಾವತಿಸಿರುವ ಷೇರು ಬಂಡವಾಳ ಪ್ರತಿಯೊಂದಕ್ಕೂ ರೂ.100ರಂತೆ ಈಕ್ವಿಟಿ ಷೇರುಗಳು	20,00,000	20,00,00,000	20,00,000	20,00,00,000

ವರ್ಷದ ಪ್ರಾರಂಭ ಮತ್ತು ವರದಿ ಅವಧಿಯ ಅಂತ್ಯಕ್ಕೆ ಬಾಕಿ ಇರುವ ಷೇರುಗಳ ಸಂಖ್ಯೆ ಮತ್ತು ಮೊತ್ತದ ಸಮನ್ವಯ

ವಿವರ	31.03.2018 ರಲ್ಲಿದ್ದಂತೆ		31.03.2017 ರಲ್ಲಿದ್ದಂತೆ	
	ಷೇರುಗಳ ಸಂಖ್ಯೆ	ಮೊತ್ತ	ಷೇರುಗಳ ಸಂಖ್ಯೆ	ಮೊತ್ತ
ಪ್ರತಿಯೊಂದಕ್ಕೂ ರೂ.100ರಂತೆ ಈಕ್ವಿಟಿ ಆರಂಭಿಕ ಶಿಲ್ಕು	20,00,000	20,00,00,000	20,00,000	20,00,00,000
ಕೂಡುವುದು: ಪ್ರಸಕ್ತ ಸಾಲಿನ ಹಂಚಿಕೆ	–	–	–	–
ಮುಕ್ತಾಯ ಶಿಲ್ಕು	20,00,000	20,00,00,000	20,00,000	20,00,00,000

ಈಕ್ವಿಟಿ ಷೇರುಗಳಿಗೆ ಹೊಂದಿಕೊಂಡಂತಿರುವ ಹಕ್ಕುಗಳು, ಆದ್ಯತೆಗಳು ಹಾಗೂ ನಿರ್ಬಂಧನೆಗಳು:

ನಿಗಮವು ಪ್ರತಿಯೊಂದಕ್ಕೂ ರೂ.100ರ ಮುಖ ಬೆಲೆಯ ಈಕ್ವಿಟಿ ಷೇರುಗಳ ಒಂದು ವರ್ಗವನ್ನು ಹೊಂದಿದೆ.

ನಿಗಮದ ಕಾರ್ಯಚಟುವಟಿಕೆಗಳನ್ನು ಸಮಾಪನ/ಮುಕ್ತಾಯಗೊಳಿಸಿದ ಸಂದರ್ಭದಲ್ಲಿ, ಆದ್ಯತೆಯ ಮೇರೆಗೆ ವಿತರಿಸಬೇಕಾದಂತಹ ಮೊತ್ತಗಳನ್ನು ವಿತರಿಸಿದನಂತರ ಉಳಿಯುವ ನಿಗಮದ ಆಸ್ತಿಗಳನ್ನು ಸ್ವೀಕರಿಸಲು ಷೇರುದಾರರು ಅರ್ಹರಾಗಿರುತ್ತಾರೆ.

ನಿಗಮದ ಷೇರು ಅಥವಾ ಷೇರುಗಳನ್ನು ಅಂತಹ ಷೇರುಗಳ ವರ್ಗಾವಣೆಗೆ ವರ್ಗಾಯಿಸುವವರು/ಸದಸ್ಯರು ನಿಗಮದ ಅನುಮೋದನೆಯನ್ನು ಪಡೆಯದೆಯೇ ಮತ್ತೋರ್ವ ಸದಸ್ಯರಿಗೆ/ವ್ಯಕ್ತಿಗೆ ವರ್ಗಾಯಿಸುವಂತಿಲ್ಲ.

ನಿಗಮದ ಒಟ್ಟಾರೆ ಷೇರುಗಳ ಶೇಕಡಾ 5ಕ್ಕಿಂತಲೂ ಅಧಿಕವಾಗಿ ಷೇರುಗಳನ್ನು ಹೊಂದಿರುವ ಷೇರುದಾರರ ವಿವರಗಳು

ವಿವರ	31.03.2018 ರಲ್ಲಿದ್ದಂತೆ		31.03.2017 ರಲ್ಲಿದ್ದಂತೆ	
ಈಕ್ವಿಟಿ ಷೇರುಗಳು: 1ಕ್ಕೆ ರೂ.100/–	ಷೇರುಗಳ ಸಂಖ್ಯೆ	ನೀಡಲಾಗಿರುವ ಷೇರುಗಳಿಗೆ ಹೋಲಿಸಿದಲ್ಲಿ ಶೇಕಡಾವಾರು ಷೇರುಗಳು	ಷೇರುಗಳ ಸಂಖ್ಯೆ	ನೀಡಲಾಗಿರುವ ಷೇರುಗಳಿಗೆ ಹೋಲಿಸಿದಲ್ಲಿ ಶೇಕಡಾವಾರು ಷೇರುಗಳು
ಕರ್ನಾಟಕ ಸರ್ಕಾರ	12,07,410	60.37	12,07,410	60.37
ಭಾರತದ ರಾಷ್ಟ್ರಪತಿಯವರು	7,92,590	39.63	7,92,590	39.63
ಒಟ್ಟು	**20,00,000**	**100%**	**20,00,000**	**100%**

ಕಳೆದ ಐದು ವರ್ಷಗಳಲ್ಲಿ ನೀಡಲಾಗಿರುವ ಷೇರುಗಳಿಗೆ ಸಂಬಂದಿತ ಮಾಹಿತಿ

ನಗದು ರೂಪವನ್ನು ಹೊರತುಪಡಿಸಿ ಅನ್ಯಥಾ ಯಾವ ರೂಪದಲ್ಲಿಯೂ ನಿಗಮವು ಷೇರುಗಳನ್ನು ನೀಡಿರುವುದಿಲ್ಲ.
ನಿಗಮವು ಯಾವುದೇ ಬೋನಸ್ಸು ಷೇರುಗಳನ್ನೂ ನೀಡಿರುವುದಿಲ್ಲ.
ನಿಗಮವು ಷೇರುಗಳನ್ನು ಹಿಂದಕ್ಕೆ ಖರೀದಿಸುವ ವ್ಯವಹಾರವನ್ನು ಮಾಡಿರುವುದಿಲ್ಲ.

ಟಿಪ್ಪಣಿ ಸಂಖ್ಯೆ 3 ಕಾಯ್ದಿರಿಸಿರುವಿಕೆಗಳು ಹಾಗೂ ಮಿಗುತಾಯಗಳು

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಅ) ಬಂಡವಾಳ ಮೀಸಲುಗಳು		
ಪ್ರಾರಂಭಿಕ ಶಿಲ್ಕು	8,30,00,000	8,30,00,000
ಕೂಡುವುದು	–	–
ಒಟ್ಟು (ಅ)	**8,30,00,000**	**8,30,00,000**
ಆ) ಲಾಭ ಮತ್ತು ನಷ್ಟ ತ:ಖ್ತೆಯಲ್ಲಿನ ಮಿಗುತಾಯಗಳು:		
ಪ್ರಾರಂಭಿಕ ಶಿಲ್ಕು	112,38,65,408	78,92,06,882
ಕೂಡುವುದು: ಪ್ರಸಕ್ತ ಸಾಲಿಗೆ ಲಾಭ/ನಷ್ಟ	28,92,84,251	33,46,58,526
ಒಟ್ಟು (ಆ)	**141,31,49,659**	**112,38,65,408**
ಒಟ್ಟು (ಅ + ಆ)	**149,61,49,659**	**120,68,65,408**

ಟಿಪ್ಪಣಿ ಸಂಖ್ಯೆ 4 ದೀರ್ಘಾವಧಿ ಸಾಲಗಳು

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ರಾಷ್ಟ್ರೀಯ ಪರಿಶಿಷ್ಠ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತದಿಂದ ಭದ್ರತೆಯಿಂದ ಕೂಡಿರದ ಸಾಲಗಳೂ	23,16,12,355	35,66,54,159
ಒಟ್ಟು	**23,16,12,355**	**35,66,54,159**

ಟಿಪ್ಪಣಿ ಸಂಖ್ಯೆ 5 ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು – ಗುತ್ತಿಗೆದಾರರುಗಳು	27,30,52,480	21,43,00,591
ಒಟ್ಟು	**27,30,52,480**	**21,43,00,591**

ಟಿಪ್ಪಣಿ ಸಂಖ್ಯೆ 6 ಇತರೆ ಚಾಲ್ತಿ ಜವಾಬ್ದಾರಿಗಳು

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಕರ್ನಾಟಕ ಸರ್ಕಾರದಿಂದ ಅನುದಾನಗಳೂ	557,48,96,503	335,71,92,802
ಚಾಲ್ತಿ ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಮರುಪಾವತಿಗಾಗಿ ವಾಯಿದೆ ತುಂಬಿರುವವುಗಳು	29,25,76,433	16,75,34,629
ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತದಿಂದ ಪಡೆದಿರುವ ಸಾಲಗಳ ಮೇಲೆ ಬಾಕಿಯಿರುವ ಬಡ್ಡಿ	1,59,43,027	–
ಪಾವತಿಸಬೇಕಾದಂತಹ ಪಿಂಚಣಿ, ರಜೆ ವೇತನ ಹಾಗೂ ಗ್ರಾಚುಯಿಟಿ	72,04,217	65,85,416
ಶಾಸನಬದ್ಧ ಜವಾಬ್ದಾರಿಗಳು	44,87,397	24,06,716
ಇತರೆ ಪಾವತಿಸಬೇಕಾಗಿರುವವುಗಳು (ಟಿಪ್ಪಣಿ ಸಂಖ್ಯೆ 6.1 ರಲ್ಲಿ ವಿವರಿಸಿದೆ)	41,90,58,317	60,30,23,730
ಹಂಚಿಕೆ ಮಾಡುವುದು ಬಾಕಿಯಿರುವ ಷೇರುಗಳಿಗಾಗಿನ ಅರ್ಜಿಗಳು	18,66,27,000	–
ಒಟ್ಟು	**650,07,92,894**	**413,67,43,293**

ಟಿಪ್ಪಣಿ ಸಂಖ್ಯೆ 6.1 ಇತರೆ ಪಾವತಿಸಬೇಕಾಗಿರುವವುಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

ಗಿರಿಜನ ಕಲ್ಯಾಣ ನಿರ್ದೇಶನಾಲಯದ ಪರವಾಗಿ ಹೊಂದಲಾಗಿರುವ ಮೊತ್ತ	39,91,87,679	58,98,87,679
ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಖಾತರಿ ಕಮಿಷನ್	1,29,65,478	75,71,911
ಬಾಕಿಯಿರುವ ಜವಾಬ್ದಾರಿಗಳು	30,11,650	33,47,584
ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಪಾವತಿಸಬೇಕಾಗಿರುವುದು	8,39,208	8,39,208
ಪಾವತಿಸಬೇಕಾಗಿರುವ ಶಾಸನಬದ್ದ ಪರಿಶೋಧಕರ ಶುಲ್ಕ	3,78,250	4,02,500
ಪಾವತಿಸಬೇಕಾಗಿರುವ ಆಂತರೀಕ ಪರಿಶೋಧಕರ ಶುಲ್ಕ	9,37,500	6,87,500
ಪಾವತಿಸಬೇಕಾಗಿರುವ ವೃತ್ತಿ ಶುಲ್ಕ	75,000	75,000
ಪಾವತಿಸಬೇಕಾಗಿರುವ ವೇತನ	16,63,552	2,12,348

6.2 ವಿದ್ಯುತ್ ಸರಬರಾಜು ಕಂಪನಿಗಳಿಂದ ಸ್ವೀಕರಿಸಲಾದಂತಹ ಕೋರಿಕೆಗಳ ಆಧಾರದ ಮೇರೆಗೆ ಒಟ್ಟಾರೆ ಆಧಾರದ ಮೇರೆಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಕೊಳವೆಬಾವಿಗಳನ್ನು ಕಾರ್ಯೋದ್ಯುಕ್ತಗೊಳಿಸುವುದಕ್ಕಾಗಿ/ವಿದ್ಯುದೀಕರಣಕ್ಕಾಗಿ ಮಾಡಲಾದಂತಹ ಪಾವತಿಗಳನ್ನು ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳಿಗೆ ಹೊಂದಾಣಿಕೆ ಮಾಡಲಾಯಿತು.

6.3 ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತದಿಂದ ಬಳಸಿಕೊಳ್ಳಲಾದಂತಹ ಸಾಲಗಳ ಮೇಲೆ ಮಂಜೂರಾತಿಯ ಷರತ್ತುಗಳ ಪ್ರಕಾರ, ನಿಗದಿತ ದಿನಾಂಕದಂದು ಪಾವತಿಯನ್ನು ಮಾಡದಿದ್ದಲ್ಲಿ, ಶೇಕಡಾ 3ರ ಸಾಮಾನ್ಯದರದ ಪ್ರತಿಯಾಗಿ ಶೇಕಡಾ 4ರ ಸುಸ್ತಿ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಮರುಪಾವತಿಯಲ್ಲಿ ತಪ್ಪಿತಸ್ಥರಿದ್ದರೂ ಸಹ, ನಿಗಮವು ಸಾಲಗಳ ಸೇವೆಯನ್ನು ಶೇಕಡಾ 3ರ ಸಾಮಾನ್ಯ ದರದಲ್ಲಿಯೇ ಮಾಡುತ್ತಿದೆ. ಸಾಮಾನ್ಯ ದರದ ಆಧಾರದ ಮೇರೆಗೆ ಲೆಕ್ಕಹಾಕಲಾದಂತಹ ಸಾಲ ಮತ್ತು ಬಡ್ಡಿ ಬಾಕಿಗಳಿಗೆ ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತವು ತನ್ನ ಸ್ಥಿರೀಕರಣವನ್ನು ನೀಡಿದೆ ಹಾಗೂ ಸುಸ್ತಿ ಬಡ್ಡಿಗಾಗಿ ಯಾವುದೇ ಕೋರಿಕೆಯನ್ನೂ ನಿಗಮವು ನಿರೀಕ್ಷಿಸುತ್ತಿಲ್ಲ.

6.4 ಗಿರಿಜನ ಕಲ್ಯಾಣ ನಿರ್ದೇಶನಾಲಯದ ಪರವಾಗಿ ಹೊಂದಲಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ, ಗಿರಿಜನ ಕಲ್ಯಾಣ ನಿರ್ದೇಶನಾಲಯಕ್ಕೆ ಆಯವ್ಯಯ ಹಂಚಿಕೆಗೆ ಪ್ರತಿಯಾಗಿ ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವ ಹಾಗೂ ಪ್ರತ್ಯೇಕ ಉಳಿತಾಯ ಹಾಗೂ ನಿಶ್ಚಿತ ಠೇವಣಿ ಖಾತೆಗಳಲ್ಲಿ ಇಡಲಾಗಿರುವ ಮೊತ್ತವನ್ನು ನಿರ್ದೇಶನಾಲವು ಕಾಲಾನುಕಾಲಕ್ಕೆ ನೀಡುವ ನಿರ್ದೇಶನಗಳಂತೆ ಗಿರಿಜನ ಕಲ್ಯಾಣ ನಿರ್ದೇಶನಾಲಯಕ್ಕೆ ಅಥವಾ ಅದು ನಿರ್ದಿಷ್ಟಪಡಿಸುವ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗುವುದು. ಆದಾಗ್ಯೂ, ಈ ಶಿಲ್ಕುಗಳನ್ನು ಗಿರಿಜನ ಕಲ್ಯಾಣ ನಿರ್ದೇಶನಾಲಯದ ಶಿಲ್ಕುಗಳ ಜೊತೆ ಸಮನ್ವಯಗೊಳಿಸುವ ಅಗತ್ಯತೆಯಿರುತ್ತದೆ.

6.5 ಸಹಾಯಧನ, ಅಂಚಿನ ಹಣ, ಅವಧಿ ಸಾಲ ಹಾಗೂ ಪ್ರಾಯೋಜಕರ ಕಾಣಿಕೆ ಭಾಗಗಳನ್ನು ಹೊಂದಿರುವ ಕೆಲವು ಯೋಜನಾ ಖಾತೆಗಳಿಗೆ ಸಂಬಂಧಿಸಿದಂತೆ, ಜಿಲ್ಲೆಗಳಲ್ಲಿ ಒಂದು ಏಕೈಕ ಬ್ಯಾಂಕು ಖಾತೆಯನ್ನು ಕಾರ್ಯಾಚರಣೆ ಮಾಡಲಾಗುತ್ತಿದೆಯಾದರೂ ಅದಕ್ಕೆ ಕೇಂದ್ರ ಕಚೇರಿಯಿಂದ ಸಂಬಂಧಿತ ಯೋಜನೆಗಳ ಅಡಿಯಲ್ಲಿ ಹಣಕಾಸನ್ನು ವರ್ಗಾಯಿಸಲಾಗುವುದು, 31.03.2018 ರಲ್ಲಿದ್ದಂತೆ ಕೆಲವು ಜಿಲ್ಲಾ ಬ್ಯಾಂಕು ಖಾತೆಗಳಲ್ಲಿ ಇರುವ ಜಮೆ ಶಿಲ್ಕು ರೂ.13,45,31,521/–ರಷ್ಟು ರೂ.(6,36,32,375/–) ಮೊತ್ತವನ್ನು ಸಮನ್ವಯಗೊಳಿಸುವುದು ಬಾಕಿ ಇರುವುದರಿಂದ ಹಾಗೂ ಅಗತ್ಯ ಲೆಕ್ಕವನ್ನಿಡುವಿಕೆಯ ಹೊಂದಾಣಿಕೆಗಳನ್ನು ಮಾಡುವುದು ಬಾಕಿಯಿದ್ದು, ಪ್ರತ್ಯೇಕವಾಗಿ ಚಾಲ್ತಿ ಜವಾಬ್ದಾರಿಗಳ ಅಡಿಯಲ್ಲಿ ತೋರಿಸಲಾಗಿದೆ. ಆದಾಗ್ಯೂ, ನಿಗಮದ ಹಣಕಾಸು ಫಲಿತಾಂಶಗಳ ಮೇಲೆ ಇದರ ಪ್ರಭಾವವನ್ನು ಅಂದಾಜು ಮಾಡಲಾಗುವುದಿಲ್ಲ.

6.6 ನಿಗಮದ ಅಧಿಕೃತ ಷೇರು ಬಂಡವಾಳವು, ಪ್ರತಿಯೊಂದು ಷೇರಿಗೂ ರೂ.100ರ ದರದಲ್ಲಿ 20,00,000 ಷೇರುಗಳನ್ನು ಒಳಗೊಂಡಂತೆ ರೂ.2,000 ಲಕ್ಷಗಳು ಆಗಿರುತ್ತದೆ. ರೂ.1,866.27 ಲಕ್ಷ ಮೊತ್ತದಷ್ಟು ಷೇರು ಅರ್ಜಿಗಳಿಗೆ ಷೇರುಗಳನ್ನು ನೀಡುವುದನ್ನು ಅನುಕೂಲ ಕಲ್ಪಿಸುವುದಕ್ಕಾಗಿ ಅಧಿಕೃತ ಬಂಡವಾಳವನ್ನು ಇನ್ನೂ ಅಧಿಕಗೊಳಿಸುವುದು ಬಾಕಿ ಇರುವುದರಿಂದ ಸಂಪೂರ್ಣ ಮೊತ್ತವನ್ನು ಷೇರುಗಳನ್ನು ಹಂಚಲು ಬಾಕಿಯಿರುವ ಷೇರು ಅರ್ಜಿ ಶುಲ್ಕ ಎಂಬುದಾಗಿ ತೋರಿಸಲಾಗಿದೆ. ಮಂಡಳಿಯು, ಅಧಿಕೃತ ಷೇರು ಬಂಡವಾಳವನ್ನು ರೂ.20 ಕೋಟಿಯಿಂದ ರೂ.50 ಕೋಟಿಗೆ ಹೆಚ್ಚಳಗೊಳಿಸಲು ಅನುಮೋದನೆಯನ್ನು ನೀಡಿದೆ, ಅದಕ್ಕೆ ಕರ್ನಾಟಕ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಾಗಿದೆ.

6.7 ಕರ್ನಾಟಕ ಸರ್ಕಾರದಿಂದ ಪಡೆದಿರುವ ಅನುದಾನ (ಇತರೆ ಇಲಾಖೆಗಳ ಅನುದಾನ ಒಳಗೊಂಡು) ಮೊತ್ತ ರೂ.1,16,25,709/–ಗಳನ್ನು ಪ್ರಸ್ತುತ ವರ್ಷದ ಹಾಗೂ ಹಿಂದಿನ ವರ್ಷದ ಅನುದಾನಕ್ಕೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳ ಬೇಕಾಗಿರುತ್ತದೆ.

6.8 ಕರ್ನಾಟಕ ಸರ್ಕಾರವು ಬಿಡುಗಡೆ ಮಾಡಿದ ಅನುದಾನ (ಗಂ.ಕ.ಯೋ, ಭೂ.ಒ.ಯೊ, ನೇ.ಸಾ, ಮೈ.ಕ್ರೆ.ಯೋ, ಸ್ವ.ಉ.ಯೋ ಮತ್ತು ಉ.ಶೀ.ಯೋ) ಬಳಕೆಯಾಗಿರುವ ಬಗ್ಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ.

ಟಿಪ್ಪಣಿ ಸಂಖ್ಯೆ 7 : ಸ್ಥಿರಾಸ್ತಿಗಳು

(ಮೊತ್ತ ರೂಪಾಯಿಗಳಲ್ಲಿ)

ವಿವರಗಳು	ಒಟ್ಟಾರೆ ಬ್ಲಾಕು				ಸವಕಳಿ					ನಿವ್ವಳ ಬ್ಲಾಕು	
	1.04.2017 ರಲ್ಲಿದ್ದಂತೆ	ಸೇರ್ಪಡೆಗಳು	ತೆಗೆದು ಹಾಕಿರುವುದು/ ಹೊಂದಾಣಿಕೆಗಳು	31.03.2018 ರಲ್ಲಿದ್ದಂತೆ	01.04.2017 ರಲ್ಲಿದ್ದಂತೆ ಕ್ರೋಢೀಕೃತ ಶಿಲ್ಕು	ಆಸ್ತಿಯ ಬಳಸ ಬಹುದಾದ ಅವಧಿಯ ಕಾರಣ ಹೊಂದಾಣಿಕೆ	ಪ್ರಸಕ್ತ ಸಾಲಿಗೆ	ತೆಗೆದು ಹಾಕಿರುವುದು/ ಹೊಂದಾಣಿಕೆಗಳು	31.03.2018 ರಲ್ಲಿದ್ದಂತೆ ಕ್ರೋಢೀಕೃತ ಶಿಲ್ಕು	31.03.2018	31.03.2017
ಗಣಕ ಯಂತ್ರಗಳು ಮತ್ತು ಬಿಡಿ ಭಾಗಗಳು	46,47,356	7,080	–	46,54,436	37,10,629	–	3,63,782	–	40,74,411	5,80,025	9,36,727
ಪೀಠೋಪಕರಣ ಹಾಗೂ ನೆಲೆವಸ್ತುಗಳು	**1,75,43,059**	21,037	–	**1,75,64,096**	36,95,979.80	–	15,70,593	–	52,66,572.80	1,22,97,523	1,38,47,079
ವಾಹನಗಳು	**78,26,478**	–	–	**78,26,478**	35,33,918	–	7,78,100	–	43,12,018	35,14,460	42,92,560
ಕಚೇರಿ ಉಪಕರಣಗಳು	**45,66,067**	1,55,892	–	**47,21,959**	24,95,201	–	5,80,986	–	30,76,187	16,45,772	20,70,866
ಉಪ–ಮೊತ್ತ	**3,45,82,960**	**1,84,009**	–	**3,47,66,969**	**1,34,35,728**	–	**32,93,461**	–	**1,67,29,189**	**1,80,37,780**	**2,11,47,232**
ಅಗೋಚರ/ ಸ್ಪರ್ಶಿಸಲಾಗದ ಆಸ್ತಿಗಳು:	–	–	–	–	–	–	–	–	–	–	–
ತಂತ್ರಾಂಶ ಅನ್ವಯಗಳು	4,00,392	–	–	4,00,392	3,76,054.91	–	4,876	–	3,80,930.91	19,461	24,337
ಉಪ ಮೊತ್ತ	**4,00,392**	–	–	**4,00,392**	**3,76,055**	–	**4,876**	–	**3,80,931**	**19,461**	**24,337**
ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	–	11,66,565	–	–	–	–	–	–	–	11,66,565	–
ಒಟ್ಟಾರೆ ಮೊತ್ತ	**3,49,83,352**	**13,50,574**	–	**3,51,67,361**	**1,38,11,783**	–	**32,98,337**	–	**1,71,10,120**	**1,92,23,806**	**2,11,71,569**
ಹಿಂದಿನ ಸಾಲಿಗೆ	1,40,82,267	44,74,787	–	1,85,57,054	81,77,953	–	16,84,214	–	98,62,167	86,94,887	59,04,314

7.01 ಸ್ತಿರಾಸ್ಥಿಗಳ ವಹಿಯನ್ನು ಇಂದಿನದಿನದನ್ನಾಗಿ ಮಾಡಲಾಗುತ್ತಿರುವುದು ಪ್ರಗತಿಯಲ್ಲಿದೆ. ಇದು ಬಾಕಿ ಇದ್ದು, ವಹಿಯ ಪ್ರಕಾರ ಸ್ತಿರಾಸ್ಥಿಗಳ ಮೊತ್ತವನ್ನು ಲೆಕ್ಕಪುಸ್ತಕಗಳ ಶಿಲ್ಕಿನ ಜೊತೆ ಸಮನ್ವಯಗೊಳಿಸುವಿಕೆಯನ್ನು ಇನ್ನೂ ಪೂರ್ಣಗೊಳಿಸಬೇಕಾಗಿದೆ.

7.02 ಸ್ತಿರಾಸ್ಥಿಗಳ ಭೌತಿಕ ಪರೀಕ್ಷಣೆಯನ್ನು ನಡೆಸಲು ಹಾಗೂ ಭೌತಿಕ ಶಿಲ್ಕನ್ನು ಲೆಕ್ಕಪುಸ್ತಕಗಳ ಶಿಲ್ಕಿನ ಜೊತೆ ಸಮನ್ವಯಗೊಳಿಸಲು ಹಾಗೂ ಭೌತಿಕ ಪರೀಕ್ಷಣೆ ಹಾಗೂ ಸಮನ್ವಯಗೊಳಿಸುವಿಕೆ ಕಾರ್ಯವು ಪೂರ್ಣಗೊಂಡನಂತರ ಲೆಕ್ಕಗಳನ್ನು ಹೊಂದಾಣಿಕೆ ಮಾಡುವುದಕ್ಕಾಗಿ ಅನುಪಯುಕ್ತ ಆಸ್ತಿಗಳನ್ನು ಗುರುತಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ

ಟಿಪ್ಪಣಿ ಸಂಖ್ಯೆ 8 ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು (ಭದ್ರತೆಯಿಂದ ಕೂಡಿದ – ವಸೂಲಾತಿ ಮಾಡಲು ಉತ್ತಮವಾಗಿವೆ ಎಂಬುದಾಗಿ ಪರಿಗಣಿಸಲಾದಂತಹ)

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಅವಧಿ ಸಾಲ	50,65,82,595	39,17,74,073
ಅಂಚಿನ ಹಣ	16,63,51,416	9,91,31,036
ಸಾಲಗಳ ಮೇಲಿನ ಬಡ್ಡಿ	8,66,29,372	4,51,51,083
ಪೆಟ್ರೋಲ್ ಬಂಕಿನಲ್ಲಿರುವ ಠೇವಣಿ	80,000	80,000
ದೂರವಾಣಿ ಠೇವಣಿ	8,629	8,629
ಒಟ್ಟು	**75,96,52,012**	**53,61,44,821**

8.1 ಸಾಲಗಳ ವಹಿಯ ನಿರ್ವಹಣೆ

8.1(ಅ) ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿನ ಸಾಲ ವಿತರಣೆ (ವೈ. ಎಂ. ಡಿ. ಹೊರತುಪಡಿಸಿದಂತೆ) ಹಾಗೂ ನೇರ ಸಾಲವನ್ನು ಕೇಂದ್ರ ಕಚೇರಿಯಲ್ಲಿ ಕೇಂದ್ರೀಕರಿಸಲಾಗಿದೆ. ಆದಾಗ್ಯೂ, ಲೆಡ್ಜರುಗಳು ಹಾಗೂ ಸಾಲಗಳ ವಸೂಲಾತಿ ದಾಖಲೆಗಳನ್ನು ಜಿಲ್ಲಾ ಕಚೇರಿಗಳಲ್ಲಿ ನಿರ್ವಹಿಸಲಾಗುತ್ತಿದೆ.

8.1(ಆ) ಹಣಕಾಸು ತ:ಖ್ತೆಗಳಿಗೆ ಆಧಾರವಾಗಿರುವ ಕ್ರೋಡೀಕೃತ ಸಾಲಗಳ ಲೆಡ್ಜರನ್ನು ಕೇಂದ್ರ ಕಚೇರಿಯಲ್ಲಿ ಎಕ್ಸೆಲ್ ನಮೂನೆಯಲ್ಲಿ ಫಲಾನುಭವಿವಾರು ಹಾಗೂ ವ್ಯವಹಾರವಾರು ವಿವರಗಳು ಹಾಗೂ ಮರುಪಾವತಿ, ವಾರ್ಷಿಕ ಆಧಾರದ ಮೇರೆಗೆ ಇತ್ಯಾದಿಗಳನ್ನು ದಾಖಲಿಸದೆಯೇ, ತಿಂಗಳಿನಲ್ಲಿ ವಿತರಿಸಲಾದಂತಹ ಒಟ್ಟಾರೆ ಸಾಲಗಳ ಮೊತ್ತದೊಂದಿಗೆ ನಿರ್ವಹಿಸಲಾಗಿದೆ. ಫಲಾನುಭವಿವಾರು ಹಾಗೂ ವ್ಯವಹಾರವಾರು ಸಾಲ ಲೆಡ್ಜರುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹಾಗೂ ಎಲ್ಲಾ ರೀತಿಯಲ್ಲಿಯೂ ಪೂರ್ಣಗೊಳಿಸಲು ಹಾಗೂ ಸಾಲಗಳ ಲೆಡ್ಜರಿನ ಶಿಲ್ಕನ್ನು ಲೆಕ್ಕಪತ್ರಗಳ ಜೊತೆ ಸಮನ್ವಯಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

8.1(ಇ) ಫಲಾನುಭವಿವಾರು ಹಾಗೂ ವ್ಯವಹಾರವಾರು ಸಾಲ ಲೆಡ್ಜರುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹಾಗೂ ಎಲ್ಲಾ ರೀತಿಯಲ್ಲಿಯೂ ಪೂರ್ಣಗೊಳಿಸಲು ಹಾಗೂ ಸಾಲಗಳ ಲೆಡ್ಜರಿನ ಶಿಲ್ಕನ್ನು ಲೆಕ್ಕಪತ್ರಗಳ ಜೊತೆ ಸಮನ್ವಯಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

8.1(ಈ) ಸಾಲ/ಅಂಚಿನ ಹಣ ಹಾಗೂ ಸಹಾಯಧನ ವಿತರಣೆಗಳು, ಜಿಲ್ಲಾ ಕಚೇರಿಗಳಿಂದ ಒದಗಿಸುವ ಜಮಾ–ಖರ್ಚು ತ:ಖ್ತೆಗಳಲ್ಲಿ ಒದಗಿಸಲಾಗಿರುವ ಅಸಲು ಮತ್ತು ಬಡ್ಡಿಯ ಕಡೆಗೆ ವಸೂಲಾತಿ ವಿವರಗಳನ್ನು ವಿಭಜಿಸಿ ಇಂದಿನದಿನದನ್ನಾಗಿ ಮಾಡಲಾದಂತಹ ಕ್ರೋಡೀಕೃತ ಸಾಲದ ಲೆಡ್ಜರನ್ನು ಕೇಂದ್ರ ಕಚೇರಿಯಲ್ಲಿ ಇಂದಿನದಿನದನ್ನಾಗಿ ಮಾಡಲಾಗುವುದು.

8.2 ಸಾಲಗಳಿಗೆ ಭದ್ರತೆ

ಫಲಾನುಭವಿಗಳಿಗೆ ನೀಡಲಾಗುವ ಸಾಲಗಳಿಗೆ ಸಂಬಂಧಿತ ಯೋಜನೆಗಳ ಅಡಿಯಲ್ಲಿ ನೀಡಲಾಗುವ ಹಣಕಾಸಿನ ಸಹಾಯಗಳಿಗೆ, ಅವುಗಳ ಮೂಲಕ ಸೃಷ್ಟಿಸಲಾಗುವ/ಸ್ವಾಧೀನಪಡಿಸಿಕೊಳ್ಳಲಾಗುವ ಆಸ್ತಿಗಳನ್ನು ಭದ್ರತೆಯಾಗಿ ಇಟ್ಟುಕೊಳ್ಳಲಾಗುವುದು. ಲಭ್ಯವಿರುವ ಭದ್ರತೆ, ಪ್ರಸ್ತುತ ಮಾರುಕಟ್ಟೆ/ಗಳಿಸಬಹುದಾದ ಮೌಲ್ಯ ಅಲ್ಲದೇ ಭದ್ರತೆಯನ್ನು ಜಾರಿಗೊಳಿಸಬಹುದಾದಂತಹ ಸಾಧ್ಯತೆ, ಇವುಗಳ ಪ್ರಸಕ್ತ ಸ್ಥಿತಿಗತಿಗಳನ್ನು ಖಚಿತಪಡಿಸಿಕೊಳ್ಳುವುದು ಬಾಕಿ ಇರುವುದರಿಂದ ಎಲ್ಲಾ ಸಾಲಗಳನ್ನೂ ಭದ್ರತೆಯಿಂದ ಕೂಡಿದ ಸಾಲಗಳು ಎಂಬುದಾಗಿ ಪರಿಗಣಿಸಲಾಗಿದೆ.

8.3 ಸಾಲ ಸ್ವೀಕೃತಿ ಪತ್ರ ಹಾಗೂ ಬಾಕಿ ಉಳಿದಿರುವ ಸಾಲದ ಮೊತ್ತದ ಸ್ಥಿರೀಕರಣದ ಅನುಪಸ್ಥಿತಿ

ವಿವಿಧ ಯೋಜನೆಗಳ ಅಡಿಯಲ್ಲಿ ಸಾಲದ ಪತ್ರಗಳು ಮೂರು ವರ್ಷಗಳಿಗೂ ಮೀರಿದಂತೆ ಹಳೆಯದಾಗುವ ಮೊದಲು ಸಾಲವನ್ನು ಪಡೆದವರಿಂದ ಸಾಲದ ಮೊತ್ತದ ಸ್ವೀಕೃತಿ ಪತ್ರವನ್ನು ಪಡೆಯುವ ಹಾಗೂ ಬಾಕಿ ಉಳಿದಿರುವ ಸಾಲದ ಮೊತ್ತದ ಸ್ಥಿರೀಕರಣವನ್ನು ಪಡೆದುಕೊಳ್ಳುವ ಒಂದು ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಚಿಂತಿಸಲಾಗುತ್ತಿದೆ.

ಟಿಪ್ಪಣಿ ಸಂಖ್ಯೆ 9 ನಗದು ಹಾಗೂ ನಗದಿಗೆ ಸಮಾನವಾದವುಗಳು:

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ನಿಗಮದ ಕಚೇರಿಗಳಲ್ಲಿ ಇದ್ದಂತಹ ನಗದು	16,253	74
ಬ್ಯಾಂಕುಗಳಲ್ಲಿರುವ ಶಿಲ್ಕುಗಳು		
ಷೆಡ್ಯೂಲ್ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಗಳಲ್ಲಿರುವುದು – – ಕೇಂದ್ರ ಕಚೇರಿ	222,23,23,945	278,16,61,372
- ಜಿಲ್ಲಾ ಕಚೇರಿಗಳು	124,64,03,925	68,64,42,590
ಷೆಡ್ಯೂಲ್ ಬ್ಯಾಂಕುಗಳಲ್ಲಿ ನಿಶ್ಚಿತ ಅವಧಿ ಠೇವಣಿಗಳು – ಅಲ್ಪಾವಧಿ	381,99,00,000	191,54,75,000
ರವಾನೆಯಲ್ಲಿರುವ ಹಣಕಾಸು	42,22,75,550	18,11,88,911
	771,09,19,673	556,47,67,947

9.1 ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳ ಪ್ರಕಾರ ಕೇಂದ್ರ ಕಚೇರಿಯ ಲೆಕ್ಕಪತ್ರಗಳಿಗೆ ಹೋಲಿಸಿದಲ್ಲಿ, ಕೆಲವು ಜಿಲ್ಲಾ ಕಚೇರಿಗಳ ಬ್ಯಾಂಕು ಖಾತೆಗಳಲ್ಲಿ ಈ ಕೆಳಗಿನ ವ್ಯತ್ಯಯಗಳು ಕಂಡುಬಂದಿದ್ದು, ಅಗತ್ಯವಿರುವಂತೆ ಲೆಕ್ಕಗಳನ್ನು ಹೊಂದಾಣಿಕೆ ಮಾಡುವ ಮೂಲಕ ಸಮನ್ವಯಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

ವಿವರಗಳು	ಕೇಂದ್ರ ಕಚೇರಿಯ ಲೆಕ್ಕಪುಸ್ತಕಗಳ ಪ್ರಕಾರ	ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಯ ಪ್ರಕಾರ	ನಿವ್ವಳ ವ್ಯತ್ಯಾಸ
01.04.2017 ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕು	68,64,42,590	68,86,86,173	–22,43,583
31.03.2018 ರಲ್ಲಿದ್ದಂತೆ ಅಂತಿಮ ಶಿಲ್ಕು	124,64,03,925	117,07,47,050	7,56,56,876

ಟಿಪ್ಪಣಿ ಸಂಖ್ಯೆ 10: ಅಲ್ಪಾವಧಿ ಸಾಲಗಳು ಹಾಗೂ ಮುಂಗಡಗಳು

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
(i) ಭದ್ರತೆಯಿಂದ ಕೂಡಿರದ, ಆದರೆ ವಸೂಲಾತಿ ಸ್ಥಿತಿಯು ಉತ್ತಮವಾಗಿದೆ ಎಂಬುದಾಗಿ ಪರಿಗಣಿಸಲಾಗಿರುವ:	–	11,66,565
ಸಿಬ್ಬಂದಿಗೆ ಮುಂಗಡ	50,704	74,262
(ii) ಅನುಮಾನಾಸ್ಪದವಾಗಿರುವಂತಹ:		
ಶ್ರೀ ಜೇನುಕಲ್ ಬೋರ್‌ವೆಲ್ ಏಜನ್ಸಿ	–	–
	50,704	12,40,827

ಟಿಪ್ಪಣಿ ಸಂಖ್ಯೆ 11 : ಇತರೆ ಚಾಲ್ತಿ ಆಸ್ತಿಗಳು

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ನಿಶ್ಚಿತ ಅವಧಿ ಠೇವಣಿಗಳ ಮೇಲೆ ಸ್ವೀಕರಿಸಬೇಕಾಗಿರುವ ಬಡ್ಡಿ	13,77,54,735	8,14,67,648
ಮೂಲದಲ್ಲಿಯೇ ಕಡಿದುಕೊಂಡಿರುವ ತೆರಿಗೆಯನ್ನು ಮರುಪಾವತಿ ಪಡೆಯಬೇಕಿರುವುದು	25,70,394	49,54,856
ಇತರೆ ಸ್ವೀಕರಿಸಬೇಕಾಗಿರುವವುಗಳು	58,468	65,187
ರಾಯಚೂರಿನ ಜಿಲ್ಲಾ ಮ್ಯಾನೇಜರ್‌ರವರಿಂದ ಬರಬೇಕಾಗಿರುವುದು	7,10,77,596	7,10,77,596
ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬೇಕಾಗಿರುವವುಗಳು– ಅಸಲು ಮತ್ತು ಬಡ್ಡಿ	3,00,000	3,00,000
	21,17,61,193	15,78,65,287

11.1 ಇತರೆ ಸ್ವೀಕರಿಸಬೇಕಾದವುಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

ಎ). ರಾಯಚೂರು ಜಿಲ್ಲಾ ಕಛೇರಿಯಲ್ಲಿ ಹಣಕಾಸಿನ ವ್ಯವಹಾರಗಳಲ್ಲಿ ಕೆಲವು ನಿಯಮಬಾಹಿರತೆಗಳನ್ನು ಗಮನಿಸಲಾದ ಕಾರಣಗಳಿಂದ ಹಾಗೂ ಹಣಕಾಸಿನ ದುರುಪಯೋಗದ ಬಗ್ಗೆ ದೂರನ್ನು ಸ್ವೀಕರಿಸದ ಕಾರಣದಿಂದ ದಿನಾಂಕ: 01–04–2010 ರಿಂದ 17–06–2013 ರವರೆಗಿನ ಹಣಕಾಸು ವ್ಯವಹಾರಗಳ ಬಗ್ಗೆ ಆಂತರಿಕ ತಂಡವು ಗಮನಿಸಲಾದ ಅಂಶಗಳ ಆಧಾರದ ಮೇರೆಗೆ ನಿಗಮವು ಈ ವಿಷಯವನ್ನು ಗೌರವಾನ್ವಿತ ಲೋಕಾಯುಕ್ತರವರಿಗೆ ವಹಿಸಿತು, ಗೌರವಾನ್ವಿತ ಲೋಕಾಯುಕ್ತರವರು ಲೆಕ್ಕಪತ್ರಗಳ ಪುಸ್ತಕಗಳು ಹಾಗೂ ಇತರೆ ದಾಖಲೆಗಳನ್ನು ಮುಟಗೋಲು ಹಾಕಿಕೊಳ್ಳುವ ಮೂಲಕ ತನಿಕೆಯನ್ನು ಕೈಗೊಂಡರು. ಗೌರವಾನ್ವಿತ ಲೋಕಾಯುಕ್ತರವರ ತನಿಖೆಯ ಪೂರ್ಣಗೊಳ್ಳುವಿಕೆಯು ಹಾಗೂ ಅವರ ತನಿಖೆಯ ಫಲಿತಾಂಶವು ಬಾಕಿ ಇದ್ದು, ದಿನಾಂಕ: 01.04.2012 ರಲ್ಲಿದ್ದಂತೆ ರಾಯಚೂರು ಜಿಲ್ಲಾ ಕಛೇರಿಯ ಏಳು ಯೋಜನೆಗಳ ಬ್ಯಾಂಕು ಶಿಲ್ಕುಗಳನ್ನು ರೂ.6,95,29,473/–ರಷ್ಟು ಒಟ್ಟಾರೆ ಮೊತ್ತದ ಅವಧಿ ಮುಗಿದಿರುವ ಚೆಕ್‌ಗಳ ಕಡೆಗೆ ಹಾಗೂ 31.03.2013 ರಲ್ಲಿದ್ದಂತೆ ಜಿಲ್ಲಾ ಕಛೇರಿಯ ಸಂಗ್ರಹಣಾ ಖಾತೆಯಲ್ಲಿದ್ದ ರೂ.5,36,394/–ರಷ್ಟು ಶಿಲ್ಕಿನ ಕಡೆ ನಮೂದುಗಳನ್ನು ಹಿಂದೆ ಮುಂದೆ ಮಾಡುವ ಸಲುವಾಗಿ, ಈ ಮೊತ್ತಗಳನ್ನು ಶ್ರೀ ಗೋಪಾಲಪ್ಪ ಕಟ್ಟೀಮನಿ, ಜಿಲ್ಲಾ ವ್ಯವಸ್ಥಾಪಕರು, ರಾಯಚೂರು, ಇವರಿಂದ ವಸೂಲಾತಿ ಮಾಡಬೇಕಾಗಿರುವ ಮೊತ್ತ ಎಂಬುದಾಗಿ ತೋರಿಸಲಾಗಿದೆ. ಇದರಿಂದಾಗಿ ಹಣಕಾಸು ತ:ಖ್ತೆಗಳ ಮೇಲೆ ಆಗಬಹುದಾದ ಪರಿಣಾಮಗಳು ಯಾವುದಾದರೂ ಇದ್ದಲ್ಲಿ, ಈ ಹಂತದಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ ಹಾಗೂ ದುರುಪಂ ಯೋಗಪಡಿಸಿಕೊಳ್ಳಲಾಗಿರುವ ಮೊತ್ತ ಯಾವುದಾದರೂ ಇದ್ದಲ್ಲಿ ಅದರ ವಸೂಲಾತಿಗಾಗಿ ಮುಂದಿನ ಕ್ರಮವೂ ಸೇರಿದಂತೆ ಲೆಕ್ಕವನ್ನಿಡುವುದರಲ್ಲಿನ ಹೊಂದಾಣಿಕೆಗಳನ್ನು ತನಿಖಾ ವರದಿಯಲ್ಲಿ ಕಂಡುಬರುವ ಅಂಶಗಳ ಆಧಾರದ ಮೇರೆಗೆ ಮಾಡಬಹುದು.

ಬಿ). ರಾಯಚೂರು ಜಿಲ್ಲಾ ಕಛೇರಿಯಲ್ಲಿ 2014–15ರ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ರೂ.3.00 ಲಕ್ಷಗಳ ಮೊತ್ತದ ಅವ್ಯವಹಾರವು ಕಂಡುಬಂದಿದ್ದು, ಸದರಿ ವಿಷಯವಾಗಿ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ವೈ.ಎ.ಕಾಳೆ ಇವರ ವಿರುದ್ಧ ರಾಯಚೂರು ಜಿಲ್ಲಾ ಕಛೇರಿಯ ಅಧೀನಕ್ಕೆ ಬರುವ ಪೋಲೀಸ್ ಠಾಣೆಯಲ್ಲಿ ಅಪರಾದ ಮೊಕದ್ದಮೆಯನ್ನು ಹೂಡಿದ್ದು, ಸದರಿ ವಿಷಯವು ವಿಚಾರಣಾ ಹಂತದಲ್ಲಿರುತ್ತದೆ.

ಸಿ). ಹಣಕಾಸು ವರ್ಷ 2016–17ರ ಸಾಲಿನಲ್ಲಿ ಬೀದರ್ ಜಿಲ್ಲಾ ಕಛೇರಿಯಲ್ಲಿ ಮೈಕ್ರೊ ಕ್ರೆಡಿಟ್ ಯೋಜನೆಯಡಿ ರೂ.10,00,017.00 ಲಕ್ಷಗಳ ಮೊತ್ತದ ಅವ್ಯವಹಾರವು ಕಂಡುಬಂದಿದ್ದು, ಸದರಿ ವಿಷಯವಾಗಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ನಿವೃತ್ತ ಜಿಲ್ಲಾ ನ್ಯಾಯಾದೀಶರನ್ನು ನೇಮಿಸಲಾಗಿದ್ದು, ಸದರಿ ವಿಷಯವು ವಿಚಾರಣಾ ಹಂತದಲ್ಲಿರುತ್ತದೆ.

ಟಿಪ್ಪಣಿ ಸಂಖ್ಯೆ 12 ಕಾರ್ಯಾಚರಣೆಗಳಿಂದ ವರಮಾನ

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಫಲಾನುಭವಿಗಳಿಗೆ ನೀಡಲಾಗಿರುವ ಸಾಲಗಳ ಮೇಲಿನ ಬಡ್ಡಿ	4,20,05,399	2,24,28,215
	4,20,05,399	**2,24,28,215**

12.01 ವಿವಿಧ ಯೋಜನೆಗಳ ಅಡಿಯಲ್ಲಿ ಸಾಲದ ಅಸಲಿನ ಮರುಪಾವತಿಯಲ್ಲಿ ತಪ್ಪಿತಸ್ತರಾದಲ್ಲಿ ಸುಸ್ತಿ ಬಡ್ಡಿಯನ್ನು ವಿಧಿಸುವಂತೆ ಸಾಲದ ದಾಖಲೆಗಳು ನಿರ್ದಿಷ್ಟಪಡಿಸಿವೆಯಾದರೂ ಫಲಾನುಭವಿಗಳಿಗೆ ನೀಡಲಾಗುವ ಸಾಲಗಳ ಮೇಲೆ ಶೇಕಡ 6ರ ಸರಳ ಬಡ್ಡಿಯನ್ನು ಹಾಗೂ ಅಂಚಿನ ಹಣಕ್ಕೆ ಸಂಬಂಧಿಸಿದಂತೆ ಶೇಕಡಾ 4ರ ದರದಲ್ಲಿ ಸರಳ ಬಡ್ಡಿಯನ್ನು ವಿಧಿಸಲಾಗುತ್ತಿದೆ. ತೆರಿಗೆ ಪಾವತಿಯಲ್ಲಿ ತಪ್ಪಿತಸ್ತರಾದವರಿಗೆ ಸಂಬಂಧಿಸಿದಂತೆಯೂ ಸುಸ್ತಿ ಬಡ್ಡಿಯನ್ನು ವಿಧಿಸದ ಕಾರಣ, ಬಿಟ್ಟುಕೊಡಲಾಗಿರುವ ಬಡ್ಡಿಯನ್ನು ಖಚಿತಪಡಿಸಿಕೊಂಡಿಲ್ಲ.

ಟಿಪ್ಪಣಿ ಸಂಖ್ಯೆ : 13 ಇತರೆ ವರಮಾನ.

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ನಿಶ್ಚಿತಾವಧಿ ಠೇವಣಿಗಳು ಹಾಗೂ ಉಳಿತಾಯ ಖಾತೆಗಳ ಬಡ್ಡಿ	34,92,52,463	42,32,62,454
ಇತರೆ ವರಮಾನ	2,96,711	11,21,200
	34,95,49,174	**42,43,83,654**

13.1 ನಿಗಮವು ಆದಾಯ ತೆರಿಗೆ ವಿನಾಯಿತಿಯನ್ನು ಪಡೆದಿರುತ್ತದೆ. ಕೆಲವು ಬ್ಯಾಂಕುಗಳು ಬಡ್ಡಿಯ ಮೇಲೆ ತೆರಿಗೆಯನ್ನು ಕಡಿತಗೊಳಿಸುವುದಿಲ್ಲ, ಆದ್ದರಿಂದ 26 ಎಎಸ್ ಹೊಂದಾಣಿಕೆಯಾಗಿರುವುದಿಲ್ಲ.

ಟಿಪ್ಪಣಿ ಸಂಖ್ಯೆ : 14 ನಿರ್ದೇಶಕರುಗಳಿಗೆ ಸಂಭಾವನೆ.

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಅಧ್ಯಕ್ಷರ ಸಂಭಾವನೆ:		
ಗೌರವ ಧನ	4,40,000	3,82,968
ಮನೆ ಬಾಡಿಗೆ ಭತ್ಯೆ	2,75,000	2,39,354
ಪ್ರವಾಸ ಭತ್ಯೆ	73,883	1,55,926
ಇತರೆ ವೆಚ್ಚಗಳು	1,40,277	1,06,336
ವ್ಯವಸ್ಥಾಪಕ ನಿರ್ದೇಶಕರವರಿಗೆ ಸಂಭಾವನೆ:		
ಸಂಬಳ ಮತ್ತು ಭತ್ಯೆಗಳು	7,12,240	7,56,078
ಪಿಂಚಣಿ, ಗ್ರಾಚುಯಿಟಿ ಹಾಗೂ ರಜೆ ನಗದೀಕರಣಗಳು	–	78,158
ಪ್ರವಾಸ ಭತ್ಯೆ	1,07,055	–
	17,48,455	**17,18,820**

ಟಿಪ್ಪಣಿ ಸಂಖ್ಯೆ : 15 ಸಿಬ್ಬಂದಿ ವೆಚ್ಚ.

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಸಂಬಳ ಮತ್ತು ಭತ್ಯೆಗಳು	3,52,62,481	2,74,68,423
ಪಿಂಚಣಿ, ಗ್ರಾಚುಯಿಟಿ ಹಾಗೂ ರಜೆ ನಗದೀಕರಣಗಳು	21,47,627	35,02,747
ವೈದ್ಯಕೀಯ ವೆಚ್ಚಗಳ ಮರುಪಾವತಿ	68,030	17,349
ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚಗಳು	6,132	1,34,962
ಹೊರಗುತ್ತಿಗೆ ಆಧಾರದ ಸಿಬ್ಬಂದಿಗೆ ಆಡಳಿತಾತ್ಮಕ ವೆಚ್ಚಗಳು	1,23,19,832	1,56,81,311
	4,98,04,102	4,68,04,792

ಟಿಪ್ಪಣಿ ಸಂಖ್ಯೆ: 16 ಹಣಕಾಸಿಗೆ ಸಂಬಂಧಿತ ವೆಚ್ಚಗಳು.

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ರಾಷ್ಟ್ರೀಯ ಪರಿಶಿಷ್ಠ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನಿಯಮಿತದಿಂದ ಪಡೆದಿರುವ ಸಾಲಗಳ ಮೇಲಿನ ಬಡ್ಡಿ	1,59,43,027	2,32,55,620
ಕರ್ನಾಟಕ ಸರ್ಕಾರಕ್ಕೆ ಖಾತರಿ ಕಮಿಷನ್ನು	53,93,567	75,71,911
ಬ್ಯಾಂಕ್ ವೆಚ್ಚಗಳು	1,41,941	1,54,149
	2,14,78,535	3,09,81,680

ಟಿಪ್ಪಣಿ ಸಂಖ್ಯೆ 17 ಇತರೆ ವೆಚ್ಚಗಳು.

(ಮೊತ್ತ ರೂಪಾಯಿಗಳಲ್ಲಿ)

ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಜಾಹಿರಾತು ಹಾಗೂ ಅಧಿಸೂಚನೆಗಳ ವೆಚ್ಚಗಳು	28,02,343	34,24,892
ಸಭೆ ಸಮಾರಂಭಗಳ ವೆಚ್ಚಗಳು	–	3,89,780
ವಾರ್ಷಿಕ ನಿರ್ವಹಣಾ (ಎಎಂಸಿ) ವೆಚ್ಚಗಳು	2,85,738	2,31,667
ಲೆಕ್ಕಪರಿಶೋಧನಾ ಶುಲ್ಕ – ಶಾಸನಬದ್ಧ ಲೆಕ್ಕಪರಿಶೋಧನೆ	1,88,150	2,01,250
ಲೆಕ್ಕಪರಿಶೋಧನಾ ಶುಲ್ಕ – ಆಂತರೀಕ ಲೆಕ್ಕಪರಿಶೋಧನೆ	6,37,480	5,00,000
ದಸರಾ ಹಬ್ಬಕ್ಕೆ ಸಂಬಂಧಿತ ವೆಚ್ಚಗಳು	–	13,86,892
ಇತರೆ ವೆಚ್ಚಗಳು	1,10,676	3,94,357
ವಿದ್ಯುತ್ ಹಾಗೂ ನೀರಿನ ವೆಚ್ಚಗಳು	1,42,401	3,29,929
ಸಾಮಾನ್ಯ ವೆಚ್ಚಗಳು	10,53,033	–
ಕಾನೂನಾತ್ಮಕ ಹಾಗೂ ವೃತ್ತಿಪರರಿಗೆ ಮಾಡಲಾದ ಪಾವತಿಗಳು	4,43,525	4,43,064
ಸಭೆಗಳು ಹಾಗೂ ವಿಚಾರವಿನಿಮಯ ಅಧಿವೇಶನಗಳ ವೆಚ್ಚಗಳು	5,25,103	6,48,702
ದಿನಪತ್ರಿಕೆ ಮತ್ತು ನಿಯತಕಾಲಿಕಗಳು	3,600	–
ಕಚೇರಿ ನಿರ್ವಹಣೆ	9,00,971	8,88,583
ಅಂಚೆ ಮತ್ತು ಟೆಲಿಗ್ರಾಂಗಳು	9,02,878	9,42,129
ಮುದ್ರಣ ಮತ್ತು ಲೇಖನ ಸಾಮಗ್ರಿಗಳು	19,84,769	23,14,501
ಲೆಕ್ಕಪತ್ರಗಳ ತಯಾರಿಕೆಗೆ ಸಂಬಂಧಿತ ಸೇವೆಗಳು	–	4,37,000
ಕಟ್ಟಡ ಬಾಡಿಗೆ	58,65,931	64,43,432
ರಿಪೇರಿ ಮತ್ತು ನಿರ್ವಹಣೆ	55,099	1,083
ತರಬೇತಿ ವೆಚ್ಚಗಳು	16,03,030	–
ಪ್ರವಾಸ ಮತ್ತು ಸಾರಿಗೆ	23,73,780	4,38,564
ವಾಲ್ಮೀಕಿ ಜಯಂತಿ ವೆಚ್ಚಗಳು	2,26,593	4,68,798
ವಾಹನಗಳ ನಿರ್ವಹಣೆ	7,05,324	21,04,722
ವಾಹನಗಳ ಬಾಡಿಗೆ ವೆಚ್ಚ	21,51,702	42,22,154
ಆದಾಯ ತೆರಿಗೆ/ ಜಿ ಎಸ್ ಟಿ ವೆಚ್ಚಗಳು	27,15,517	7,72,359
ನಿರ್ದೇಶಕರ ಸಿಟ್ಟಿಂಗ್ ಭತ್ಯೆ	97,000	40,000
ಜಿಲ್ಲಾ ಕಛೇರಿಗಳ ಆಡಳಿತಾತ್ಮಕ ವೆಚ್ಚಗಳು	–	–
ವೆಬ್ ಸೈಟ್ ನಿರ್ವಹಣೆ	1,66,250	–
	2,59,40,893	**2,70,23,858**

ಟಿಪ್ಪಣಿ ಸಂಖ್ಯೆ: 18 ಪೂರ್ವಾವಧಿ ವೆಚ್ಚಗಳು.

ವಿವರ	31.03.2018 ರಲ್ಲಿದ್ದಂತೆ	31.03.2017ರಲ್ಲಿದ್ದಂತೆ
ಆದಾಯ:		
ಬ್ಯಾಂಕಿನ ಬಡ್ಡಿ	–	3,72,445
	–	**3,72,445**
ವೆಚ್ಚಗಳು:		
ನಿಶ್ಚಿತ ಅವಧಿ ಠೇವಣಿಗಳ ಮೇಲಿನ ಬಡ್ಡಿ	–	9,57,583
ಕಚೇರಿ ಬಾಡಿಗೆ	–	2,55,019
ಸಿಬ್ಬಂದಿ ವೆಚ್ಚ	–	6,39,491
ಆಂತರಿಕ ಲೆಕ್ಕಪರಿಶೋಧನಾ ಶುಲ್ಕ	–	1,09,441
ಇತರೆ ವೆಚ್ಚಗಳು	–	85,488
ಬ್ಯಾಂಕ್ ವೆಚ್ಚಗಳು	–	–
	–	**20,47,022**
ನಿವ್ವಳ ಆದಾಯ (ವೆಚ್ಚ)	–	(16,74,577)

ಟಿಪ್ಪಣಿ ಸಂಖ್ಯೆ 18:

18.01 ಹಣಕಾಸು ತ:ಖ್ತೆಗಳನ್ನು ಕಂಪನಿಗಳ ಅಧಿನಿಯಮ, 2013ರ ಪರಿಷ್ಕೃತ ಷೆಡ್ಯೂಲು IIIರ ಮೂಲಕ ನಿರ್ದಿಷ್ಟಪಡಿಸಲಾಗಿರುವ ನಮೂನೆಯಲ್ಲಿ ತಯಾರಿಸಲಾಗಿದೆ. ಹಿಂದಿನ ಸಾಲಿನ ಅಂಕಿಸಂಖ್ಯೆಗಳನ್ನು ಎಲ್ಲೆಲ್ಲಿ ಅಗತ್ಯವೋ ಅಂತಹ ಕಡೆ ಮಾಹಿತಿಯು ಲಭ್ಯವಿರುವಷ್ಟರ ಮಟ್ಟಿಗೆ ಹಾಗೂ ಪ್ರಸಕ್ತ ಸಾಲಿನ ವರ್ಗೀಕರಣವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪುನರ್–ಗುಂಪುಗಳನ್ನಾಗಿ ಮಾಡಲಾಗಿದೆ/ಪುನರ್–ವರ್ಗೀಕರಿಸಲಾಗಿದೆ.

18.02 ಅಂಕಣದಲ್ಲಿರುವ ಅಂಕಿಸಂಖ್ಯೆಗಳು ಹಿಂದಿನ ಸಾಲಿನವುಗಳನ್ನು ಪ್ರತಿನಿಧಿಸುತ್ತವೆ.

ಅನಿರೀಕ್ಷಿತ/ಆಕಸ್ಮಿಕ ಜವಾಬ್ದಾರಿಗಳು

18.03 ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತವು ತಮ್ಮ ಜಿಲ್ಲಾ ಕಚೇರಿಗಳ ಮೂಲಕ ನಿಗಮದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ 2007–08 ರಿಂದ 2012–13ರ ಅವಧಿಗೆ ನಿಗಮದ ವೆಚ್ಚಗಳ ಒಂದು ಭಾಗವಾಗಿ ರೂ.1433.00 ಲಕ್ಷ ಮೊತ್ತವನ್ನು ಪಾವತಿಸುವಂತೆ ಕೋರಿರುವುದು, ಅದರ ಬಗ್ಗೆ ನಿಗಮವು ಇನ್ನೂ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಎರಡೂ ನಿಗಮಗಳು ಸರ್ಕಾರಿ ಸ್ವಾಮ್ಯದ ನಿಗಮಗಳಾಗಿದ್ದು ಹಾಗೂ ಈ ಬಗ್ಗೆ ನಿರ್ಣಯವನ್ನು ಸರ್ಕಾರದ ಮಟ್ಟದಲ್ಲಿ ತೆಗೆದುಕೊಳ್ಳಬೇಕಾಗಿರುವುದರಿಂದ, ಈ ನಿಟ್ಟಿನಲ್ಲಿ ಯಾವುದೇ ಅನುವನ್ನೂ ಮಾಡುವ ಅಗತ್ಯತೆಯ ಬಗ್ಗೆ ನಿಗಮವು ಪರಿಗಣಿಸಲಿಲ್ಲ.

ಬಂಡವಾಳ ಲೆಕ್ಕದ ಅಡಿಯಲ್ಲಿ ಇರುವ ಬದ್ಧತೆಯನ್ನು ಅನುವು ಮಾಡದಿರುವುದು	–ಯಾವುದೂ ಇರುವುದಿಲ್ಲ–
ನಿಗಮದಿಂದ ಕೋರಲಾಗಿರುವ ಮೊತ್ತವನ್ನು ಸಾಲ ಎಂಬುದಾಗಿ ಒಪ್ಪಿಕೊಳ್ಳದಿರುವುದು	ರೂ.1433.00 ಲಕ್ಷ

18.04 ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆಯನ್ನು ಇಲಾಖೆಗೆ ಪಾವತಿಸುವಲ್ಲಿ ತಪ್ಪಿತಸ್ತಗೊಂಡಿರುವುದಕ್ಕೆ ಸಂಬಂಧಿಸಿದಂತೆ ರೂ.1,67,00,708.71/–ರಷ್ಟು ಮೊತ್ತವನ್ನು ಪಾವತಿಸುವ ಸಲುವಾಗಿ ಆದಾಯ ತೆರಿಗೆ ಇಲಾಖೆಯಿಂದ ಈ ಕೆಳಗಿನಂತೆ ತಗಾದೆ ನೋಟೀಸನ್ನು ಸ್ವೀಕರಿಸಲಾಗಿದೆ

ಕಡಿಮೆ ಪ್ರಮಾಣದಲ್ಲಿ ಪಾವತಿಸಿರುವುದು	: ರೂ. 24,65,274.48
ಕಡಿಮೆ ಪ್ರಮಾಣದಲ್ಲಿ ಕಡಿದುಕೊಂಡಿರುವುದು	: ರೂ. 97,54,884.23
ಪಾವತಿಗಳನ್ನು ಮಾಡುವಲ್ಲಿ ತಪ್ಪಿತಸ್ತಗೊಂಡಿರುವುದಕ್ಕೆ ಬಡಿ	: ರೂ. 26,76,796.00
ಕಡಿಮೆ ಪ್ರಮಾಣದಲ್ಲಿ ಕಡಿದುಕೊಂಡಿದ್ದಕ್ಕೆ ಬಡಿ	: ರೂ. 11,00,734.00
ಸಲ್ಲಿಕೆಯನ್ನು ವಿಳಂಬವಾಗಿ ಸಲ್ಲಿಸಿದ್ದಕ್ಕೆ ಶುಲ್ಕ	: ರೂ. 5,19,200.00
ಪರಿಚ್ಛೇದ 220ರ ಅಡಿಯಲ್ಲಿ ಬಡ್ಡಿ	: ರೂ. 1,83,820.00

ಇದರ ಬಗ್ಗೆ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಅನುವನ್ನು ಮಾಡಿರಲಿಲ್ಲ. ಈ ತಗಾದೆಯ ಮೊತ್ತಕ್ಕೆ ಸಂಬಂಧಿಸಿದಂತೆ ಇಲಾಖೆಯ ಜೊತೆ ಸಮನ್ವಯಗೊಳಿಸುವ ಅಗತ್ಯತೆಯಿರುತ್ತದೆ.

ಜಿಲ್ಲಾ ಕಚೇರಿಗಳಲ್ಲಿ ನಿರ್ವಹಿಸಲಾಗಿರುವ ಲೆಕ್ಕಪತ್ರಗಳ ಪುಸ್ತಕಗಳು ಹಾಗೂ ಸಾಲಗಳ/ಸಹಾಯಧನದ ದಾಖಲೆಗಳು

18.05. ಮೇ 2006ಕ್ಕೆ ನಿಗಮವನ್ನು ಸ್ಥಾಪಿಸುವ ಮೊದಲು, ಪರಿಶಿಷ್ಟ ಪಂಗಡಗಳ ಕ್ಷೇಮಾಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತವು ಕಾರ್ಯಗತಗೊಳಿಸುತ್ತಿತ್ತು. ನಿಗಮವನ್ನು ಒಂದು ಪ್ರತ್ಯೇಕ ಸಂಸ್ಥೆ ಎಂಬುದಾಗಿ ಸ್ಥಾಪನೆ ಮಾಡಿದ ನಂತರವೂ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ಅಧಿಕಾರಿಗಳು ನಿಗಮದ ಪರವಾಗಿ ಪರಿಶಿಷ್ಟ ಪಂಗಡಗಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಹಾಗೂ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದನ್ನು ಮುಂದುವರೆಸಿದರು, ಇದು, ನಿಗಮದ ಹೆಸರನ್ನು ಎಲ್ಲಾ ಹಳೆಯ ದಾಖಲೆಗಳಲ್ಲಿ ಸೇರಿಸಲು ಹಾಗೂ ಅಲ್ಲದೇ ಎಲ್ಲಾ ಲೆಕ್ಕ ಪುಸ್ತಕಗಳು, ದಾಖಲೆಗಳು ಹಾಗೂ ಸಾಲದ ಪತ್ರಗಳನ್ನು ನಿಗಮದ ಹೆಸರಿನಲ್ಲಿ ಇಂದಿನ ದಿನದನ್ನಾಗಿ ಮಾಡಲು/ನಿರ್ವಹಿಸಲು ಕ್ರಮಗಳನ್ನು ಪ್ರಾರಂಭಿಸಿದನಂತರವೂ, ಜಿಲ್ಲಾ ಕಚೇರಿಗಳು ರಶೀದಿ ಪುಸ್ತಕಗಳೂ ಸೇರಿದಂತೆ ಲೆಕ್ಕ ಪುಸ್ತಕಗಳು, ಸಾಲದ ಅರ್ಜಿಗಳು ಹಾಗೂ ಇತರೆ ದಾಖಲೆಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಹೆಸರಿನಲ್ಲಿ ಬಳಸಿಕೊಳ್ಳುವಲ್ಲಿ ಹಾಗೂ ಅಲ್ಲದೇ ಸಹಾಯಧನ, ಅಂಚಿನ ಹಣ ಹಾಗೂ ಸಾಲದ ವಿತರಣೆಗಾಗಿ ಫಲಾನುಭವಿಗಳಿಂದ ದಾಖಲೆಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹೆಸರಿನಲ್ಲಿ ಪಡೆದುಕೊಳ್ಳುವಲ್ಲಿ ಪರಿಣಮಿಸಿತು. ಹಳೆಯ ದಾಖಲೆಗಳಲ್ಲಿ ನಿಗಮದ ಹೆಸರನ್ನು ಸೇರಿಸಲು ಹಾಗೂ ಲೆಕ್ಕಪತ್ರಗಳು, ದಾಖಲೆಗಳು ಹಾಗೂ ಸಾಲದ ದಾಖಲೆಗಳನ್ನು ಇಂದಿನದಿನದನ್ನಾಗಿ ಮಾಡಲು/ನಿರ್ವಹಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

18.06. ಫಲಾನುಭವಿಗಳಿಂದ ಪಡೆದುಕೊಳ್ಳಲಾಗಿರುವ ಹಾಗೂ ಜಿಲ್ಲಾ ಕಚೇರಿಗಳಲ್ಲಿ ನಿರ್ವಹಿಸಲಾಗಿರುವ ಸಾಲದ ದಾಖಲೆಗಳು ಕೆಲವು ಅಂಶಗಳಿಂದ ಅಪೂರ್ಣವಾಗಿರುವುದು ಹಾಗೂ ಅಸಮರ್ಪಕವಾಗಿರುವುದು ಕಂಡು ಬಂದಿದ್ದು, ಸಾಲದ ದಾಖಲೆಗಳನ್ನು ಎಲ್ಲಾ ಅಂಶಗಳಿಗೂ ಸಂಬಂಧಿಸಿದಂತೆ ಇಂದಿನದಿನದನ್ನಾಗಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಜಿಲ್ಲಾ ಕಚೇರಿಗಳ ಹಣಕಾಸು ವ್ಯವಹಾರಗಳನ್ನು ಪ್ರಧಾನ ಕಚೇರಿಯ ಲೆಕ್ಕಪುಸ್ತಕಗಳಲ್ಲಿ ಅಳವಡಿಸಿಕೊಳ್ಳುವಿಕೆ

18.07. ಜಿಲ್ಲಾ ಕಚೇರಿಗಳು ಸ್ವತಂತ್ರ ಲೆಕ್ಕವನ್ನಿಡುವ ಸಂಸ್ಥೆಗಳಲ್ಲ. ಅವುಗಳು ಕೇವಲ ನಗದು ಪುಸ್ತಕವನ್ನು ಮಾತ್ರ ನಿರ್ವಹಿಸುತ್ತವೆ ಹಾಗೂ ಜಿಲ್ಲಾ ಕಚೇರಿಗಳಿಂದ ಸ್ವೀಕರಿಸಲಾದಂತಹ ಮಾಸಿಕ ಸ್ವೀಕೃತಿಗಳು ಮತ್ತು ಪಾವತಿಗಳ ತ:ಖ್ತೆಗಳನ್ನು ಪ್ರಧಾನ ಕಚೇರಿಯ ಲೆಕ್ಕಪುಸ್ತಕಗಳಲ್ಲಿ ಅವು ಯಾವ ಸ್ಥಿತಿಗತಿಯಲ್ಲಿರುವವೋ ಅದೇ ರೀತಿಯಲ್ಲಿ ಅಳವಡಿಸಿಕೊಳ್ಳಲಾಗುವುದು.

